
ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



ಸಂಪುಟ 12 | ಸಂಚಿಕೆ 13 | ಮಾರ್ಚ್ 26–ಏಪ್ರಿಲ್ 1, 2018 | ಪುಟ 16 | ರೂ.10/-

Web : www.janashakthi.co.in e-mail : janashakthi2007@gmail.com









ಮೂರ್ತಿ–ಧ್ವಂಸದ ರಾಜಕಾರಣವನ್ನು ಗುಹಾ ಏಕೆ ಸಮರ್ಥಿಸುತ್ತಿದ್ದಾರೆ?



ಲಿಂಗಾಯತ ಸ್ವತಂತ್ರ ಧರ್ಮ –ಮುಂದೇನು?

ದಲಿತರ ಮೇಲೆ ದೌರ್ಜನ್ಯ : ಕಾನೂನು ದುರ್ಬಲಗೊಳಿಸುವುದು ಬೇಡ





“ಉತ್ತರ–ದಕ್ಷಿಣ” ಅಲ್ಲ, ಒಕ್ಕೂಟವಾದದ ಪ್ರಶ್ನೆ



ಎಡಪಂಥೀಯರು ಸೈದ್ಧಾಂತಿಕ ಬೇಲಿ ಮುರಿಯಬೇಕು





ಸಂಸತ್ತಿನ ಎದುರು ಸಾವಿರಾರು ದಲಿತ ಕಾರ್ಯಕರ್ತರ ಮತಪ್ರದರ್ಶನ

ಪರಿಶಿಷ್ಟ ಜಾತಿ ಉಪಯೋಜನೆಯ ಪುನರುಜ್ಜೀವನ ಮತ್ತು ದಲಿತರ ಮೇಲಿನ ಆತ್ಯಾಚಾರಗಳಿಗೆ ತಡೆಗೆ ಆಗ್ರಹ

ಮಾರ್ಚ್ 21ರಂದು ದೇಶದ ಮೂಲೆ-ಮೂಲೆಗಳಿಂದ ಬಂದ ಸಾವಿರಾರು ದಲಿತ ಕಾರ್ಯಕರ್ತರು ಸಂಸತ್ತಿನ ಮುಂದೆ ಮತಪ್ರದರ್ಶನ ನಡೆಸಿದರು. ದಲಿತ ಶೋಷಣ ಮುಕ್ತಿ ಮಂಚ್ (ಡಿಎಸ್‌ಎಂಎಂ) ಇದಕ್ಕೆ ನೇತೃತ್ವ ನೀಡಿತ್ತು.

ಜಂತರ್ ಮಂತರ್‌ನಿಂದ ಹೊರಟ ಮೆರವಣಿಗೆ ಸಂಸತ್ ಮಾರ್ಗದಲ್ಲಿ ರ‍್ಯಾಲಿಯಾಗಿ ಪರಿವರ್ತನೆಗೊಂಡಿತು. ಡಿಎಸ್‌ಎಂಎಂ ಉಪಾಧ್ಯಕ್ಷ ಸ್ಯಾಮುವೆಲ್ ರಾಜ್ ಅಧ್ಯಕ್ಷತೆಯಲ್ಲಿ ನಡೆದ ಈ ರ‍್ಯಾಲಿಯನ್ನು ಉದ್ದೇಶಿಸಿ ಡಿಎಸ್‌ಎಂಎಂ ಪ್ರಧಾನ ಕಾರ್ಯದರ್ಶಿ, ರಾಮಚಂದ್ರ ಡೋಂಬ್, ಇನ್ನೊಬ್ಬರು ಉಪಾಧ್ಯಕ್ಷರಾದ ಹಾಗೂ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಸುಭಾಷಿಣಿ ಅಲಿ, ಡಿಎಸ್‌ಎಂಎಂ ದಿಲ್ಲಿ ಸಮಿತಿಯ ಕಾರ್ಯದರ್ಶಿ ನಾಥು ಪ್ರಸಾದ್ ಹಾಗೂ ಸಿಪಿಐ(ಎಂ) ಸಂಸತ್ ಸದಸ್ಯೆ ಪಿ.ಕೆ. ಶ್ರೀಮತಿ ಮಾತಾಡಿದರು.

ಮೋದಿ ಸರಕಾರ ಬಂದ ನಂತರ ಪರಿಶಿಷ್ಟ ಜಾತಿಗಳ ಕಲ್ಯಾಣಕ್ಕೆಂದು ಆರಂಭಿಸಿದ್ದ ಉಪಯೋಜನೆಯನ್ನು ಉಪೇಕ್ಷಿಸಲಾಗಿದೆ. ದಲಿತರ ಮೇಲೆ ಅತ್ಯಾಚಾರಗಳು ವಿಪರೀತವಾಗಿ ಹೆಚ್ಚಿವೆ, ಕಳೆದ ಹತ್ತು ವರ್ಷಗಳಲ್ಲಿ ವಿಶೇಷವಾಗಿ ದಲಿತ ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣಗಳು ದ್ವಿಗುಣ ಗೊಂಡಿವೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಮಂಡಳಿ(ಎಸ್‌ಸಿಆರ್‌ಬಿ)ಯ ಮಾಹಿತಿಗಳೇ ಹೇಳುತ್ತಿವೆ. ದೇಶದಲ್ಲಿ ಪ್ರತಿ ದಿನ ಆರು ದಲಿತ ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗುತ್ತಿದ್ದಾರೆ ಎಂದು ಸುಭಾಷಿಣಿ ಅಲಿ ಆತಂಕ ವ್ಯಕ್ತಪಡಿಸಿದರು. ಉತ್ತರಪ್ರದೇಶ

ಪುಟ 14 ಕ್ಕೆ

ದೌರ್ಜನ್ಯ ತಡೆ ಕಾಯ್ದೆಯನ್ನು ದುರ್ಬಲಗೊಳಿಸುವ ಸುಪ್ರಿಂ ಕೋರ್ಟ್ ಪೀಠದ ತೀರ್ಪು ತಕ್ಷಣ ಮರುವಿಮರ್ಶೆ ಅರ್ಜಿ ಸಲ್ಲಿಸಬೇಕು: ಸಿಪಿಐ(ಎಂ) ಪೊಲಿಟ್‌ಬ್ಯುರೊ

ನ್ಯಾಯಮೂರ್ತಿಗಳಾದ ಯು.ಯು.ಲಲಿತ್ ಮತ್ತು ಆದರ್ಶ್ ಗೋಯಲ್ ಇರುವ ಸುಪ್ರಿಂ ಕೋರ್ಟಿನ ಪೀಠ ದೌರ್ಜನ್ಯ ತಡೆ ಕಾಯ್ದೆ(ಪಿಒಎ) ಕುರಿತಂತೆ ನೀಡಿರುವ ತೀರ್ಪು ಈ ಕಾಯ್ದೆಯ ಅಂಶಗಳನ್ನು ದುರ್ಬಲಗೊಳಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ ತೀರ್ಪು ಜಾತಿ ದಮನ, ದಲಿತರ ಮೇಲೆ ಪ್ರತಿನಿತ್ಯ ನಡೆಸುತ್ತಿರುವ ಕಿರುಕುಳ ಮತ್ತು ದೌರ್ಜನ್ಯಗಳ ಸಾಮಾಜಿಕ ವಾಸ್ತವತೆಯನ್ನು ಉಪೇಕ್ಷಿಸಿದೆ. ಈ ಕಾಯ್ದೆಯ ಅಡಿಯಲ್ಲಿ ನಿರೀಕ್ಷಣಾ ಜಾಮೀನು ನೀಡಲು ಇದ್ದ ನಿರ್ಬಂಧಗಳನ್ನು ತೆಗೆದು ಮತ್ತು ಒಬ್ಬ ಸಾರ್ವಜನಿಕ ಸೇವಕನ ವಿಚಾರಣೆಯನ್ನು ಮೇಲಧಿಕಾರಿಗಳ ಅನುಮತಿ ದೊರೆತ ಮೇಲಷ್ಟೇ ನಡೆಸಬಹುದು ಎಂಬ ಶರತ್ತು ಹೇರಿ ಆರೋಪಿಗಳ ಬಂಧನ ಮತ್ತು ವಿಚಾರಣೆಯನ್ನು ಸುಮಾರಾಗಿ ಅಸಾಧ್ಯವೇ ಆಗುವಂತೆ ಮಾಡಿದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಕಾಯ್ದೆಯನ್ನು ದುರ್ಬಲಗೊಳಿಸುವ ಈ ಅಂಶಗಳ ಬಗ್ಗೆ ಕೇಂದ್ರ ಸರಕಾರದ ವಕೀಲರು ಸರಿಯಾಗಿ ಸ್ಪಂದಿಸದಿರುವುದು ಮತ್ತು ಆಕ್ಷೇಪಗಳನ್ನು ಎತ್ತದಿರುವುದು ದುರದೃಷ್ಟಕರ ಎಂದಿರುವ ಪೊಲಿಟ್‌ಬ್ಯುರೊ ಈ ತೀರ್ಪು ಉಂಟು ಮಾಡಿರುವ ಅನಾಹುತಗಳನ್ನು ಸರಿಪಡಿಸಲು ಕೇಂದ್ರ ಸರಕಾರ ತಕ್ಷಣವೇ ಕ್ರಮಗಳನ್ನು ಕೈಗೊಳ್ಳದಿದ್ದರೆ, ಸಾಮಾಜಿಕ ಸಮಾನತೆ ಬಯಸದ ಶಕ್ತಿಗಳಿಗೆ ದಲಿತರ ವಿರುದ್ಧ ಇನ್ನಷ್ಟು ಹಿಂಸಾಚಾರ ನಡೆಸಲು ಧೈರ್ಯ ತುಂಬುತ್ತದೆ ಎಂದು ಹೇಳಿದೆ.

ಸುಪ್ರಿಂ ಕೋರ್ಟ್ ಪೀಠದ ಪ್ರತಿಗಾಮಿ ತೀರ್ಪಿನ ವಿರುದ್ಧ ಮರು ವಿಮರ್ಶೆ ಅರ್ಜಿಯನ್ನು ತಕ್ಷಣವೇ ಹಾಕಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಸಾಮಾಜಿಕ ನ್ಯಾಯಕ್ಕೆ ಬಗೆವ ಅಪಚಾರ-ಡಿಎಸ್‌ಎಂಎಂ

ಸುಪ್ರಿಂ ಕೋರ್ಟ್ ದೌರ್ಜನ್ಯ ತಡೆ ಕಾಯ್ದೆ(ಪಿಒಎ)ಯ ಸೆಕ್ಷನ್ 18ನ್ನು ಅದರ ದುರುಪಯೋಗವಾಗುತ್ತಿದೆ ಎಂದು ಹೇಳುತ್ತ ತಿದ್ದುಪಡಿ ಮಾಡಿಡುವ ಮೂಲಕ ಈ ಕಾನೂನಿನ ಕಟ್ಟುನಿಟ್ಟಾದ ಅನುಷ್ಠಾನವನ್ನು ಗಮನಾರ್ಹ ರೀತಿಯಲ್ಲಿ ದುರ್ಬಲಗೊಳಿಸಿದೆ ಎಂದು ಮಾರ್ಚ್ 21-22ರಂದು ದಿಲ್ಲಿಯಲ್ಲಿ ಸಭೆ ಸೇರಿದ ದಲಿತ್ ಶೋಷಣ್ ಮುಕ್ತಿಮಂಚ್(ಡಿಎಸ್‌ಎಂಎಂ)ನ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಅಭಿಪ್ರಾಯ ಪಟ್ಟಿದೆ. ಇದು ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಒಂದು ಮೂಲ ನೀತಿಯಾದ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಮೇಲೆ ನಕಾರಾತ್ಮಕ ಪ್ರಭಾವ ಬೀರುತ್ತದೆ. ಭಾರತ ಸರಕಾರ ಕೂಡಲೇ ಈ ತೀರ್ಪಿನ ಮರುವಿಮರ್ಶೆಯ ಅರ್ಜಿಯನ್ನು ಹಾಕಿ, ಈ ಕಾನೂನು ಪರಿಣಾಮಕಾರಿಯಾಗಿರುವಂತೆ ಮಾಡಬೇಕು ಎಂದು ಡಿಎಸ್‌ಎಂಎಂ ಆಗ್ರಹಿಸಿದೆ.

ಪುಟ 14 ಕ್ಕೆ

ಮೇ 23: ಬಿಜೆಪಿ ಸರಕಾರದ ಸುಳ್ಳು ಆಶ್ವಾಸನೆಗಳ ವಿರುದ್ಧ ನೂರಕ್ಕೂ ಹೆಚ್ಚು ಸಂಘಟನೆಗಳ ಪ್ರತಿಭಟನೆ

ಜನ ಏಕತಾ ಜನ ಅಧಿಕಾರ್ ಆಂದೋಲನ್ (ಜೆಇಜೆಎಎ) ನೇತೃತ್ವದಲ್ಲಿ ದೇಶದ್ಯ ಕಾರ್ಮಿಕರು, ರೈತರು, ಬ್ಯಾಂಖ್, ವಿಮಾ ಮುತಾದ ವಲಯಗಳ ನೌಕರರು, ಸರಕಾರೀ ನೌಕರರು, ಅಧ್ಯಾಪಕರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು ಮುಂತಾದ ಎಲ್ಲ ಜನವಿಭಾಗಗಳನ್ನು ಪ್ರತಿನಿಧಿಸುವ ನೂರಕ್ಕೂ ಹೆಚ್ಚು ಸಂಘಟನೆಗಳು ಮೇ 23ರಂದು ಎಲ್ಲ ರಾಜ್ಯಗಳ ರಾಜಧಾನಿಗಳಲಲಿ ಪ್ರತಿಭಟನಾ ಮೆರವಣಿಗೆಗಳನ್ನು ನಡೆಸಲು ನಿರ್ಧರಿಸಲಾಗಿದೆ. ಆ ದಿನವನ್ನು ಆರಿಸಿಕೊಳ್ಳು ಕಾರಣ ಅಂದು ಮೋದಿ ನೇತೃತ್ವದ ಸರಕಾರ ನಾಲ್ಕು ವರ್ಷಗಳನ್ನು ಪೂರೈಸುತ್ತದೆ.

ವಾಣಿಜ್ಯ ಗಣಿಗಾರಿಕೆ ವಿರುದ್ಧ ಕಲ್ಲಿದ್ದಲು ಕಾರ್ಮಿಕರ ಮುಷ್ಕರ-ಎಪ್ರಿಲ್ 16

ಕೇಂದ್ರ ಸರಕಾರ ಕಲ್ಲಿದ್ದಲು ಗಣಿಗಳನ್ನು ಖಾಸಗಿ ವಾಣಿಜ್ಯ ಗಣಿಗಾರಿಕೆಗೆ ತೆರೆದು ಕೊಟ್ಟಿರುವುದನ್ನು ಪ್ರತಿಭಟಿಸಿ ಎಪ್ರಿಲ್ 16ರಂದು ಕಲ್ಲಿದ್ದಲು ಗಣಿಗಳಲ್ಲಿ ಮುಷ್ಕರ ನಡೆಸಲು ನಾಲ್ಕು ಕೇಂದ್ರೀಯ ಕಾರ್ಮಿಕ ಸಂಘಗಳು ನಿರ್ಧರಿಸಿವೆ. ಸಿಐಟಿಯು, ಎಐಟಿಯುಸಿ, ಹೆಚ್‌ಎಂಎಸ್ ಅಲ್ಲದೆ, ಸಂಘ ಪರಿವಾರಕ್ಕೆ ಸೇರಿದ ಬಿಎಂಎಸ್ ಕೂಡ ಇದರಲ್ಲಿ ಸೇರಿದೆ. ಐಎನ್‌ಟಿಯುಸಿ ಕೂಡ ವಾಣಿಜ್ಯ ಗಣಿಗಾರಿಕೆಯನ್ನು ವಿರೋಧಿಸುತ್ತಿದ್ದರೂ, ಅದಕ್ಕೆ ಸೇರಿದ ಸಂಘಟನೆ ಮುಷ್ಕರದಲ್ಲಿ ಭಾಗವಹಿಸಿವುದಿಲ್ಲ, ಬದಲಾಗಿ ಕಪ್ಪು ಬ್ಯಾಡ್ಜ್ ಧರಿಸಿ ಉತ್ಪಾದನೆಯನ್ನು ದ್ವಿಗುಣಗೊಳಿಸುತ್ತದಂತೆ..

ಈಗ ಮಂಜೂರಾಗಿರುವ ಕಲ್ಲಿದ್ದಲು ಗಣಿಗಳಲ್ಲದೆ ದೇಶಕ್ಕೆ ಹೊಸ ಗಣಿಗಳ ಅಗತ್ಯವೇನಿಲ್ಲ ಎಂದು ಸರಕಾರದ ದಸ್ತಾವೇಜು ಹೇಳುತ್ತಿದ್ದರೂ, ಕಾರ್ಮಿಕ ಸಂಘಟನೆಗಳ ಪ್ರತಿಭಟನೆಗಳಿಗೆ ಕಿವಿಗೊಡದೆ ಮೋದಿ ಸರಕಾರ ಖಾಸಗಿ ವಲಯಕ್ಕೆ ಕಲ್ಲಿದ್ದಲು ಗಣಿಗಳ ಹರಾಜು ವಿಧಾನಗಳನ್ನು ಅಂತಿಮಗೊಳಿಸಿದೆಯಂತೆ.

ಇದನ್ನು ಪ್ರತಿಭಟಿಸಿ ಕೋಲ್ ಇಂಡಿಯಾ ಲಿಮಿಟೆಡ್ (ಸಿಐಎಲ್) ಮತ್ತು ಸಿಂಗರೇಣಿ ಕಲ್ಲಿದ್ದಲು ಗಣಿ ಕಂಪನಿ(ಎಸ್‌ಸಿಸಿಎಲ್) ಒಟ್ಟು ಸುಮಾರು ಮೂರೂವರೆ ಲಕ್ಷ ಕಾರ್ಮಿಕರು ಈ ಮುಷ್ಕರದಲ್ಲಿ ಭಾಗವಹಿಸುವರು ಎನ್ನಲಾಗಿದೆ.

ಕಿಸಾನ್ ಲಾಂಗ್ ಮಾರ್ಚ್:ಮಹಾರಾಷ್ಟ್ರ ರೈತರಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿನಂದನೆ "ಮಹಾರಾಷ್ಟ್ರ ಸರಕಾರ ಈಗ ಮಾತಿನಂತೆ ನಡೆಯಬೇಕಾಗಿದೆ"

ಮಹಾರಾಷ್ಟ್ರದ ರೈತರು ಅರಣ್ಯ ಹಕ್ಕುಗಳ ಜಾರಿ, ಫಲದಾಯಕ ಬೆಲೆಗಳು, ಪೆನ್ಶನ್, ಸಾಲಗ್ರಸ್ತ ರೈತರ ಸಾಲ ಮನ್ನಾ ಮುಂತಾದ ತಮ್ಮ ಬೇಡಿಕೆಗಳಿಗಾಗಿ ನಡೆಸಿದ ಹೋರಾಟದಲ್ಲಿ ಗಳಿಸಿದ ಯಶಸ್ಸಿಗೆ ಅವರನ್ನು ಮಾರ್ಚ್ 16 ಮತ್ತು 17ರಂದು ಸಭೆ ಸೇರಿದ್ದ ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿನಂದಿಸಿದೆ.

ಅಖಿಲ ಭಾರತ ಕಿಸಾನ್ ಸಭಾದ ನೇತೃತ್ವದಲ್ಲಿ ಮಾರ್ಚ್ 6ರಂದು ನಾಶಿಕ್‌ನಲ್ಲಿ ಆರಂಭವಾಗಿ ಮುಂಬೈಯಲ್ಲಿ ಮಾರ್ಚ್ 12ರಂದು ಮುಕ್ತಾಯಗೊಂಡ ಕಿಸಾನ್ ಲಾಂಗ್ ಮಾರ್ಚ್ ಬಹುದೊಡ್ಡ ಗೆಲುವು ಸಾಧಿಸಿದೆ. 25,000 ರೈತರೊಂದಿಗೆ ಆರಂಭವಾದ ಈ ಲಾಂಗ್ ಮಾರ್ಚ್ ಆರು ದಿನಗಳ ನಂತರ ಮುಂಬೈ ತಲುಪುವಾಗ 50,000 ಕ್ಕೇರಿತ್ತು ಎಂದು ಪೊಲಿಟ್‌ಬ್ಯುರೊ ಪ್ರಶಂಸಿಸಿದೆ.

ಅದು ಮಹಾರಾಷ್ಟ್ರ ಸರಕಾರ ರೈತರ ಬೇಡಿಕೆಗಳನ್ನು ಒಪ್ಪುವ ಲಿಖಿತ ಆಶ್ವಾಸನೆಯನ್ನು ಕೊಡುವಂತೆ ಮಾಡಿದೆ. ಇದು ದೇಶವ್ಯಾಪಿ ಪ್ರಭಾವ ಬೀರಿದೆ. ಈಗ ಮಹಾರಾಷ್ಟ್ರ ಸರಕಾರ ತಾನಿತ್ತ ಆಶ್ವಾಸನೆಗಳನ್ನು ಸಮಯಬದ್ಧ ರೀತಿಯಲ್ಲಿ ಈಡೇರಿಸಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ ಲಾಂಗ್ ಮಾರ್ಚ್ ಗೆ ಮಹಾರಾಷ್ಟ್ರದ ಎಲ್ಲ ಜನವಿಭಾಗಗಳಿಂದ ಮತ್ತು ರಾಜಕೀಯ ಹಾಗೂ ಸಾಮಾಜಿಕ ಆಂದೋಲನಗಳಿಂದ ವ್ಯಾಪಕ ಬೆಂಬಲ ದೊರೆತಿರುವುದನ್ನು ಪೊಲಿಟ್‌ಬ್ಯುರೊ ಪ್ರಶಂಸಿಸಿದೆ

ತ್ರಿಪುರಾ ಚುನಾವಣೆಗಳಲ್ಲಿ ಅನಿರೀಕ್ಷಿತ ಫಲಿತಾಂಶ

ಇತ್ತೀಚೆಗೆ ಮುಗಿದಿರುವ ತ್ರಿಪುರಾ ವಿಧಾನಸಭಾ ಚುನಾವಣೆಗಳ ಬಗ್ಗೆ ಒಂದು ಆರಂಭಿಕ ವರದಿಯನ್ನು ಪೊಲಿಟ್‌ಬ್ಯುರೊ ಆಲಿಸಿತು. ಈ ಫಲಿತಾಂಶಗಳು ಅನಿರೀಕ್ಷಿತವಾಗಿದ್ದವು. ಏಕೆಂದರೆ ಎಡರಂಗ ಸರಕಾರ ತನ್ನ ಅಧಿಕಾರಾವಧಿಯಲ್ಲಿ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ಮತ್ತು ಶಾಂತಿ ಹಾಗೂ ಅನ್ಯೋನ್ಯತೆಯ ವಾತಾವರಣವನ್ನು ಬಲಪಡಿಸುವಲ್ಲಿ ತನ್ನ ಕೈಲಾದ್ದನ್ನೆಲ್ಲ ಮಾಡಿದೆ. ಆದರೆ ಸೀಮಿತ ಸಂಪನ್ಮೂಲಗಳಿಂದಾಗಿ ಎಡರಂಗಕ್ಕೆ ಜನಗಳಲ್ಲಿ ಹೆಚ್ಚುತ್ತಿರುವ ನಿರೀಕ್ಷೆಗಳನ್ನು ಈಡೇರಿಸಲಾಗಿಲ್ಲ. ಐಪಿಎಫ್‌ಟಿ ಈ ಚುನಾವಣೆಯಲ್ಲಿ ವಿಜಯ ಪ್ರತ್ಯೇಕ ತ್ರಿಪ್ರಲ್ಯಾಂಡ್ ಬುಡಕಟ್ಟು ರಾಜ್ಯದ ರಚನೆಗೆ ದಾರಿ ಮಾಡಿಕೊಡುತ್ತದೆ ಎಂದು ಪ್ರಚಾರ ಮಾಡಿತ್ತು. ಬಿಜೆಪಿ- ಐಪಿಎಫ್‌ಟಿ ಕೂಟಕ್ಕೆ ಇದನ್ನು ಸರಕಾರವನ್ನು ಬದಲಿಸಿ ಎಂಬ ತಮ್ಮ ಘೋಷಣೆಯೊಂದಿಗೆ ಕುಶಲತೆಯಿಂದ ಬಳಸಲು ಸಾಧ್ಯವಾಯಿತು ಎಂದು ಪೊಲಿಟ್‌ಬ್ಯುರೊ ವಿಶ್ಲೇಷಿಸಿದೆ.

ಇದಷ್ಟೇ ಅಲ್ಲ, ಬಿಜೆಪಿ ಅಪಾರ ಪ್ರಮಾಣದಲ್ಲಿ ಹಣವನ್ನು ಸುರಿದಿದೆ ಮತ್ತು ಚುನಾವಣೆಗಳ ಮೇಲೆ ಪ್ರಭಾವ ಬೀರಲು ಬೇರೆ ಸಂಪನ್ಮೂಲಗಳನ್ನೂ ಬಳಸಿಕೊಂಡಿದೆ. ಅಂತಿಮವಾಗಿ, ಹಿಂದೆ ಕಾಂಗ್ರೆಸ್ ಗಳಿಸಿದ್ದ ಸುಮಾರಾಗಿ ಎಲ್ಲ ಮತಗಳನ್ನೂ ತನ್ನದಾಗಿಸಿಕೊಂಡು ಎಲ್ಲ ಡ-ವಿರೋಧಿ ಮತಗಳನ್ನು ಕ್ರೋಡೀಕರಿಸಲು ಬಿಜೆಪಿಗೆ ಸಾಧ್ಯವಾಗಿರುವುದೇ ಎಡರಂಗಕ್ಕೆ ಹಿನ್ನಡೆಯಾಗುವಂತೆ ಮಾಡಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಆದರೂ ಎಡರಂಗಕ್ಕೆ 45% ಮತಗಳು ಸಿಕ್ಕಿವೆ, ಬಿಜೆಪಿ-ಐಪಿಎಫ್‌ಟಿ ಪಡೆದಿರುವುದು 50.5ಶೇ. ಎಂದೂ ಅದು ಗಮನಿಸಿದೆ.

ಮತದಾನದ ನಂತರ ಬಿಜೆಪಿ ರಾಜ್ಯದಲ್ಲಿ ನಡೆಸಿರುವ ಹಿಂಸಾಚಾರವನ್ನು ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ಪಕ್ಷದದ 750ಕ್ಕೂ ಹೆಚ್ಚು ಕಚೇರಿಗಳ ಮೇಲ ದಾಳಿನಡೆದಿದೆ, ಅವುಗಳಲ್ಲಿ ಹೆಚ್ಚಿನವುಗಳನ್ನು ಸುಟ್ಟು ಹಾಕಲಾಗಿದೆ. 742 ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರ ಮೇಲೆ ವೈಯಕ್ತಿಕ ಹಲ್ಲೆಗಳು ನಡೆದಿವೆ, 1829 ಮನೆಗಳ ಮೇಲೆ ದಾಳಿ ಮಾಡಿ ಲೂಟಿ ಮಾಡಲಾಗಿದೆ ಮತ್ತು 217 ಮನೆಗಳಿಗೆ ಬೆಂಕಿ ಹಚ್ಚಲಾಗಿದೆ. ಪಕ್ಷದ ಸದಸ್ಯರು ಮತ್ತು ಬೆಂಬಲಿಗೆ 442 ಅಂಗಡಿಗಳನ್ನು ಸುಟ್ಟು ಹಾಕಲಾಗಿದೆ, 35 ರಬ್ಬರ್ ಪ್ಲಾಂಟೇಶನ್‌ಗಳ ಮೇಲೆ ದಾಳಿ ನಡೆದಿದೆ, ಮತ್ತು 230 ಮಂದಿಯಿಂದ ಹಣ ಕಿತ್ತುಕೊಳ್ಳಲಾಗಿದೆ ಎಂದಿರುವ ಪೊಲಿಟ್‌ಬ್ಯರೊ ಆರೆಸ್ಸೆಸ್/ಬಿಜೆಪಿಯಿಂದ ಇಂತಹ ದಾಳಿಗಳನ್ನು ಎದುರಿಸುತ್ತಿರುವ ತ್ರಿಪುರಾ ಸಂಗಾತಿಗಳೊಂದಿಗೆ ಸೌಹಾರ್ದ ವ್ಯಕ್ತಪಡಿಸಲು ಸಮಸ್ತ ಪಕ್ಷದ ಘಟಕಗಳು ಮತ್ತು ಕಾರ್ಯಕರ್ತರು ಎದ್ದು ನಿಲ್ಲಬೇಕು ಎಂದು ಕರೆ ನೀಡಿದೆ.

ಒಂದು ಸಕಾರಾತ್ಮಕ ಬೆಳವಣಿಗೆ –ಉಪಚುನಾವಣೆಗಳ ಫಲಿತಾಂಶ

ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಲೋಕಸಭೆಗೆ ನಡೆದ ಚುನಾವಣೆಗಳಲ್ಲಿ ಬಿಜೆಪಿಯ ಸಮಗ್ರ

ಪುಟ 7 ಕ್ಕೆ

ಸಂಪಾದಕೀಯ

‘ಉತ್ತರ-ದಕ್ಷಿಣ’ ಪ್ರಶ್ನೆ ಅಲ್ಲ ಒಕ್ಕೂಟವಾದದ ಮೇಲೆ ಪ್ರಹಾರ

ಚಾರಿತ್ರಿಕವಾಗಿ ದಕ್ಷಿಣ ಉತ್ತರವನ್ನು ಸಬ್ಸಿಡೈಸ್ ಮಾಡುತ್ತಿದೆ. ಕರ್ನಾಟಕ ಕೊಡುವ 1 ರೂ. ತೆರಿಗೆ ಬದಲು ಬರಿಯ 47 ಪೈಸೆ ವಿವಿಧ ರೂಪಗಳಲ್ಲಿ ಕೇಂದ್ರದಿಂದ ಬರುತ್ತದೆ. ಆದರೆ ಉತ್ತರ ಪ್ರದೇಶದ ಕೊಡುವ 1ರೂ. ಗೆ ರೂ. 1.79 ರಷ್ಟು ಪಡೆಯುತ್ತದೆ. ಕೇಂದ್ರದಿಂದ ಬರುವ ಸಂಪನ್ಮೂಲಗಳಿಗೆ ಜನಸಂಖ್ಯೆಯೇ ಮುಖ್ಯ ಆಧಾರವಾಗಿದೆ. ದಕ್ಷಿಣದ ರಾಜ್ಯಗಳ ಒಟ್ಟು ಜನಸಂಖ್ಯೆ ಏರಿಕೆ ತೀರಾ ಕಡಿಮೆ ಇದ್ದು, ಉತ್ತರದ ಇನ್ನೂ ಹೆಚ್ಚುತ್ತಿರುವ ಜನಸಂಖ್ಯೆಯನ್ನು ದಕ್ಷಿಣದ ರಾಜ್ಯಗಳು ಪೊರೆಯಬೇಕಾಗಿದೆ. ದಕ್ಷಿಣದ ರಾಜ್ಯಗಳಿಗೆ ಬೆಳವಣಿಗೆಗೆ ಜನಸಂಖ್ಯಾ ನಿಯಂತ್ರಣಕ್ಕಾಗಿ ಶಿಕ್ಷೆಯಾಗುತ್ತಿದೆ. ಉತ್ತರದ ರಾಜ್ಯಗಳಲ್ಲಿ ಇವುಗಳ ಅಭಾವಕ್ಕೆ ಪುರಸ್ಕಾರ ದೊರಕುತ್ತಿದೆ. – ಹೀಗೆಂದು ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಫೇಸ್ ಬುಕ್ಕಿನಲ್ಲಿ ಪ್ರಕಟಿಸಿದ “ಪ್ರಾದೇಶಿಕ ಅಸ್ಮಿತೆ ಮತ್ತು ಒಕ್ಕೂಟವಾದ” ಎಂಬ ಟಿಪ್ಪಣಿಯಲ್ಲಿ ಹೇಳಿದ್ದಾರೆ.

ಅದೇ ಟಿಪ್ಪಣಿಯಲ್ಲಿ ಭಾರತ ಸ್ವತಂತ್ರವಾದಾಗ ರಾಜ್ಯಗಳ ಕೂಟವಾಗಿದ್ದು, 70 ವರ್ಷಗಳ ಬೆಳಕಿನಲ್ಲಿ ಒಂದು ಒಕ್ಕೂಟವಾಗುವತ್ತ ವಿಕಾಸವಾಗುತ್ತಿದೆ. ಸಫ್ತಾ ಒಪ್ಪಂದದಿಂದಾಗಿ ಕರ್ನಾಟಕ-ಕೇರಳದ ಮೆಣಸು ರಫ್ತಿನ ಮೇಲೆ ತೀವ್ರ ದುಷ್ಪರಿಣಾಮದತ್ತ ಅವರು ಗಮನ ಸೆಳೆಯುತ್ತಾ, ರಾಜ್ಯಗಳಿಗೆ ಕೇಂದ್ರದ ಆರ್ಥಿಕ ನೀತಿ ಮತ್ತು ಅಂತರ‍್ರಾಷ್ಟ್ರೀಯ ವ್ಯಾಪಾರ ಒಪ್ಪಂದ ಪಾತ್ರ ಇರಬೇಕು. ಕೃಷಿ ಮತ್ತು ವ್ಯಾಪಾರ ಸಂಬಂಧಿ ನೀತಿಗಳನ್ನು ನಿರ್ಧರಿಸಲಿಕ್ಕೆ ನೀತಿ ಆಯೋಗ ಕಳಚಿ ಹಾಕಿರುವ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ”(ಎನ್.ಡಿ.ಸಿ.) ಯಂತಹ ಸಂಘಟನೆ ಅಗತ್ಯವಿದೆ, ಎಂದಿದ್ದಾರೆ. ಸರಕಾರ ಶಿಫಾರಸು ನೀಡಿರುವ ರಾಜ್ಯದ ಅಧಿಕೃತ ಧ್ವಜದ ಯೋಜನೆಯನ್ನು ಸಮರ್ಥಿಸುತ್ತಾ, ಪ್ರಾದೇಶಿಕ ನುಡಿ-ನಾಡುಗಳ ಅಸ್ಮಿತೆಯ ರಕ್ಷಣೆ ಮತ್ತು ಅದರ ಪ್ರತೀಕಗಳು ಯಾವುದೇ ರೀತಿಯಲ್ಲಿ ದೇಶದ ಐಕ್ಯತೆ ಸಮಗ್ರತೆಗೆ ಧಕ್ಕೆ ತರಬೇಕಾಗಿಲ್ಲ ಎಂದು ವಾದಿಸಿದ್ದಾರೆ.

ಸಿದ್ಧರಾಮಯ್ಯನವರ ಟಿಪ್ಪಣಿಯ “ಉತ್ತರ-ದಕ್ಷಿಣ” ಪ್ರಶ್ನೆ ಮತ್ತು ಧ್ವಜದ ಪ್ರಶ್ನೆ ಎತ್ತಿಕೊಂಡು ದೇಶದ ಬಿಜೆಪಿಯ ಬಾಲಬಡುಕ ಮಾಧ್ಯಮಗಳು ನಿರೀಕ್ಷಿತ ರೀತಿಯಲ್ಲಿ ಗದ್ದಲ ಮಾಡಿವೆ. ಭಾರತದಂತಹ ದೊಡ್ಡ ದೇಶಗಳಲ್ಲಿ ಚಾರಿತ್ರಿಕವಾಗಿ ಸ್ವಾಭಾವಿಕವಾಗಿ ಇರುವ ಪ್ರಾದೇಶಿಕ ಅಸಮಾನತೆಯನ್ನು ಗಣನೆಗೆ ತೆಗೆದುಕೊಳ್ಳುವ ಆರ್ಥಿಕ ನೀತಿಯನ್ನು ಪ್ರಶ್ನಿಸುವುದು ಸಲ್ಲದು. ಅದೇ ವಾದವನ್ನು ಕರ್ನಾಟಕದ ವಿವಿಧ ಪ್ರದೇಶಗಳಿಗೆ ಅನ್ವಯಿಸಿ, ಹೈದರಾಬಾದ್ ಕರ್ನಾಟಕ ದಕ್ಷಿಣ ಕರ್ನಾಟದ ಮೇಲೆ ಹೊರೆಯಾಗಿದೆ ಎಂದು ಹೇಳಿದರೆ ಸಿದ್ಧರಾಮಯ್ಯನವರು ಅದನ್ನು ಒಪ್ಪುತ್ತಾರೆಯೇ? ಆದರೆ ರಾಜ್ಯಗಳಿಗೆ ಕೇಂದ್ರದ ಆರ್ಥಿಕ ನೀತಿ ಮತ್ತು ಅಂತರ‍್ರಾಷ್ಟ್ರೀಯ ವ್ಯಾಪಾರ ಒಪ್ಪಂದದ ಸ್ವರೂಪದ ನಿರ್ಧಾರದಲ್ಲಿ ಪಾತ್ರ ಇರಬೇಕು ಎಂದು ಅವರು ಹೇಳಿರುವುದನ್ನು ಮಾಧ್ಯಮಗಳಲ್ಲಿ ಪಕ್ಕಕ್ಕೆ ತಳ್ಳಲಾಗಿದೆ.

ಇದನ್ನು “ಉತ್ತರ-ದಕ್ಷಿಣ” ಪ್ರಶ್ನೆಯಾಗಿಸುವುದರ ಬದಲು ಒಕ್ಕೂಟವಾದದ ಮೇಲೆ ಪ್ರಹಾರದ ಕೇಂದ್ರದ ನೀತಿಗಳನ್ನು ಪ್ರಶ್ನಿಸುವುದರ ಮೇಲೆ ಸಿದ್ದರಾಮಯ್ಯನವರ ಟಿಪ್ಪಣಿ ಒತ್ತು ಕೊಟ್ಟಿದ್ದರೆ ಚರ್ಚೆ ಸರಿಯಾದ ದಿಕ್ಕು ಹಿಡಿಯುತ್ತಿತ್ತೋ ಏನೋ. ಆದರೆ ಅದು ಅವರ ಉದ್ದೇಶವಾಗಿತ್ತೇ? ಸಿದ್ದರಾಮಯ್ಯನವರು ಎತ್ತಿರುವ ಪ್ರಶ್ನೆಗಳ ಬಗ್ಗೆ ಅವರು ಮತ್ತು ಅವರ ಪಕ್ಷ ಕಾಂಗ್ರೆಸ್ ಪ್ರಾಮಾಣಿಕವಾಗಿದೆಯೇ? ಚಾರಿತ್ರಿಕವಾಗಿ ಇದ್ದ ಅಸಮಾನತೆ ಸ್ವಾತಂತ್ರ್ಯ ನಂತರ ಬಂಡವಾಳಶಾಹಿ ಧೋರಣೆಗಳಿಂದ ಇನ್ನಷ್ಟು ಹೆಚ್ಚಿದೆ. ಉತ್ತರದ ರಾಜ್ಯಗಳ ಹಿಂದುಳಿದಿರುವಿಕೆ ಅಲ್ಲಿ ಸಮಗ್ರ ಭೂಸುಧಾರಣೆ ಜಾರಿ ಮಾಡುವ ಮೂಲಕ ಪಾಳೆಯಗಾರಿ ಪದ್ಧತಿಯ ಗೋಣು ಮುರಿಯದ್ದರ ಫಲ. ಈ ಎರಡಕ್ಕೂ ಪ್ರಧಾನ ಹೊಣೆಯನ್ನೂ ಕಾಂಗ್ರೆಸ್ ಹೊರಬೇಕು. ಮಾತೃಭಾಷೆಯಲ್ಲಿ ಶಿಕ್ಷಣ, ರಾಜ್ಯಭಾಷೆಯಲ್ಲಿ ಆಡಳಿತಗಳನ್ನು ದಶಕಗಳ ನಂತರವೂ ಜಾರಿ ಮಾಡದಿರುವುದು, ಹಿಂದಿಯ ಹೇರಿಕೆ, ಮತ್ತು ರಾಜ್ಯಗಳ ಸಂವಿಧಾನ ಬದ್ಧ ಹಕ್ಕುಗಳ ಮೇಲೆ ಪ್ರಹಾರದ ನೀತಿಗಳು ಕಾಂಗ್ರೆಸ್ ದಶಕಗಳ ಆಡಳಿತ ಮತ್ತು ನೀತಿಗಳ ಫಲವೇ. ಅದರಲ್ಲೂ ಕಾಂಗ್ರೆಸ್ಸೇತರ ಸರಕಾರಗಳಿಗೆ ರಾಜ್ಯಪಾಲರನ್ನು ಬಳಸಿ ರಾಜಕೀಯವಾಗಿ, ಆರ್ಥಿಕ ಸಂಪನ್ಮೂಲಗಳ ಕಡಿತ ಮಾಡುವುದರ ಮೂಲಕ ಕಿರುಕುಳ ಕೊಡುವುದು, ಸಾಧ್ಯವಾದಾಗ ವಜಾ ಮಾಡುವುದು – ಇವೆಲ್ಲಾ ಕಾಂಗ್ರೆಸ್ ದೇಶದಲ್ಲಿ ಹಾಕಿಕೊಟ್ಟ ಒಕ್ಕೂಟವಾದದ “ಮೆಲ್ಪಂಕ್ತಿ”ಯ ಫಲಗಳೇ. ಪಕ್ಷದೊಳಗೂ ಅತಿ ಕೇಂದ್ರೀಕರಣದ “ಹೈ ಕಮಾಂಡ್ ಸಂಸ್ಕೃತಿ” ಇನ್ನೂ ಕಾಂಗ್ರೆಸಿನಲ್ಲಿ ಬೇರೂರಿದೆ.

ವಿಪರೀತ ರಾಜಕೀಯ-ಆರ್ಥಿಕ ಕೇಂದ್ರೀಕರಣಗಳನ್ನು 1990ರ ನವ-ಉದಾರವಾದಿ ನೀತಿಗಳ ಮೂಲಕ ಇನ್ನೂ ಮೇಲಿನ ಹಂತಕ್ಕೆ ಒಯ್ದದ್ದು ಸಹ ಕಾಂಗ್ರೆಸ್ಸೇ. ಆರ್ಥಿಕ ಮತ್ತು ವ್ಯಾಪಾರಿ ನೀತಿಗಳನ್ನು ನಿರ್ಧರಿಸುವ ಹಕ್ಕನ್ನು ರಾಜ್ಯ-ಕೇಂದ್ರ ಸರಕಾರಗಳಿಂದ ಜನತೆಯಿಂದ ಕಸಿದು, ವಿಶ್ವಬ್ಯಾಂಕ್-ಐಎಂಎಫ್-ಡಬ್ಲ್ಯೂ.ಟಿ.ಒ.ಯ ಜಾಗತಿಕ ತ್ರಿವಳಿಗಳಿಗೆ ಶರಣಾಗಿಸಿದ್ದು ಸಹ ಕಾಂಗ್ರೆಸ್ಸೇ. ರಾಜ್ಯಗಳ ಆರ್ಥಿಕ ಅಧಿಕಾರಗಳು ಮತ್ತು ಒಕ್ಕೂಟವಾದದ ಮೇಲೆ ಇತ್ತೀಚಿನ ಅತಿ ದೊಡ್ಡ ಪ್ರಹಾರವಾದ ಜಿ.ಸ್.ಟಿ.ಯನ್ನು ತಂದಿದ್ದು ಸಹ ಕಾಂಗ್ರೆಸ್ಸೇ. ಹೌದು ಬಿಜೆಪಿ ಇವೆಲ್ಲವನ್ನೂ ಇನ್ನಷ್ಟು ತೀವ್ರ ಮತ್ತು ಅಪಾಯಕಾರಿ ರೀತಿಯಲ್ಲಿ ಮುಂದೊಯ್ಯುತ್ತಿದೆ. ಒಂದೇ ತೆರಿಗೆ ಒಂದೇ ಭಾಷೆಗಳಿಗೆ, ಒಂದೇ ಧರ್ಮ ಸೇರಿಸಿ ಬಿಜೆಪಿಯ ಆಕ್ರಾಮಕಾರಿ ಧೋರಣೆಗಳಿಗೆ ಪ್ರತಿಯಾಗಿ, ರಾಜ್ಯಗಳ ಸ್ವಾಯತ್ತತೆ, ರಾಜಕೀಯ-ಆರ್ಥಿಕ ಅಧಿಕಾರಗಳ ಮೇಲೆ ದಾಳಿ, ನಾಡು-ನುಡಿಗಳ ಅಸ್ಮಿತೆಯ ವಿಷಯಗಳನ್ನು ಚರ್ಚೆಗೆ ಹಚ್ಚಿದ್ದು ಸರಿಯಾಗಿಯೇ ಇದೆ. ಆದರೆ ಇದು ಒಕ್ಕೂಟವಾದದ ಮೇಲೆ ಪ್ರಹಾರ ಮಾಡಿದ ನವ-ಉದಾರವಾದಿ ಮತ್ತು ಅತಿ ಕೇಂದ್ರೀಕರಣದ ನೀತಿಗಳನ್ನು ಸಾರಾಸಗಟಾಗಿ ಬದಲಾಯಿಸುವುದರಿಂದ ಮಾತ್ರ ಕಾರ್ಯಸಾಧ್ಯ. ಇದಕ್ಕೆ ಸಿದ್ಧರಾಮಯ್ಯ ಮತ್ತು ಕಾಂಗ್ರೆಸ್ ಸಿದ್ಧವಿದೆಯೇ? ಅಥವಾ ಇದು ಬರಿಯ ಚುನಾವಣಾ ತಂತ್ರವೇ? ಏಕೆಂದರೆ ಕರ್ನಾಟಕ ಸರಕಾರ ಕಳೆದ 5 ವರ್ಷಗಳಲ್ಲಿ ಪ್ರಾಯೋಗಿಕವಾಗಿ ಯುಪಿಎ ಅಥವಾ ಎನ್.ಡಿ.ಎ. ಕೇಂದ್ರ ಸರಕಾರಗಳ ರೇಗಾ, ರೇಶನ್, ಆರೋಗ್ಯ-ಶಿಕ್ಷಣದ ಸ್ಕೀಮುಗಳಿಗೆ ಅನುದಾನ ಕಡಿತ, ಭಾಷಾ ಹೇರಿಕೆಗಳ ಅಥವಾ ಜಿ.ಎಸ್.ಟಿ. ಬಗ್ಗೆ ತೀವ್ರ ವಿರೋಧ ಮಾಡಿದ್ದು ಪ್ರತಿಭಟಿಸಿದ್ದು ಕಂಡು ಬರುವುದಿಲ್ಲ.

ಆದ್ದರಿಂದಲೇ ಈ ಚರ್ಚೆ ಉತ್ತರ-ದಕ್ಷಿಣ ಪ್ರಶ್ನೆಯಾಗಿದ್ದು ಅವರನ್ನು ಆತಂಕಗೊಳಿಸಿಲ್ಲ. ಬಿಜೆಪಿಯನ್ನು ಅದರ ಒಂದೇ ತೆರಿಗೆ-ಒಂದೇ ಭಾಷೆ-ಒಂದೇ ಧರ್ಮದ ನೀತಿಯ ಮೇಲೆ ರಾಜಕೀಯ ದಾಳಿಗೆ ಗುರಿಪಡಿಸುವ ಮತ್ತು ಜೆಡಿ-ಎಸ್ ಪ್ರಾದೇಶಿಕ ಭಾವನೆ ಬಳಸುವುದನ್ನು ತಟಸ್ಥಗೊಳಿಸುವ ಸೀಮಿತ ಉದ್ದೇಶ ಮಾತ್ರ ಅವರಿಗಿದ್ದ ಹಾಗಿದೆ. ಅವರು ಚರ್ಚೆ ಎಬ್ಬಿಸಿದ ರೀತಿ ಸಹ ಬಹುಶಃ ಅದಕ್ಕೆ ಪೂರಕವಾಗಿಯೇ ಆಗಿತ್ತು.

ಲಿಂಗಾಯತ ಸ್ವತಂತ್ರ ಧರ್ಮ: ಮುಂದೇನು?

ಎಸ್.ವೈ. ಗುರುಶಾಂತ್

ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮ ಎಂದು ಅಂಗೀಕಾರ ನೀಡಿದ ಕರ್ನಾಟಕ ಸರ್ಕಾರದ ಸಚಿವ ಸಂಪುಟ ಕೈಗೊಂಡ ನಿರ್ಣಯ (2018 ಮಾರ್ಚ್) ಅತ್ಯಂತ ಐತಿಹಾಸಿಕವಾದುದು. ಈ ನಿರ್ಣಯವನ್ನು ಸಮಾನತೆ, ಮಾನವೀಯತೆ ಬಯಸುವ, ಪ್ರೀತಿಸುವರೆಲ್ಲ ಸ್ವಾಗತಿಸಬೇಕು. ತಾರತಮ್ಯ, ದಮನಕಾಂಡಗಳೇ ಜೀವಾಳವಾಗಿರಿಸಿಕೊಂಡಿರುವ ವೈದಿಕಶಾಹಿಯ ವಿರುದ್ಧ ಸರ್ವತೋಮುಖದಲ್ಲಿ ಸೆಡ್ಡು ಹೊಡೆದು ಮಾನವೀಯತೆ, ಸಮಾನತೆ ಹಾಗೂ ಕಾಯಕ ಜೀವಿಗಳಿಗೆ ಅತ್ಯಂತ ಉನ್ನತ ಸ್ಥಾನ ನೀಡಿದ 12ನೇ ಶತಮಾನದ ಶರಣ ಚಳುವಳಿಯ ಆಶಯ – ಆಂದೋಲನಕ್ಕೆ ದೊರೆತ ಮನ್ನಣೆಯ ಒಂದು ಪ್ರತೀಕ.

ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಸ್ಥಾನ ಸಿಗಬೇಕು ಎಂದು ಹಲವು ದಶಕಗಳಿಂದ ನಡೆಯುತ್ತ ಬಂದ ಆಂದೋಲನಕ್ಕೆ ಸಿಕ್ಕ ಜಯ. ನಿಜ, ಆದರೆ ಇಷ್ಟಕ್ಕೆ ಎಲ್ಲವೂ ಮುಗಿದಿದೆ ಎಂದು ನಿರಾಳಭಾವ ಇರಬೇಕಾಗಿಯೂ ಇಲ್ಲ. ವೈಚಾರಿಕ, ಸಾಮಾಜಿಕ ಆಂದೋಲನ ಒಂದು ಮುನ್ನಡೆ ಸಾಧಿಸಿದೆ ಎಂಬುದು ನಿಜವಾದರೂ ಎದುರಿಸಬೇಕಾದ ಸವಾಲುಗಳು ಅಗಣಿತ, ಈ ಶರಣ ಚಳುವಳಿಯನ್ನು ದಿಕ್ಕೆಡಿಸಿ, ದುರ್ಬಲಗೊಳಿಸಿ ಅಪೋಶನ ತೆಗೆಯುವ ನೂರಾರು ಷಡ್ಯಂತ್ರ ಹೊಸೆದು ಪ್ರಭುತ್ವದ ಬಲದೊಂದಿಗೆ ಬೀಗುತ್ತಾ ಬಂದ ಶಕ್ತಿಗಳು ಮತ್ತೆ ಹೊಸ ಹೊಸ ಸ್ವರೂಪದ ದಾಳಿಗಳನ್ನು ನಡೆಸದೇ ಬಿಡುವುದಿಲ್ಲ. ಹೀಗಾಗಿ ಈಗ ಸಂಘರ್ಷವೂ ಅನಿವಾರ್ಯ.

ಸಚಿವ ಸಂಪುಟದ ತೀರ್ಮಾನವನ್ನು ಬಗೆ ಬಗೆಯಾಗಿ ವಿರೋಧಿಸಲಾಗುತ್ತಿದೆ. ವಾಸ್ತವಗಳನ್ನು ವಿಕೃತಗೊಳಿಸಿ ವಿಪರೀತವಾಗಿ ಅಪಪ್ರಚಾರ ಮಾಡಲಾಗುತ್ತಿದೆ. ಕೆಲವರು ಧರ್ಮವನ್ನೇ ಒಡೆದರು ಎಂದರೆ, ಇದು ಶುದ್ಧ ರಾಜಕೀಯ ದುರ್ಲಾಭದ ನಿರ್ಧಾರ ಎನ್ನುತ್ತಲೂ ಇದ್ದಾರೆ. ಇದಕ್ಕೆ ಸಿದ್ಧರಾಮಯ್ಯನವರನ್ನು, ಕಾಂಗ್ರೆಸ್ ಪಕ್ಷವನ್ನು ಗುರಿಮಾಡುತ್ತಿದ್ದಾರೆ. ವಿಷಯವನ್ನೂ ಕೂಲಂಕುಶವಾಗಿ ಅಧ್ಯಯನ ಮಾಡಿ ವರದಿ ನೀಡಿದ ತಜ್ಞರ ಸಮಿತಿ ಸದಸ್ಯರನ್ನೇ ನಾಸ್ತಿಕರು, ಎಡಪಂಥೀಯರು ಎಂದು ದೂಷಿಸಿರುವುದಲ್ಲದೇ (ನ್ಯಾ. ಹೆಚ್.ಎನ್. ನಾಗಮೋಹನದಾಸ್ ರವರ ನೇತೃತ್ವದ ತಜ್ಞರ ಸಮಿತಿ) ಜಾತಿಗಳನ್ನು ಎತ್ತಾಡಿ ನಿಂದಿಸುವ ಕೆಳಮಟ್ಟಕ್ಕೂ ಹೋಗಿದ್ದಾರೆ.

ಈಗ ತಿಳಿಸಿರುವಂತೆ ಲಿಂಗಾಯತ ಸ್ವತಂತ್ರ ಧರ್ಮದ ಸ್ಥಾನಮಾನದ ಬೇಡಿಕೆ ಇಂದು ನಿನ್ನೆಯದಲ್ಲ ಅಥವಾ ಕಾಂಗ್ರೆಸ್ ಪಕ್ಷವಾಗಲೀ ಅಥವಾ ಪ್ರಗತಿಪರರು ದಿಢೀರನೇ ಹುಟ್ಟುಹಾಕಿದ್ದು ಅಲ್ಲ. 1871 ರ ಹಿಂದೆ ಬ್ರಿಟೀಶ್ ದಾಖಲೆಗಳಲ್ಲಿ ಲಿಂಗಾಯತ ಧರ್ಮದ ಬಗ್ಗೆ ಪ್ರಸ್ತಾಪಗಳಿವೆ.

ವರ್ತಮಾನದಲ್ಲಿಯೂ 1980 ರ ದಶಕದಿಂದಲೂ ಈ ಬೇಡಿಕೆ ಎತ್ತುತ್ತಲೇ ಬರಲಾಗಿದೆ. ಕಳೆದ ವರುಷ ಲಿಂಗಾಯತರ ಸಂಘಗಳು, ಮಠಾಧೀಶರೂ, ಸಮುದಾಯಗಳ ಅಗ್ರಹ ತೀವ್ರತೆ ಪಡೆದ ನಂತರ ಮತ್ತಷ್ಟೂ ಜೀವಂತ ಚಾಲನೆ ಬಂದಿದೆ.

ಇದಕ್ಕೆ ತೀವ್ರ ವಿರೋಧ ಬಂದಿದ್ದು ಬಹಿರಂಗವಾಗಿ ‘ವೀರಶೈವ’ರಿಂದ. ವೀರಶೈವ, ಲಿಂಗಾಯತ ಎಲ್ಲವೂ ಒಂದೇ ಆಗಿದ್ದು ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಮಾನ್ಯತೆ ಸಮಾಜವನ್ನೂ ಒಡೆಯುತ್ತದೆ ಎಂಬುದು ವಿರೋಧಿಸುವವರ ವಾದ. ವೀರಶೈವ ಎಂದು ಹೇಳಿ ಕೊಳ್ಳುವವರು – ಪಂಚಪೀಠಾಧೀಶರ ಪ್ರತಿಪಾದಕರು, ಎಲ್ಲಾ ಮಗ್ಗುಲುಗಳಿಂದಲ ಪರಿಶೀಲಿಸಿದರೆ ವೈದಿಕಶಾಹಿಯ ಮತ್ತೊಂದು ಅವತರಣಿಕೆ ಇದು. ಆದರೆ ಬಸವಣ್ಣನವರೂ ಒಳಗೊಂಡ ಶರಣರು ಪ್ರತಿಪಾದಿಸಿದ ಲಿಂಗಾಯತ ಧರ್ಮ ವೈದಿಕಶಾಹಿ ಧರ್ಮಕ್ಕೆ ತದ್ವಿರುದ್ಧವಾದುದು. ಜಾತಿ ತಾರತಮ್ಯ ವಿರೋಧಿ, ಸಮಾನತೆ, ಲಿಂಗ ಸಮಾನತೆ ಪ್ರತಿಪಾದಿಸುವುದು. ವೇದ ಆಗಮಗಳನ್ನು, ಜಾತಿ ವ್ಯವಸ್ಥೆಯನ್ನು, ಮೂರ್ತಿಗಳ ಪೂಜೆಯನ್ನು ನಿರಾಕರಿಸುತ್ತದೆ. ದೇಹವನ್ನೇ ದೇಗುಲ ವೆಂದಿರುವ ಲಿಂಗಾಯತ ಧರ್ಮ ‘ಇಷ್ಟ ಲಿಂಗ’ ವನ್ನು ಕೊಟ್ಟಿದೆ. ಹೀಗೆ ಹಿಂದೂ ಧರ್ಮಕ್ಕಿಂತ ಭಿನ್ನ. ಬಸವಣ್ಣನವರೇ ಗುರು, ವಚನಗಳೇ ಧರ್ಮಗ್ರಂಥ, ಖ್ಯಾತ ಸಂಶೋಧಕ ದಿವಂಗತ ಡಾ. ಎಂ.ಎಂ. ಕಲಬುರ್ಗಿಯವರು ಖಚಿತ ಶೋಧನೆ ಪ್ರತಿಪಾದನೆಯಂತೆ ಕರ್ನಾಟಕದಲ್ಲಿ ಹುಟ್ಟಿ ಬೆಳೆದ ಸ್ಥಳೀಯ ಏಕೈಕ ಧರ್ಮವೆಂದರೆ ಅದು ಲಿಂಗಾಯತ ಧರ್ಮ. ಅಂದಿನಿಂದ ಇಂದಿನವರೆಗೂ ವೈದಿಕಶಾಹಿಯೊಂದಿಗೆ ಮುಖಾಮುಖಿಯಾಗುತ್ತ ಬಂದಿದೆ. ಇದನ್ನು ಅಪೋಶನ ಮಾಡಲು ವೈದಿಕಶಾಹಿಗಳು ‘ವೀರಶೈವ’ವನ್ನು ಬಳಸಿರುವುದು ನಿಚ್ಚಳ ಸತ್ಯ. ಮನುಷ್ಯರನ್ನು ಜಾತಿ, ಉಪಜಾತಿ, ಧರ್ಮಗಳಾಗಿ ಒಡೆದು ಮೇಲು ಕೀಳಾಗಿ ಆಳುತ್ತಾ ಬಂದ ಹಿಂದೂ ಮತಧರ್ಮದ ಚಾತುರ್ವರ್ಣ್ಯ ಧರ್ಮ ಪ್ರತಿಪಾದಕರೇ ಧರ್ಮವನ್ನು ಒಡೆದರು ಎಂದು ದೂಷಿಸುವುದು ಹಾಸ್ಯಾಸ್ಪದ. ಹಾಗೆ ನೋಡಿದರೆ ವೀರಶೈವ ಎಂಬುವರು ತೀರಾ ಕಡಿಮೆ. ಲಿಂಗಾಯತ ಧರ್ಮ, ಬಸವಣ್ಣನ ಅನುಯಾಯಿಗಳೇ 98%..

ವೀರಶೈವ-ಲಿಂಗಾಯತ ಎಂಬ ವಿಷಯದಲ್ಲಿಯೂ ಸಚಿವ ಸಂಪುಟ ಸೂಕ್ಷ್ಮವಾಗಿ ನಿರ್ಧರಿಸಿದೆ. ಅಲ್ಪಸಂಖ್ಯಾತ ಕಾಯ್ದೆ-1992ರ ಸೆಕ್ಷನ್-2ರ ಅನುಗುಣವಾಗಿ ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಸ್ಥಾನವನ್ನೂ ನೀಡುವಾಗ, ಲಿಂಗಾಯತರು ಬಸವತತ್ವ ಒಪ್ಪಿಕೊಳ್ಳುವವರು, ಬಸವಣ್ಣನವರೇ ಧರ್ಮಗುರುಗಳು, ವಚನಗಳೇ ಪವಿತ್ರಗ್ರಂಥ, ಇಷ್ಟ ಲಿಂಗ ಧಾರಣೆ, ವಚನತತ್ವ ನಂಬಿ, ಆಚರಿಸಿ ಪ್ರಚುರ ಪಡಿಸುವವರು ಎಂದು ಹೇಳಿ ವೀರಶೈವ ಲಿಂಗಾಯತರನ್ನೂ ಒಳಗೊಳಿಸಿದೆ. ಇಲ್ಲಿ ಹೀಗಿರುವಾಗ ಇಲ್ಲಿ ಒಡೆಯುವ ಪ್ರಶ್ನೆ ಬರುವುದಿಲ್ಲ. ಈ ವಿಶಿಷ್ಟ ಅಂಶಗಳನ್ನು ಒಪ್ಪದವರು ಅಥವಾ ವಿರೋಧಿಸುವವರು ಮಾತ್ರ ಪ್ರತ್ಯೇಕವಾಗಿರುತ್ತಾರೆ.

ಪುಟ 4 ಕ್ಕೆ

ಗಂಗೊಳ್ಳಿ–ಕುಂದಾಪುರ ಸೇತುವೆ ನಿರ್ಮಾಣಕ್ಕೆ ಆಗ್ರಹ

ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯೊಳಪಡುವ–ಕುಂದಾಪುರ ತಾಲೂಕಿನಲ್ಲೇ ಒಂದು ಪ್ರಮುಖ ಮೀನುಗಾರಿಕಾ ಕೇಂದ್ರವಾಗಿ ಗಂಗೊಳ್ಳಿ ನಗರ ಬೆಳೆಯುತ್ತಿದೆ. ಈ ಭಾಗದಲ್ಲಿ ಮೀನುಗಾರಿಕೆ ಒಂದು ಬೃಹತ್ ಉದ್ದಿಮೆಯಾಗಿ ಬೆಳೆದು ಬರುತ್ತಿರುವಾಗಲೇ ಮೀನುಗಾರಿಕೆ ಬಂದರಿನಲ್ಲಿ ಮೂಲಭೂತ ಸೌಕರ್ಯ ಹಾಗೂ ಅಭಿವೃದ್ಧಿ ಕುಂಠಿತಗೊಳ್ಳುತ್ತಿದೆ. ಬಂದರಿನ ಜೆಟ್ಟಿ ಜಖಂಗೊಂಡು ಶಿಥಿಲವಾದ ನೆಲಹಾಸು ಕುಸಿದಿದೆ. ಜೆಟ್ಟಿಯ ಪುನರ್‌ನಿರ್ಮಾಣ ಕಾಮಗಾರಿ ಮಾಡಬೇಕಾಗಿದೆ.

ಗಂಗೊಳ್ಳಿ ಪೇಟೆಯಿಂದ ತಾಲೂಕು ಕೇಂದ್ರ ಕುಂದಾಪುರಕ್ಕೆ ತಲಪಲು ಸುಮಾರು 15 ಕಿ.ಮೀ. ದಾರಿ ಸುತ್ತು ಬಳಸಿ ಬಸ್ಸಿನ ಮೂಲಕ ತ್ರಾಸಿ ಮಾರ್ಗವಾಗಿ ಪ್ರಯಾಣ ಮಾಡಬೇಕಾದ ಅನಿವಾರ್ಯತೆ ಇದೆ. ದಿನನಿತ್ಯ ದೂರದ ಕುಂದಾಪುರಕ್ಕೆ ಸ್ಥಳೀಯ ನಾಗರಿಕರು ವ್ಯವಹಾರ, ಉದ್ಯೋಗಕ್ಕಾಗಿ ಹಾಗೂ ವಿದ್ಯಾರ್ಥಿಗಳು ಶಾಲಾ ಕಾಲೇಜಿಗೆ ರಸ್ತೆ ಸಾರಿಗೆಯ ಮೂಲಕ ಸುತ್ತು ಬಳಸಿ ಹೋಗಬೇಕಾಗಿದೆ. ಇದರಿಂದಾಗಿ ಪ್ರಯಾಣದ ಸಮಯ ವ್ಯಯ ಹಾಗೂ ಆರ್ಥಿಕ ಹೊರೆಯಾಗುವುದು. ಆದ್ದರಿಂದ ಕುಂದಾಪುರಕ್ಕೆ ಸಂಪರ್ಕಿಸಲು ಗಂಗೊಳ್ಳಿ ನದಿಗೆ ಸೇತುವೆ ನಿರ್ಮಾಣ ಮಾಡಿದ್ದಲ್ಲಿ ಬರೇ ಕೂಗಳತೆಯ ದೂರದಲ್ಲಿರುವ ಕುಂದಾಪುರ ತಾಲೂಕು ಕೇಂದ್ರ ತಲುಪಲು ಸುಲಭ ಸಾಧ್ಯವಾಗುತ್ತದೆ.

ಅತೀ ಹೆಚ್ಚು ಕೂಲಿ ಕಾರ್ಮಿಕರು, ಮೀನುಗಾರರು ವಾಸವಾಗಿರುವ ಜನಸಾಂದ್ರತೆ ಇರುವ ಪ್ರದೇಶವಾದ ಗಂಗೊಳ್ಳಿ ಗ್ರಾಮ ಪಂಚಾಯತ್‌ಗೆ ಅತೀ ಹೆಚ್ಚಿನ ಆರ್ಥಿಕ ಸಂಪನ್ಮೂಲದ ಆದಾಯ ಹೊಂದಿರುವ ಶ್ರೀಮಂತ ಪಂಚಾಯತ್‌ಗಳಲ್ಲಿ ಒಂದಾಗಿದೆ. ಆದರೂ ಸ್ಥಳೀಯಾಡಳಿತವು ಯಾವುದೇ ಮೂಲಭೂತ ಸೌಕರ್ಯ ಕೊಡದೇ ಜನವಿರೋಧಿಯಾಗಿದೆ. ಇಲ್ಲಿ ಮಳೆಗಾಲದ ನೀರು ಸರಾಗವಾಗಿ ಹರಿದು ಹೋಗಲು ವ್ಯವಸ್ಥಿತ ಒಳಚರಂಡಿ, ಸಮರ್ಪಕ ರಸ್ತೆ, ದಾರಿ ದೀಪ, ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಕೀಯ ಸೌಲಭ್ಯ ಇತ್ಯಾದಿಗಳಿಂದ ನಾಗರಿಕರು ವಂಚಿತರಾಗಿದ್ದಾರೆ. ಬಡನಿವೇಶನ ರಹಿತರು, ನಿವೇಶನ ಸ್ಥಳಕ್ಕಾಗಿ ಅರ್ಜಿ ಸಲ್ಲಿಸಿ ವರ್ಷ 2 ಕಳೆದರೂ ಸರಕಾರಿ ನಿವೇಶನ ಸ್ಥಳ ಗುರುತಿಸಿ ಹಕ್ಕು ಪತ್ರ ಮಂಜೂರು ಮಾಡಿರುವುದಿಲ್ಲ.

ಈ ಎಲ್ಲಾ ಮೂಲಭೂತ ಸೌಕರ್ಯಕ್ಕಾಗಿ ಸರಕಾರವನ್ನು ಒತ್ತಾಯಿಸಲು ಸಿಪಿಐ(ಎಂ) ಬೈಂದೂರು ವಲಯ ಸಮಿತಿ ನೇತೃತ್ವದಲ್ಲಿ 19 ಮಾರ್ಚ್ 2018 ರಂದು ಕೃಷಿ ಕೂಲಿಕಾರ್ಮಿಕರೊಂದಿಗೆ ನಾಗರಿಕರೊಡಗೂಡಿ ಗಂಗೊಳ್ಳಿ ಗ್ರಾಮ ಪಂಚಾಯತ್ ಕಛೇರಿ ಎದುರು ಬೃಹತ್ ಪ್ರತಿಭಟನಾ ಮುಷ್ಕರ ಆಯೋಜಿಸಲಾಗಿತ್ತು.

ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡುತ್ತಾ, ಜನಪರ ಹೋರಾಟದಲ್ಲಿ ಸಿಪಿಐ(ಎಂ) ಬೈಂದೂರು ವಲಯ ಸಮಿತಿ ಮುಂಚೂಣಿಯಲ್ಲಿದೆ. ಮುಂಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ಜನವಿರೋಧಿ ಜನಪ್ರತಿನಿಧಿಗಳಿಗೆ ತಕ್ಕ ಪಾಠ ಕಲಿಸಬೇಕು ಎಂದು ಹೇಳಿದರು. ಬೈಂದೂರು ವಿಧಾನಸಭಾ ಕ್ಷೇತ್ರದ ಸಿಪಿಐ(ಎಂ) ಪಕ್ಷದ ಅಭ್ಯರ್ಥಿ ಹಾಗೂ ಬೈಂದೂರು ವಲಯ ಸಮಿತಿ ಕಾರ್ಯದರ್ಶಿ ಸುರೇಶ್ ಕಲ್ಲಾಗರ ಮಾತನಾಡುತ್ತಾ ದುಡಿಯುವ ಜನರ ಹಿತಸಾಧನೆ ಮಾಡುವ ಸಿಪಿಐ(ಎಂ) ಪಕ್ಷದ ಅಭ್ಯರ್ಥಿಯ ಗೆಲುವಿಗೆ ಶ್ರಮಿಸಬೇಕು ಎಂದು ಹೇಳಿದರು.

ಸಿಪಿಐ(ಎಂ) ಪಕ್ಷದ ಮುಖಂಡರಾದ ವೆಂಕಟೇಶ ಕೋಣಿ, ರಾಜೀವ ಪಡುಕೋಣೆ, ನಾಗರತ್ನ ನಾಡ, ರಮೇಶ್ ಗುಲ್ವಾಡಿ, ಸಂತೋಷ ಹೆಮ್ಮಾಡಿ, ಅರುಣಕುಮಾರ್, ಚಿಕ್ಕಮೊಗವೀರ, ಅಭಿನಂದನ, ಸುಶೀಲ ಪೂಜಾರಿ ಮುಂತಾದವರು ಪ್ರತಿಭಟನಾ ಪ್ರದರ್ಶನದ ನೇತೃತ್ವ ವಹಿಸಿದ್ದರು.

– ವೆಂಕಟೇಶ ಕೋಣಿ

ಮೂಲಸೌಕರ್ಯಗಳಿಗೆ ಆಗ್ರಹಿಸಿ ಗುಲ್ವಾಡಿ ಗ್ರಾಮಸ್ಥರ ಪ್ರತಿಭಟನೆ:

ಗುಲ್ವಾಡಿ ಗ್ರಾಮ ಪಂಚಾಯತಿನಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಹಾಗೂ ಕಾಂಗ್ರೆಸ್ ಬೆಂಬಲಿತ ಆಡಳಿತ ಗ್ರಾಮಸ್ಥರ ಅಗತ್ಯಗಳನ್ನು ಈಡೇರಿಸುವಲ್ಲಿ ವಿಫಲವಾಗಿದೆ. ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಗ್ರಾಮದ ನಿವೇಶನ ರಹಿತರು ನಿವೇಶನಕ್ಕಾಗಿ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿ ವರ್ಷವೇ ಕಳೆದಿದ್ದರೂ, ಕಂದಾಯ ಇಲಾಖೆಗೆ ಸೂಕ್ತ ಜಾಗವನ್ನು ಪಂಚಾಯತು ಗುರುತಿಸಿ ಕೊಟ್ಟಿಲ್ಲ. ಈ ಮೊದಲಾದ ಸಮಸ್ಯೆಗಳ ಪರಿಹಾರಕ್ಕೆ ಶಾಸಕರು ಮಧ್ಯಪ್ರವೇಶ ಮಾಡಿಸಬೇಕು ಎಂದು ಆಗ್ರಹಿಸಿ ಸಿಪಿಐ(ಎಂ) ಗುಲ್ವಾಡಿ ಶಾಖೆಯ ನೇತೃತ್ವದಲ್ಲಿ ಗುಲ್ವಾಡಿ ಗ್ರಾಮಸ್ಥರು ಗ್ರಾಮ ಪಂಚಾಯತು ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ಬೈಂದೂರು ವಲಯ ಸಮಿತಿ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಸಿಪಿಐ(ಎಂ) ವಲಯ ಸಮಿತಿ ಮುಖಂಡರಾದ ಎಚ್.ನರಸಿಂಹ, ವೆಂಕಟೇಶ ಕೋಣಿ ಮಾತನಾಡಿದರು. ಪ್ರತಿಭಟನೆಗೂ ಮೊದಲು ಗುಲ್ವಾಡಿ ಬೋಳ್‌ಕಟ್ಟೆಯಿಂದ ಗ್ರಾಮ ಪಂಚಾಯತ್ ಕಚೇರಿವರೆಗೆ ಮೆರವಣಿಗೆ ನಡೆಸಲಾಯಿತು. ಪ್ರತಿಭಟನೆ ಬಳಿಕ ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು. ಸಿಪಿಐ(ಎಂ) ಗುಲ್ವಾಡಿ ಶಾಖೆ ಕಾರ್ಯದರ್ಶಿ ಅಣ್ಣಪ್ಪ ಅಬ್ಬಿಗುಡ್ಡಿ, ನಾರಾಯಣ ಮಡಿವಾಳ, ಜಿ.ಬಿ.ಮಹಮ್ಮದ್, ಅಣ್ಣಪ್ಪ ಶೇರಿಗಾರ್, ಚಂದ್ರ, ರೊನಾಲ್ಡ್ ರಾಜೇಶ್, ಸಿಪಿಐ(ಎಂ) ವಲಯ ಸಮಿತಿ ಪಂಜು, ರಮೇಶ್ ಗುಲ್ವಾಡಿ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ●

ರೈಲು ನಿಲುಗಡೆಗೆ ಆಗ್ರಹಿಸಿ ಸೇನಾಪುರ ನಿಲ್ದಾಣದಲ್ಲಿ ಪ್ರತಿಭಟನೆ:



ಕೊಂಕಣ ರೈಲ್ವೇ ಮಾರ್ಗದಲ್ಲಿ ಕುಂದಾಪುರ ಮತ್ತು ಬೈಂದೂರು ನಿಲ್ದಾಣಗಳ ಮಧ್ಯೆ ಸೇನಾಪುರ ರೈಲ್ವೇ ನಿಲ್ದಾಣವಿದೆ. ಸೇನಾಪುರವು ಬೈಂದೂರು ತಾಲೂಕಿನ 26 ತಾಲೂಕುಗಳಿಗೂ ಕೇಂದ್ರ ಸ್ಥಾನವಾಗಿದೆ. ಯಾತ್ರಾ ಕ್ಷೇತ್ರವಾಗಿರುವ ಕೊಲ್ಲೂರು ಮೂಕಾಂಬಿಕಾ ಭಕ್ತರಿಗಾಗಿ ಬೈಂದೂರನ್ನು ಮೂಕಾಂಬಿಕಾ ರೈಲ್ವೆ ನಿಲ್ದಾಣವೆಂದು ಗುರುತಿಸಿದೆ. ನಿಜವಾಗಿ ಸೇನಾಪುರ ನಿಲ್ದಾಣವು ಕೊಲ್ಲೂರಿನಿಂದ ಬೈಂದೂರಿನಷ್ಟೇ ದೂರದಲ್ಲಿದೆ. ಅಲ್ಲದೆ ಸೇನಾಪುರ ರೈಲ್ವೇ ನಿಲ್ದಾಣದಲ್ಲಿ ಎಲ್ಲಾ ರೈಲುಗಳೂ ನಿಲ್ಲುವಂತಾದರೆ, ಬೈಂದೂರು ತಾಲೂಕಿನ ಎಲ್ಲಾ ಗ್ರಾಮಗಳಿಗೂ ಸಂಚಾರ ಸಮೀಪವಾಗುವುದು. ಸದ್ಯ ಪ್ಯಾಸೆಂಜರು ರೈಲುಗಳು ಮಾತ್ರ ಸೇನಾಪುರದಲ್ಲಿ ನಿಲುಗಡೆಯಾಗುತ್ತಿವೆ. ಎಕ್ಸ್‌ಪ್ರೆಸ್ ರೈಲುಗಳ ನಿಲುಗಡೆಯಾಗುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಸೇನಾಪುರ ರೈಲು ನಿಲ್ದಾಣವನ್ನು ಎಲ್ಲಾ ಎಕ್ಸ್‌ಪ್ರೆಸ್ ರೈಲುಗಳ ನಿಲುಗಡೆ ಮಾಡಬೇಕೆಂದು ಆಗ್ರಹಿಸಿ ಮಾರ್ಚ್ 21ರಂದು ಸಿಪಿಐ(ಎಂ) ಬೈಂದೂರು ವಲಯ ಸಮಿತಿ ನೇತೃತ್ವದಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು ನಿಲ್ದಾಣದ ಎದುರು ಪ್ರದರ್ಶನ ನಡೆಸಿ, ರೈಲ್ವೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಬೈಂದೂರು ವಲಯ ಕಾರ್ಯದರ್ಶಿ ಸುರೇಶ್ ಕಲ್ಲಾಗರ, ಜಿಲ್ಲಾ ಸಮಿತಿ ಸದಸ್ಯರಾದ ವೆಂಕಟೇಶ ಕೋಣಿ, ರಾಜೀವ ಪಡುಕೋಣೆ ಪ್ರದರ್ಶನಕಾರರನ್ನುದ್ದೇಶಿಸಿ ಮಾತನಾಡಿದರು. ಸಿಪಿಐ(ಎಂ) ಮುಖಂಡರಾದ ಎಚ್.ನರಸಿಂಹ, ನಾಗರತ್ನ ಪಡುಕೋಣೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ●

ಎಸ್.ಎಸ್. ಹುಲಗಪ್ಪ – ಲಾಲ್ ಸಲಾಂ



ಕೊಪ್ಪಳದ ದುಡಿಯುವ ಜನರ ಹಿರಿಯ ಮುಖಂಡ ಕಾ. ಎಸ್.ಎಸ್. ಹುಲಗಪ್ಪ ಹೃದಯಾಘಾತದಿಂದ ಹಠಾತ್ತನೆ ನಿಧನ ಹೊಂದಿದ್ದಾರೆ. ಈ ವರೆಗೆ ಯಾವುದೇ ಗೊತ್ತಿದ್ದ ಆರೋಗ್ಯ ಸಮಸ್ಯೆ ಇರದ 55 ವಯಸ್ಸಿನ ಅವರ ನಿಧನ ಎಲ್ಲರಿಗೂ ತೀವ್ರವಾದ ಆಘಾತ ತಂದಿದೆ. 1980ರ ದಶಕದಲ್ಲಿ ದುಡಿಯುವ ಜನರ ಚಳುವಳಿಯನ್ನು ಕೃಷಿ ಕೂಲಿಕಾರ ಸಂಘದ ಮೂಲಕ ಪ್ರವೇಶಿಸಿದ ದೀರ್ಘ ಕಾಲದಿಂದ ಸಿಪಿಐ(ಎಂ) ಸದಸ್ಯರೂ ಆಗಿದ್ದರು. ಗಂಗಾವತಿಯಲ್ಲಿ ಭೂಮಾಲಕರ ವಿರುದ್ಧ ಹೋರಾಟ ನಡೆಸಿದ್ದ ಸಮರಶೀಲ ನಾಯಕ. ಕಳೆದ ಎರಡು ದಶಕಗಳಿಂದ ಅವರು ಹಮಾಲಿ ಕಾರ್ಮಿಕರ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು. ಅವರು ಸಿಪಿಐ(ಎಂ) ಪಕ್ಷದ ಹಿರಿಯ ನಾಯಕರಾಗಿದ್ದು ಹಲವು ಸಮರಶೀಲ ಹೋರಾಟಗಳಲ್ಲಿ ಭಾಗವಹಿಸಿದ್ದರು. ಅವರು ಕಳೆದ 3 ಅವಧಿಗಳಿಂದ ಕೊಪ್ಪಳ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದರು. ಅವರ ನಿಧನದಲ್ಲಿ ಕೊಪ್ಪಳದ ಮತ್ತು ಇಡೀ ರಾಜ್ಯದ ದುಡಿಯುವ ಜನರ ಚಳುವಳಿ ಒಬ್ಬ ನೆಚ್ಚಿನ ನಾಯಕನನ್ನು ಕಳೆದುಕೊಂಡಿದೆ. ಅವರ ಕೆಲಸವನ್ನು ಮುಂದಕ್ಕೆ ಒಯ್ಯುವುದೇ ಅವರಿಗೆ ಸಲ್ಲಿಸಬಹುದಾದ ನಿಜವಾದ ಶ್ರದ್ಧಾಂಜಲಿ. ●

ಲಿಂಗಾಯತ ಸ್ವತಂತ್ರ ಧರ್ಮ: ಮುಂದೇನು? ಪುಟ 3 ರಿಂದ

ಯಾವ ಪ್ರಜೆಯಾದರೂ ತಮಗೆ ಒಪ್ಪಿಗೆಯಾಗುವ ಧರ್ಮವನ್ನು ಅನುಸರಿಸುವ ಇಲ್ಲ ಅನುಸರಿಸದೇ ಇರುವ ಆಯ್ಕೆ, ಸ್ವಾತಂತ್ರವನ್ನು ನಮ್ಮ ಸಂವಿಧಾನ ನೀಡಿರುವಾಗ ಧರ್ಮದ ಆಯ್ಕೆಯೇ ವೈಯುಕ್ತಿಕವೇ ಆಗಿದೆ.

ಹೀಗೆ ಸ್ವತಂತ್ರ ಧರ್ಮ ಎಂದು ದಾಖಲೆಗಳ ಸಮೇತ ಪ್ರತಿಪಾದಿಸಿರುವ ತಜ್ಞರ ಸಮಿತಿಯೂ ಇನ್ನೂ ಕೆಲವು ಎಚ್ಚರದ ಕ್ರಮಗಳನ್ನು ಶಿಫಾರಸು ಮಾಡಿರುವುದು ಗಮನಾರ್ಹ. ಈ ಸ್ಥಾನಮಾನವು ಈಗಾಗಲೇ ಮಾನ್ಯತೆ ಪಡೆದಿರುವ ಮುಸ್ಲಿಮ್, ಕ್ರಿಶ್ಚಿಯನ್ ರ ಮೀಸಲಾತಿ, ಇತ್ಯಾದಿ ಸೌಲಭ್ಯಗಳನ್ನು ಹಾನಿ ಮಾಡದಂತೆ ಕ್ರಮ ವಹಿಸಬೇಕೆಂದೂ ಹೇಳಿದೆ. ಸಂಪುಟ ಇದನ್ನೂ ಮಾನ್ಯ ಮಾಡಿರುವುದರಿಂದ ಧಾರ್ಮಿಕ ಅಲ್ಪ ಸಂಖ್ಯಾತರು ಚಿಂತಿತರಾಗಬೇಕಿಲ್ಲ. ಮಾತ್ರವಲ್ಲ ಪರಿಶಿಷ್ಟ ಜಾತಿ, ಪಂ.ಪಂಗಡಗಳ ಮೀಸಲಾತಿ ಇತ್ಯಾದಿ ಸೌಲಭ್ಯಗಳೂ ಅಬಾಧಿತ.

ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮ ಸ್ಥಾನ ಸಿಗಬೇಕೆಂದು ಈ ಹಿಂದೆ ಮೂರು ಬಾರಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದಾಗ ಅದು ತಿರಸ್ಕೃತವಾಗಿದೆ. ನ್ಯಾಯಾಲಯಗಳು ಅಂಗೀಕರಿಸಿಲ್ಲ. ಕಾರಣ ವೀರಶೈವ ಲಿಂಗಾಯತ ಧರ್ಮ ಎಂಬುದು ಸ್ವತಂತ್ರ ಅಲ್ಲ, ಅದು ಹಿಂದೂ ವೈದಿಕವಾಗಿವೆ. ಹೀಗಾಗಿ ಅದು ತಿರಸ್ಕೃತವಾದ ಹಿನ್ನೆಲೆಯಲ್ಲಿಯೂ 'ಲಿಂಗಾಯತ ಧರ್ಮ' ಎಂದು ಮಂಡಿತವಾಗುವುದು ಅನಿವಾರ್ಯ ಎಂದೂ ಪ್ರತಿವಾದಿಸಲಾಗಿದೆ.

ಇದರೊಟ್ಟಿಗೆ ಹಲವು ಪ್ರಾಯೋಗಿಕ ಸಮಸ್ಯೆಗಳೂ ಬರುತ್ತಿವೆ, ಬರಲಿವೆ. ಲಿಂಗಾಯತ ಧರ್ಮ ಒಂದು. ಆದರೂ ಅದರೊಳಗೆ 99 ವಿವಿಧ ಪಂಗಡಗಳೂ ಇವೆ. ಇದರಲ್ಲಿ ಕೆಲವಕ್ಕೆ 'ಹಿಂದುಳಿದ' ಮೀಸಲಾತಿ ಇದೆ. ಹಿಂದೂ ಧರ್ಮದ ಭಾಗ ಎಂದಿರುವಾಗ ಲಿಂಗಾಯಿತ ಜಾತಿ ಎಂದಾಗಿ ಕೆಲವರಿಗೆ ಮೀಸಲಾತಿ ಇತ್ತು. ಈಗ ಏನಾಗುತ್ತದೆ ಎಂಬ ಆತಂಕ! ಇದನ್ನು ಗಮನದಲ್ಲಿರಿಸಿ ಯಾವುದೇ ರೀತಿಯಲ್ಲಿ ಮೀಸಲಾತಿ ಒಳಗೊಂಡು ಇರುವ ಇತರೆ ಸೌಲಭ್ಯಗಳು ಹೋಗದಂತೆ ಅಗತ್ಯ ಕ್ರಮ ವಹಿಸಬೇಕು. ಹೇಗೆ ಕ್ರಿಶ್ಚಿಯನ್ನರಾದ ಇತರೆ ಧರ್ಮಗಳಿಗೆ ಮತಾಂತರವಾದವರಿಗೆ ಅವರ ಜಾತಿಗೆ ದೊರೆತ ಸೌಲಭ್ಯ ಉಳಿಯುವಂತೆ ಮಾಡಲಾಗಿದೆಯೋ ಹಾಗೆಯೇ ಆಗಬೇಕು. ಲಿಂಗಾಯತ ಧರ್ಮ ಅಲ್ಪಸಂಖ್ಯಾತ ಧರ್ಮ ಎಂದಾದರೆ ಅದರ ಪ್ರಯೋಜನವನ್ನು ಇಲ್ಲಿರುವ ಕೆಲವು ಶ್ರೀಮಂತರೇ ಪಡೆಯುವರೇ ಎಂಬ ಪ್ರಶ್ನೆಯೇ ಇದೆ. ಅದು ಕೇವಲ ಉಳ್ಳವರ ಕೈಗೆ ಸಿಗುವಂತಾಗಲಾರದು. ಇವೆಲ್ಲಕ್ಕಿಂತ ಬಹುಮುಖ್ಯವಾಗಿ ಲಿಂಗಾಯತ ಧರ್ಮ ನಿಜವಾಗಿಯೂ ಅದರ ಸಾಮಾಜಿಕ, ಸೈದ್ಧಾಂತಿಕ ನಿಲುಮೆಯ ಪ್ರತಿಪಾದನೆ. ಶರಣತತ್ವದ ಮೂಲ ಸತ್ವ – ವಿಚಾರಗಳನ್ನು ಜೀವಂತವಾಗಿಸಿ ಜಾಗೃತಗೊಳಿಸುವುದು ಅದನ್ನು ಸಮಾಜ ಬದಲಾವಣೆಯ ಶಕ್ತಿಯಾಗಿಸಲು ತೊಡಗಿಸುವುದು ಅತೀ ಅಗತ್ಯ. ಈಗಾಗಲೇ ವೈದಿಕಶಾಹಿ ಶಕ್ತಿಗಳ ಕುತಂತ್ರಗಳಿಂದ ಗೊಂದಲದ ಗೂಡಾಗಿ, ಸ್ಥಾಪಿತ ಹಿತಾಸಕ್ತಿಗಳ ಸೇವೆಗೆ ಸಿದ್ಧಗೊಳಿಸಿರುವ ಸ್ಥಿತಿಯು ತೊಲಗಬೇಕು. ಆಚಾರ–ವಿಚಾರಗಳೇ ಸ್ಪಷ್ಟತೆ ಬೇಕು. ವೈದಿಕಶಾಹಿಯ ಎದುರು ತಾತ್ವಿಕ, ಸಂಘಟನಾತ್ಮಕವಾಗಿ ಮುಖಾಮುಖಿಯಾಗಬೇಕು.

ಈ ಒಟ್ಟು ಕ್ರಿಯೆಯನ್ನು ರಾಜಕೀಯವಾಗಿ ಬಳಸುವ ಯತ್ನಗಳೂ ಇವೆ. ಮುಖ್ಯವಾಗಿ ಬಿಜೆಪಿ, ಸಂಘಪರಿವಾರ ಬಹಿರಂಗವಾಗಿ ತನ್ನ ನಿಲುವನ್ನು ಹೇಳದೇ ಸ್ವತಂತ್ರ ಧರ್ಮ ಸ್ಥಾನ ಸಿಗದಂತೆ ಮಾಡಲು ಹವಣಿಸುತ್ತಿದೆ. ಅದು ಹಿಂದುತ್ವ–ವೈದಿಕ ಶಾಹಿಯ ದೃಢ ಪ್ರತಿಪಾದಕ ವಾಹಕ. ಆದರೆ ಬಹಿರಂಗವಾಗಿ ಲಿಂಗಾಯತರ ಓಟು ಕಳೆದುಕೊಳ್ಳಲು ಸಿದ್ಧವಿಲ್ಲದೇ, ಎಡಬಿಡಂಗಿಯಂತೆ ಆಡುತ್ತಿದೆ. ಮತ್ತೊಂದೆಡೆ ಧರ್ಮ ಒಡೆದರು ಎಂದು ಹೇಳುತ್ತ, ಕೇಂದ್ರ ಸರ್ಕಾರ ಅನುಮೋದನೆ ಮಾಡದಂತೆ ತಡೆಯುವ ಇಂಗಿತವನ್ನು ಸಾರುತ್ತಿದೆ. ಇಂತಹವರಿಗೆ ತಕ್ಕ ಶಾಸ್ತಿ ಮಾಡಬೇಕು. ಜೆಡಿ(ಎಸ್) ಪಕ್ಷವೂ ಖಚಿತ ನಿಲುವು ತಳೆಯದೇ 'ವೀರಶೈವ'ರನ್ನು ಓಲೈಸುವ ವರಸೆ ಮಾಡುತ್ತಿರುವುದು ವಿಚಿತ್ರ. ಖಚಿತ ನಿಲುವು ತಳೆದಿರುವುದು ಸಿಪಿಐ(ಎಂ) ಮತ್ತು ಇತರೆ ಎಡ ಶಕ್ತಿಗಳು. ಒಟ್ಟಾರೆ ಲಿಂಗಾಯತ ಧರ್ಮ ಸ್ವತಂತ್ರ ಸ್ಥಾನಮಾನ ಕೊಡುವ ತೀರ್ಮಾನ ಮಹತ್ವದ್ದಾಗಿದೆ. ಇದು ಹುಟ್ಟು ಹಾಕಿರುವ ತೀವ್ರ ವೈಚಾರಿಕ ಸಂಘರ್ಷವನ್ನೂ ಹರಿತಗೊಳಿಸಿ ಎಲ್ಲಾ ಜನ ಸಮುದಾಯದ ನಡುವೆ ಕೊಂಡೊಯ್ಯಬೇಕಿದೆ. ಕರ್ನಾಟಕವನ್ನು ವೈಚಾರಿಕತೆಯೆಡೆಗೆ ಕೊಂಡೊಯ್ಯುವಲ್ಲಿ ಇದು ಸಾಧಕವಾಗಲಿ. ●

ರೈಲ್ವೆ ಯೋಜನೆಯ ಭೂಸ್ವಾಧೀನ ಪರಿಹಾರಕ್ಕೆ ರೈತರ ಒತ್ತಾಯ

ತುಮಕೂರು–ರಾಯದುರ್ಗ–ದಾವಣಗೆರೆ ರೈಲ್ವೆ ಯೋಜನೆ ಭೂಸ್ವಾಧೀನ ರೈತರ ಹೋರಾಟ ಸಮಿತಿ ಕರ್ನಾಟಕ ಪ್ರಾಂತ ರೈತ ಸಂಘ ತುಮಕೂರು ಜಿಲ್ಲೆ ಇದರ ನೇತೃತ್ವದಲ್ಲಿ ಭೂಸ್ವಾಧೀನಕ್ಕೊಳಪಟ್ಟ ರೈತರು ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಉಪವಿಭಾಗಾಧಿಕಾರಿ ತಿಪ್ಪೇಸ್ವಾಮಿ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ ಮೃತ್ಯುಂಜಯಪ್ಪ ಅವರಿಗೆ ಮನವಿ ನೀಡಿ ಪರಿಹಾರಕ್ಕೆ ವಿಧಿಸಿರುವ ದಾಖಲಾತಿಗಳನ್ನು ಪಡೆಯಲು ರೈತರ ಅಲೆದಾಟ ತಪ್ಪಿಸಬೇಕು. ಮತ್ತು ತ್ವರಿತವಾಗಿ ಭೂಪರಿಹಾರವನ್ನು ನೀಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಹೋರಾಟ ಸಮಿತಿಯ ಸಂಚಾಲಕ ಹಾಗೂ ಪ್ರಾಂತ ರೈತ ಸಂಘದ ಬಿ.ಉಮೇಶ್ ಮಾತನಾಡಿ, ಸಮಿತಿಯ ನೇತೃತ್ವದಲ್ಲಿ 2013 ರಿಂದ ಹೋರಾಟ ನಡೆಸಿ ಭೂಸ್ವಾಧೀನತೆಯಲ್ಲಿ ಪಾರದರ್ಶಕತೆ ಮತ್ತು ರೈತರ ಒಪ್ಪಂದದ ಐತೀರ್ಪಿನಂತೆ ಪರಿಹಾರ ಪಡೆಯಲು ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ಹೋರಾಟವ್ನು ರೂಪಿಸಲಾಗಿತ್ತು. ಇದೇ ಮಾದರಿಯಲ್ಲಿ ದೇಶಾದ್ಯಂತ ಭೂಸ್ವಾಧೀನದ ಸಂಬಂಧ ಬ್ರಿಟೀಷರ ಕಾಯ್ದೆಗೆ ಬದಲು ಹೊಸ ಕಾಯ್ದೆ ರೂಪಿಸಿ ಪಾರದರ್ಶಕ ಹಾಗೂ ಪುನರ್ವಸತಿ ಕಾಯ್ದೆ ಜಾರಿಯಾಗಬೇಕೆಂಬ ಭಾಗವಾಗಿ ಹೊಸ ಕಾಯ್ದೆ ಜಾರಿಗೆ ಬಂದ ನಂತರ ಕೆಲವು ರೈತರು ಪರಿಹಾರ ಪಡೆದಿದ್ದಲ್ಲದೆ ಹೆಚ್ಚು ಪರಿಹಾರಕ್ಕೆ ಕಾನೂನಾತ್ಮಕ ಹೋರಾಟ ಮುಂದುವರಿಸಿದರು. ಇತ್ತೀಚೆಗೆ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟ ರೈತರಿಗೆ ಅವಾರ್ಡ್ ನೋಟಿಸ್ ನೀಡಿದ ನಂತರ ಕಂದಾಯ ಇಲಾಖೆಯಲ್ಲಿ 79 ಎ ಮತ್ತು 79 ಬಿ, ಪಿಟಿಸಿಎಲ್ ಹಾಗೂ ವಿವಾದಾತ್ಮಕ ಪ್ರಕರಣಗಳು ಇಲ್ಲವೆನ್ನುವ ದೃಢೀಕರಣ ಪತ್ರ ಪಡೆಯುವಲ್ಲಿ ಗೊಂದಲ ಸೃಷ್ಟಿಯಾಗಿದೆ. ಅರಣ್ಯ, ತೋಟಗಾರಿಕೆ ಮತ್ತು ಲೋಕೋಪಯೋಗಿ ಇಲಾಖೆಯವರು ನೀಡುವ ಮಾದರಿಯಲ್ಲೇ ಕಂದಾಯ ಇಲಾಖೆಯವರು ಸಹ ಭೂಮಿಯ ದಾಖಲಾತಿಗಳನ್ನು ನೇರವಾಗಿ ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ತಲುಪಿಸಿ ರೈತರ ಅಲೆದಾಟವನ್ನು ತಪ್ಪಿಸಬೇಕು. ಜೊತೆಗೆ ಭೂಪರಿಹಾರವನ್ನು ತ್ವರಿತವಾಗಿ ನೀಡಲು ಜಿಲ್ಲಾಡಳಿತ ಮುಂದಾಗಬೇಕು ಎಂದು ಒತ್ತಾಯಿಸಿದರು.

ನಂತರ ಮನವಿಯನ್ನು ಪಡೆದ ವಿಭಾಗಾಧಿಕಾರಿಗಳು ರೈತ ಮುಖಂಡರೊಡನೆ ಚರ್ಚಿಸಿ ಒಂದೇ ಅಡಿಯಲ್ಲಿ ಪ್ರಮಾಣ ಪತ್ರ ನೀಡಿ ಸಂಬಂಧಿಸಿದ ದಾಖಲೆಗಳನ್ನು ತ್ವರಿತವಾಗಿ ನೀಡುವ ವ್ಯವಸ್ಥೆಯನ್ನು ಮಾಡುವುದಾಗಿ ಭರವಸೆ ನೀಡಿದರು. ಇತರ ಸಮಸ್ಯೆಗಳ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ಜೊತೆ ಚರ್ಚಿಸಿ ರೈತರ ಅನಗತ್ಯ ಅಲೆದಾಟವನ್ನು ತಪ್ಪಿಸುವುದಾಗಿಯೂ ಸಹ ಜಿಲ್ಲಾಧಿಕಾರಿಗಳ ಅನುಪಸ್ಥಿತಿಯಲ್ಲಿ ಮನವ ಪತ್ರ ಸ್ವೀಕರಿಸಿ ಹೇಳಿದರು.

ವಿಶೇಷ ಭೂಸ್ವಾಧೀನಾಧಿಕಾರಿಗಳಾದ ಮೃತ್ಯುಂಜಯಪ್ಪನವರಿಗೂ ಸಹ ಮನವಿ ನೀಡಲಾಗಿ, ದಾಖಲಾತಿ ಒದಗಿಸಿರುವ ರೈತರೆಲ್ಲರಿಗೂ ವಿಳಂಬವಿಲ್ಲದೆ ಪರಿಹಾರವನ್ನು ಅವರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸುವುದಾಗಿ ಭರವಸೆ ನೀಡಿದರು.

ಪ್ರತಿಭಟನೆಯ ನೇತೃತ್ವವನ್ನು ಸಹ ಸಂಚಾಲಕ ನೌಷಾದ್ ಸೆಹಗನ್, ಸಮಿತಿಯ ಮುಖಂಡರುಗಳಾದ ದಯಾನಂದ ಸಾಗರ್, ಟಿ.ಆರ್.ಯಲ್ಲಪ್ಪ, ಎಂ.ಆರ್. ಜಗದೀಶ್, ಹನುಮಂತರಾಯಪ್ಪ, ದೊಡ್ಡೇಗೌಡ, ಗುರುಪ್ರಸಾದ್, ರುದ್ರೇಶ್, ಅನಿಲ್‌ಕುಮಾರ್, ಚಿಕ್ಕತಿಮ್ಮಯ್ಯ, ಆರ್.ಎನ್. ರಾಜಣ್ಣ, ಸಿ.ಸಿದ್ದಗಂಗಯ್ಯ, ಗಂಗರಾಜು, ಎಚ್.ಎಲ್.ರಾಮಚಂದ್ರಯ್ಯ, ಎಚ್.ಎನ್.ಗೋವಿಂದಯ್ಯ ಮೊದಲಾದವರು ವಹಿಸಿದ್ದರು.

ವರದಿ: ನೌಷಾದ್ ಸೆಹಗನ್

ಅಂಗನವಾಡಿಗಳ ನಿರ್ವಹಣೆಯ ಬಾಲ ವಿಕಾಸ ಸಮಿತಿ ಪುನರ್ರೂಪಿಸುವ ಆದೇಶಕ್ಕೆ ವಿರೋಧ

ಅಂಗನವಾಡಿಗಳ ನಿರ್ವಹಣೆಗೆ ಇರುವ ಬಾಲ ವಿಕಾಸ ಸಮಿತಿಯನ್ನು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮಾದರಿಯಲ್ಲಿ ಪುನರ್ ರೂಪಿಸಿದ 22-01-2018ರ ಆದೇಶವು ಒಳಗೊಂಡಿರುವ ಹಲವು ಅಂಶಗಳಿಗೆ ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಆಕ್ಷೇಪಣೆಗಳನ್ನು ಸಲಿಸಿದೆ. ಅದು ಅಂಗನವಾಡಿ ನೌಕರರನ್ನು ನಿಯಂತ್ರಿಸುವ ಆದೇಶವಾಗದೇ, ವಾಸ್ತವ ಪರಿಸ್ಥಿತಿ ಆಧಾರದಲ್ಲಿ ಐಸಿಡಿಎಸ್ ಸ್ನೇಹಿಯಾದ ಬಾಲವಿಕಾಸ ಸಮಿತಿ ರಚನೆಗೆ ಮುಂದಾಗಬೇಕೆಂದು ಸಿಐಟಿಯು ನೇತೃತ್ವದ ಅಂಗನವಾಡಿ ನೌಕರರ ಸಂಘ ಸಿದ್ದಾಪುರದ ತಹಶಿಲ್ದಾರರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದೆ.

ಮನವಿಯ ಮುಖ್ಯ ಅಂಶಗಳು :

1) ಹಿಂದಿನ ಸುತ್ತೋಲೆಯಲ್ಲಿರುವ ಕೆಲವು ನ್ಯೂನತೆಗಳ ಆಧಾರದಲ್ಲಿ, ಸ್ಥಳೀಯ ಸ್ಥಾಪಿತ ಹಿತಾಸಕ್ತಿಗಳ ರಾಜಕೀಯಕ್ಕೆ ಅಂಗನವಾಡಿ ನೌಕರರು ಬಲಿಪಶುವಾಗುವುದನ್ನು ತಪ್ಪಿಸಲು ಹಾಗೂ ಸರ್ಕಾರದ ಉತ್ತಮ ಯೋಜನೆಗಳ ಜಾರಿಗೆ ಸ್ಥಳೀಯವಾದ ನೂರೆಂಟು ಕಾರಣನೀಡಿ ಅಡ್ಡಗಾಲು ಹಾಕುವುದನ್ನು ತಡೆಯುವ ಮಹತ್ವದ ಉದ್ದೇಶದಿಂದ, ಫಲಾನುಭವಿ ತಾಯಂದಿರ ಜೊತೆಗೆ ಜಂಟಿ ಖಾತೆ ಆಗಬಹುದೆಂದು ಸಿಐಟಿಯು ಹೇಳಿತ್ತೇ ವಿನಃ, ಅಂಗನವಾಡಿ ನೌಕರರ ಪ್ರತಿಯೊಂದು ಆಗುಹೋಗುಗಳನ್ನು, ಚಲನವಲನಗಳನ್ನು ನಿಯಂತ್ರಿಸುವ ಅಧಿಕಾರವನ್ನು ಈ ಬಾಲ ವಿಕಾಸ ಸಮಿತಿಗೆ ಕೊಡಿ ಎಂದು ಕೇಳಿಲ್ಲ. ಈ ಅಂಶವನ್ನು ತೆಗೆಯಬೇಕು.
2) ಇಂದಿನ ಶೈಕ್ಷಣಿಕ ವ್ಯವಸ್ಥೆಯಲ್ಲಿ, ಶಾಲಾಪೂರ್ವ ಶಿಕ್ಷಣಕ್ಕೂ, ಮೇಲಿನ ಹಂತದ ಯಾವುದೇ ಶಿಕ್ಷಣಕ್ಕೂ ವ್ಯತ್ಯಾಸವಿದೆ. ಸಮುದಾಯದ ಕೇಂದ್ರವಾಗಿ ಅಂಗನವಾಡಿ ಇರುವುದರಿಂದ, ಪ್ರಾಥಮಿಕ–ಪ್ರೌಢ ಶಾಲೆಗಳಿಗಿಂತ ಅಂಗನವಾಡಿಗಳಿಗೆ ಫಲಾನುಭವಿಗಳ ಸಂಪರ್ಕ ದಿನನಿತ್ಯವೂ ಹೆಚ್ಚು ಇರುತ್ತದೆ. ಮೇಲಾಗಿ ಅಂಗನವಾಡಿ ನೌಕರರು ಉದ್ಯೋಗ ಭದ್ರತೆ ಇಲ್ಲದ ವಿಭಾಗವಾಗಿರುತ್ತಾರೆ. ಹಾಗಾಗಿ, ಫಲಾನುಭವಿ ತಾಯಂದಿರ ಜೊತೆಗೆ ಜಂಟಿ ಖಾತೆ ಮಾಡಬಹುದೇ ವಿನಃ, ಈ ಆದೇಶದಲ್ಲಿರುವಂತೆ ಇಡೀ ಅಂಗನವಾಡಿ ಕೇಂದ್ರಗಳನ್ನೇ ನಿಯಂತ್ರಿಸುವ, ಕಾರ್ಯಕರ್ತೆ ಮತ್ತು ಸಹಾಯಕಿಯರ ಚಲನವಲನ ನಿಯಂತ್ರಿಸುವ ಅಧಿಕಾರ, ಅಂಗನವಾಡಿ ನೌಕರರ ಹಾಜರಾತಿ ನಿಯಂತ್ರಿಸುವ, ರಜೆ ಮಂಜೂರು ಮಾಡುವ, ಇವರ ರಜಾ ಅವಧಿಯಲ್ಲಿ ತೊಂದರೆಯಾಗದಂತೆ (ಪರ್ಯಾಯ ವ್ಯವಸ್ಥೆ) ನೋಡಿಕೊಳ್ಳುವ, ಕೆಲಸದ ಕುರಿತು ಸಮಿತಿಯವರಿಗೆ ಮತ್ತು ಅಧ್ಯಕ್ಷರಿಗೆ ತೃಪ್ತಿಯಾಗದಿದ್ದರೆ, ಇವರ ಅನುಮತಿ ಇಲ್ಲದೇ ಗೈರು ಇದ್ದರೆ ಸಿಡಿಪಿಓಗೆ ದೂರು ಕೊಡುವ ಅಧಿಕಾರಗಳನ್ನು ಈ ಸಮಿತಿಗೆ ಮತ್ತು ಅಧ್ಯಕ್ಷರಿಗೆ ಬಿಟ್ಟು ಕೊಟುವುದು ಇನ್ನೊಂದು ಅತಿರೇಕಕ್ಕೆ ಹೋಗುತ್ತದೆ. ಉದ್ಯೋಗ ಭದ್ರತೆ ಇಲ್ಲದ ಗೌರವಧನ ಕೆಲಸವಾಗಿರುವುದರಿಂದ ಅಂಗನವಾಡಿ ನೌಕರರು ಈ ಸಮಿತಿಯ ಕೆಲಸದ ಒತ್ತಡ ಮತ್ತು ಸಮಿತಿ ಮತ್ತು ಅಧ್ಯಕ್ಷರ ಪ್ರಕಾರ್ಯಗಳ ಫಲಿತಾಂಶಗಳಿಂದ ಮಾನಸಿಕವಾಗಿ ತೊಂದರೆಗೀಡಾಗುತ್ತಾರೆ. ಹಾಗಾಗಿ ಈ ಪ್ರಕಾರ್ಯಗಳನ್ನು ಹೇರುವ ಅಂಶಗಳನ್ನು ಕೈಬಿಡಬೇಕು.
3) ಸಮುದಾಯ ಆಧಾರಿತ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗೆ ಈ ಸಮಿತಿಯಲ್ಲಿ ಅವಕಾಶ ಬೇಡ.
4) ಇಲಾಖಾ ಪ್ರತಿನಿಧಿಗಳ ಹಾಜರಾತಿಯಲ್ಲಿಯೇ– ಸಿಡಿಪಿಓ ಅಥವಾ ಸುಪ್ರವೈಜರ್– ಈ ಬಾಲ ವಿಕಾಸ ಸಮಿತಿ ಆಯ್ಕೆ ಪ್ರಕ್ರಿಯೆ ನಡೆಯಬೇಕು.
5) ಅಂಗನವಾಡಿ ಕೇಂದ್ರಗಳ ಮೇಲಿನ ಇಲಾಖೆಯ ನಿಯಂತ್ರಣವನ್ನು ಬಿಟ್ಟುಕೊಡುವ ಈ ಆದೇಶದಿಂದ ಅಂಗನವಾಡಿ ಕೇಂದ್ರಗಳ ಮತ್ತು ಕಾರ್ಯಕರ್ತೆ ಮತ್ತು ಸಹಾಯಕಿಯರ ಮೇಲಿನ ಸಂಪೂರ್ಣ ನಿಯಂತ್ರಣದ ಅಧಿಕಾರವನ್ನು ಕಳಕೊಳ್ಳುವ ಅಪಾಯ ಇದೆ. ಇದರಿಂದ ಯೋಜನೆಯ ಮೂಲ ಆಶಯ, ಉದ್ದೇಶಗಳ ಜಾರಿಗೆ ಕುತ್ತು ಬರಲಿದೆ.

ಜಿಲ್ಲಾ ಸಮಿತಿ ಅಧ್ಯಕ್ಷರಾದ ಯಮುನಾ ಗಾಂವ್ಕರ್, ಸುಧಾ ಕೊಂಡ್ಲಿ ಅಧ್ಯಕ್ಷರು, ಸಿದ್ದಾಪುರ ತಾಲೂಕು ಸಮಿತಿ ಶ್ರೀಮತಿ ನಾಯ್ಕ ತಾ. ಕಾರ್ಯದರ್ಶಿ ಮತ್ತು ಪದಾಧಿಕಾರಿಗಳಾದ ಗೀತಾ ಕೊಂಡ್ಲಿ, ಗೀತಾ ನಾಯ್ಕ ದೇವಿಸರ, ರಾಜೆಯಾ ಕಾನ್ಸೂರು, ಸುಮನಾ ಗೌಡರ್, ಸಾವಿತ್ರಿ ಗೌಡ, ಸುಮನಾ ರಾವ್ ಮುಂತಾದವರು ಪ್ರತಿಭಟನೆ ನೇತೃತ್ವ ವಹಿಸಿದ್ದರು.

– ಯಮುನಾ ಗಾಂವ್ಕರ್

ವಿಜಯಪುರದಲ್ಲಿ ರೈತರ ಪ್ರತಿಭಟನಾ ಮೆರವಣಿಗೆ

ಅಖಿಲ ಕರ್ನಾಟಕ ರೈತ ಹಾಗೂ ಕೃಷಿ ಟ್ರ್ಯಾಕ್ಟರ್ ಮಾಲಿಕರು ಹಿತಾಭಿವೃದ್ಧಿ ಸಂಘ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾ ಸಮಿತಿಗಳು ವಿಜಯಪುರ ವತಿಯಿಂದ ರೈತರ ವಿವಿಧ ಬೇಡಿಕೆ ಈಡೇರಿಕೆಗಾಗಿ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಪ್ರತಿಭಟನಾ ಹಮ್ಮಿಕೊಂಡು, ಗಾಂಧಿವೃತ್ತ ಮಾರ್ಗವಾಗಿ ಬಸವೇಶ್ವರವೃತ್ತ, ಅಂಬೇಡ್ಕರ್ ವೃತ್ತದ ಮೂಲಕ ಹಾಯ್ದು ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಜಿಲ್ಲಾಡಳಿತದ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಸಿದ್ರಾಮಯ್ಯನವರಿಗೆ ಮನವಿ ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ರೈತರು ಕೇಂದ್ರ ಹಾಗೂ ರಾಜ್ಯ ಸರ್ಕಾರ ರೈತ ವಿರೋಧ ನೀತಿಗೆ ದಿಕ್ಕಾರ ಹಾಕಿದರು.

ಈ ಸಂದರ್ಭದಲ್ಲಿ ಕೆಪಿಆರ್‌ಎಸ್ ರಾಜ್ಯ ಉಪಾಧ್ಯಕ್ಷರಾದ ಭೀಮಶಿ ಕಲಾದಗಿ ಮಾತನಾಡಿ, ಕೇಂದ್ರ ಸರ್ಕಾರ ಕೇಂದ್ರ ರಾಜ್ಯ ಸರ್ಕಾರಗಳ ರೈತರು ಹೆಚ್ಚಿನ ಸಂಖ್ಯೆಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನ ಸಾಲ ಮನ್ನಾ ಮಾಡಬೇಕು. ಎಸ್.ಎಂ. ಶ್ರೀ ಸ್ವಾಮಿನಾಥನ ಇವರ ನೇತೃತ್ವದ ಆಯೋಗದ ಶಿಫಾರಸಿನಂತೆ ದರ ನಿಗಧಿ ಮಾಡಿ ತಕ್ಷಣ ಜಾರಿ ಮಾಡಬೇಕು. ಸರ್ಕಾರ ಭೂಮಿ ಸಾಗುವಳಿ ಮಾಡುವವರಿಗೆ ಹಕ್ಕು ಪತ್ರ ನೀಡಬೇಕು. ಸರ್ಕಾರ ಭೂಮಿ ಹಾಗೂ ಅರಣ್ಯ ಭೂಮಿ, ಗೋಮಾಳ ಇವುಗಳಿಗೆ ಕಂದಾಯ ಸಚಿವರು ವಿಧಾನಸೌದದಲ್ಲಿ ಚರ್ಚೆಮಾಡಿ ತೀರ್ಮಾನ ಮಾಡಿದ್ದಾರೆ. ತಕ್ಷಣ ರೈತರಿಗೆ ಹಕ್ಕುಪತ್ರ ನೀಡಬೇಕೆಂದು ಒತ್ತಾಯಿಸಿದರು.

ಸಮಗ್ರ ನೀರಾವರಿ ಯೋಜನೆ ಹಾಗೂ ಕೆರೆ ತುಂಬುವ ಯೋಜನೆಗಳು ಕಳಪೆ ಮಟ್ಟದ ಕಾಮಗಾರಿ ನಡೆದಿದ್ದು, ಅಂತಹವರ ಮೇಲೆ ಜಿಲ್ಲಾ ಉಸ್ತುವಾರಿ ಸಚಿವರು ಕಾನೂನಿನ ಕ್ರಮ ತೆಗೆದುಕೊಂಡು ಸಮಾರೋಪಾಯದಲ್ಲಿ ಕೆಲಸ ಮಾಡಿ. ಜಿಲ್ಲೆಗೆ ಅಂಟಿಕೊಂಡಿರುವ ಬರಗಾಲ ಹಣೆಪಟ್ಟಿಯನ್ನು ಅಳಿಸಿಹಾಕಿ ಜಿಲ್ಲೆಗೆ ಸಂಪೂರ್ಣ ನೀರಾವರಿ ಮಾಡಿ ಶಾಶ್ವತ ಬರಗಾಲ ಮುಕ್ತಗೊಳಿಸಬೇಕೆಂದು ಹೇಳಿದರು.

ರೈತ ಸಂಘ ಜಿಲ್ಲಾಧ್ಯಕ್ಷರಾದ ಅಣ್ಣಾರಾಯ ಈಳಗೇರ, ಟ್ರ್ಯಾಕ್ಟರ್ ಸಂಘದ ಅಧ್ಯಕ್ಷ ಜಿ.ಎಸ್. ಪಾಟೀಲ ಮಾತನಾಡಿ, ಈರಣ್ಣ ಕಾಪ್ಸೆ ಉಪಾಧ್ಯಕ್ಷರು, ಪುಂಡಲಿಕ ಹಂದಿಗನೂರ ರೈತ ಸಂಘ ಸಂಚಾಲಕ ಮಾತನಾಡಿದರು. ಈ ಸಂದರ್ಭದಲ್ಲಿ ರಾಮಣ್ಣ ಶಿರಗೊಳ, ಭಿಮರಾಯ ಪೂಜಾರಿ, ಕಾಜಾಸಾಬ ಕೊಲಾರ, ಧರ್ಮ ರಾಠೋಡ ಇಂಚಗೇರಿ, ಪರಶುರಾಮ ಮಂಟೂರ, ಈರಾಬಾಯಿ ಹಜೇರಿ, ಸೋನಾಬಾಯಿ ರಾಠೋಡ, ತಡವಲಗಾ ಮೋದಿನಸಾಬ, ಯಮನಪ್ಪ ಚೂರಿ, ಕಾತ್ರಾಳ ಸದಕಾರ ತುಪ್ಪದ, ಸುಭಾಸ ತಳಕೇರಿ, ರಾಜು ಕಳಗೊಂಡ ಮುಂತಾದವರು ಇದ್ದರು.

– ಎಸ್.ಜಿ.ಪಾಟೀಲ

ನೀರು ಬಿಡುವಂತೆ ಅನಿರ್ದಿಷ್ಟ ಸತ್ಯಾಗ್ರಹ

ಈ ವರ್ಷ ಮುಂಗಾರು ಬೆಳೆಗಳು ಅತಿವೃಷ್ಟಿಯಿಂದ ನಷ್ಟವಾಗಿವೆ. ಹಿಂಗಾರು ಬೆಳೆಗಳು ಖಂಡಿತ ಬರುತ್ತವೆಂದು ರೈತರು ಸಾಲ ಸೋಲ ಮಾಡಿ ಶೇಂಗಾ, ಸಜ್ಜೆ, ಹತ್ತಿ, ಮೆಣಸಿನಕಾಯಿ, ಭತ್ತ ಇತ್ಯಾದಿ ಬೆಳೆಗಳನ್ನು ಬೆಳೆದಿದ್ದಾರೆ. ಅವೆಲ್ಲ ಕೈಗೆ



ಬರಲು ಇನ್ನೂ 25 ದಿನಗಳ ನೀರು ಅವಶ್ಯಕ. ಕೃಷ್ಣಾ ಮೇಲ್ದಂಡೆ ಯೋಜನೆಯ ಭೀಮರಾಯನಗುಡಿ ವಲಯದ ಮುಖ್ಯ ಅಭಿಯಂತರು ನೀರು ನಿಲ್ಲಿಸಿದ್ದಾರೆ. ಯಾದಗಿರ ಜಿಲ್ಲೆಯ ಶಹಾಪುರ ಮತ್ತು ಸುರಪುರ, ಬಿಜಾಪುರ ಜಿಲ್ಲೆಯ ಸಿಂದಗಿ, ಇಂಡಿ ಹಾಗೂ ಕಲಬುರ್ಗಿಯ ಜೇವರ್ಗಿ ತಾಲೂಕುಗಳ ರೈತರು ಇದರಿಂದ ಹೈರಾಣಾಗಿದ್ದಾರೆ. ಈ ಬೆಳೆಗಳ ರಕ್ಷಣೆಗೆ ಮಾರ್ಚ್ 20ರಿಂದ ಎಪ್ರಿಲ್ 10ರವರೆಗೆ ನೀರು ಬಿಡಬೇಕೆಂದು ಮಾರ್ಚ್ 16ರಿಂದ ಅನಿರ್ದಿಷ್ಟ ಸತ್ಯಾಗ್ರಹ ಹೂಡಿ ಒತ್ತಾಯಿಸುತ್ತಿದ್ದಾರೆ. ಅವರು ನೀರಾವರಿಯ ಇತರ ಹಲವು ಸಮಸ್ಯೆಗಳ ಬಗ್ಗೆಗೂ ಮುಖ್ಯ ಅಭಿಯಂತರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

–ದಾವಸಲಾಬ್ ನದಾಫ್

ಮಹಿಳೆಯರ ಪ್ರಜಾಪ್ರಭುತ್ವದ ಹಕ್ಕುಗಳ ಉಳಿವಿಗಾಗಿ ರಾಜಭವನ ಚಲೋ

ಮಹಿಳೆಯರ ಪ್ರಜಾಪ್ರಭುತ್ವದ ಹಕ್ಕುಗಳ ಉಳಿವಿಗಾಗಿ ರಾಜಭವನ ಚಲೋ ಮಾರ್ಚ್ 16ರಂದು ಜನವಾದಿ ಮಹಿಳಾ ಸಂಘಟನೆ ಮತ್ತು ಸಿಐಟಿಯು ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ನೇತೃತ್ವದಲ್ಲಿ ನಡೆಯಿತು. ಸಿಐಟಿಯು ರಾಜ್ಯಾಧ್ಯಕ್ಷರಾದ ಎಸ್. ವರಲಕ್ಷ್ಮಿ, ಜನವಾದಿ ಮಹಿಳಾ ಸಂಘಟನೆಯ ಶಾರದ, ಅಂಗನವಾಡಿ ನೌಕರ ಸಂಘಟನೆಯ ಸುನಂದ ಕೇಂದ್ರ ಸರ್ಕಾರಿ ನೌಕರರ ಸಮನ್ವಯ ಸಮಿತಿಯ ಜಾನೆಟ್ ಪ್ರೇಮ್,




ಬಿ.ಇ.ಎಫ್.ಐ.ನ ಲಲಿತ ಶೆಣಯ, ಎ.ಐ.ಐ.ಇ.ಎ. ನ ವಿಜಯಕುಮಾರಿ, ಬಿಸಿಯೂಟ ಸಂಘಟನೆಯ ಮಾಲಿನಿ ಮೇಸ್ತ ಸೇರಿದಂತೆ ಅನೇಕರಿದ್ದರು.

ಅತಿಥಿ ಅಂಕಣ



ಡಾ. ವಿನಯಾ ಒಕ್ಕುಂದ

'ಬೇಸರವಾಗಿದೆ ಮಾತು ಭಾರವಾಗಿದೆ ಮೌನ'



ಜನಪ್ರಜ್ಞೆಯನ್ನು ದಿಕ್ಕುತಪ್ಪಿಸಿ, ಬಹಿರಂಗದ ಆಡಂಬರಕ್ಕೆ ಒಗ್ಗಿಸಿದಾಗಲೇ ಪ್ರಜಾಪ್ರಭುತ್ವದ ರೋಗಗ್ರಸ್ಥ ಸ್ಥಿತಿಯ ಆರಂಭವಾಗುತ್ತದೆ. ಜನರು, ಮಾತಿನ ಆರ್ಭಟವನ್ನು, ಆರಾಧಿಸುತ್ತ; ಮಾತಿನ ಟೊಳ್ಳನ್ನು ಮರೆತುಬಿಡುತ್ತಾರೆ. ಕೊಲ್ಲುವವನು ಸಾಯುವವನ ಭಾಷೆಯಲ್ಲಿ ಮಾತನಾಡುತ್ತಿರುವುದನ್ನು ಗಮನಿಸುವುದಿಲ್ಲ. ಅಲ್ಲಿಗೆ ಪರ್ಯಾಯವೇ ಇಲ್ಲದ ಇಕ್ಕಟ್ಟೊಂದು ನಿರ್ಮಾಣವಾಗುತ್ತದೆ. ವಿರೋಧಿಸಬೇಕಾದವರೂ ಇದೇ ಮಾದರಿಯಲ್ಲಿ ವ್ಯವಹರಿಸಬೇಕಾಗುತ್ತದೆ. ಪ್ರಾಮಾಣಿಕವಾದ ವೈವಿಧ್ಯಮಯವಾದ ವಿಧಾನಗಳು ಸಾಯತೊಡಗುತ್ತವೆ. ನಮ್ಮನ್ನು ನಾವು ನಮ್ಮದಲ್ಲದ ಹಾಗೆ ಮರುರೂಪಿಸುವ ದಣಿವು ಉಂಟಾಗುತ್ತದೆ. ಭಾರತದ ಮಾನವೀಯ ಮನಸ್ಸುಗಳು ಜಾಗರೂಕವಾಗಲೇಬೇಕಿದೆ. ಕೆಟ್ಟ ಮಾದರಿಗಳ ಎದುರು ವಿವೇಕಪೂರ್ಣವಾದ ಪರ್ಯಾಯವನ್ನು ಆಯ್ದುಕೊಳ್ಳಬೇಕಿದೆ.

ಮಾತೆಂಬ ಜ್ಯೋತಿ ಈ ಲೋಕವನ್ನು ಬೆಳಗದಿದ್ದರೆ ಸಮಸ್ತ ಲೋಕವೇ ಅಂಧಃಕಾರದಲ್ಲಿರುತ್ತಿತ್ತು ಎನ್ನುತ್ತಾನೆ ದಂಡಿ. ಮನುಷ್ಯ ಜಾತಿಯನ್ನು ಪ್ರಾಣಿ ಜಗತ್ತಿನಿಂದ ಎತ್ತರಿಸಿದ ಬಲುಮುಖ್ಯ ಲಕ್ಷಣ ಮಾತು. ಮಾತಿನ ಅನನ್ಯ ಸಾಧ್ಯತೆಗಳಲ್ಲಿ ಮನುಷ್ಯ ಸಂಸ್ಕೃತಿ ಬೆಳೆದು ನಿಂತಿದೆ. ನಾಗರಿಕತೆಯು ಚಾಚಿ ಹಬ್ಬಿದೆ. ಮಾತು ಮನುಷ್ಯನ ಅಂತರಂಗವನ್ನು ಬಹಿರಂಗದ ವಿದ್ಯಮಾನಗಳನ್ನು ಬೆರಕೆಗೊಳಿಸುವ ದ್ರಾವಣವಾಗಿದೆ. ಮಾತಿನ ಸಾಮರ್ಥ್ಯದ ಬಗ್ಗೆ ಮನುಷ್ಯಲೋಕ ಬೆರಗಾಗಿದೆ, ಸಂಭ್ರಮಿಸಿದೆ. ಜಾಗರೂಕವಾಗಿ ಅದನ್ನು ಕಾದುಕೊಂಡು ಬರಲು ತವಕಿಸಿದೆ. ಆದಿಮಾನವನ ಉದ್ಗಾರ ರೂಪಿಯಾದ ಮಾತು ಒಂದಾಗಿ ಉಳಿಯಲಿಲ್ಲ. ಹಲವಾಯಿತು. ಅನಾದಿ ಜೀವಜಾತದ ಅಗಣಿತ ಕೊಂಬೆ-ರೆಂಬೆಗಳಂತೆ ವೈವಿಧ್ಯಮಯವಾದ ಭಾಷಾಲೋಕ ತೆರೆಯಿತು. ಒಂದೇ ನೆಲ-ಜಲದ ಗೂಡೊಳಗೆ ಹತ್ತೆಂಟು ಭಾಷೆಗಳು ಪರಸ್ಪರ ಹತ್ತಿರಕ್ಕೂ-ದೂರಕ್ಕೂ ಸತತವಾಗಿ ಮಿಡಿಯುತ್ತ, ಮನುಷ್ಯನ ಸೃಜನಶೀಲ ಪ್ರಬುದ್ಧತೆಯನ್ನು ಬೆಳೆಸಿದವು. ಮಾತೆಂಬ ಮಂತ್ರಕ್ಕೆ ಬದುಕಿನ ಸರಿ ತಪ್ಪುಗಳನ್ನು ಶೋಧಿಸಿಕೊಂಡ ವಿಸ್ತರಿಸಿಕೊಂಡ ಅನುಭವದ ತ್ರಾಣವಿದೆ. ಈ ವಿವೇಕವೇ ಮಾತೆಂಬುದು ನಾಭಿಮೂಲಕ್ಕೆ ಲಗತ್ತಾದುದು ಎಂಬ ಕರುಳ ಭಾವವನ್ನು ಮನನಗೊಳಿಸಿದೆ. ಹಾಗಿಲ್ಲದಿದ್ದರೆ ಅದು ಮಾತಲ್ಲ, ಬರಿಯ ಘನ ಸ್ವನಾದಿ ಧ್ವನಿಗಳ್- ಎಂದು ಎಚ್ಚರಿಸುತ್ತಾನೆ ವೈಯಾಕರಣಿ ಕೇಶಿರಾಜ. ಪ್ರಪಂಚದ ಪ್ರತಿಯೊಂದು ಭಾಷೆಯೂ ಜೀವನದ ದರ್ಶನವನ್ನು ತನ್ನ ನುಡಿಗಳಲ್ಲಿ ಶೇಖರಿಸಿದೆ. ಸಾವಿರಾರು ವರ್ಷಗಳ ನುಡಿ ಪರಂಪರೆಯಿರುವ ಕನ್ನಡದಲ್ಲಿ ಮಾತಿಗಿರಬೇಕಾದ ಸ್ಫಟಿಕ ಶುದ್ಧತೆ, ಧಾರಕತೆ, ಪ್ರಕಾಶಮಾನತೆ, ಚಿರಂತನತೆ, ಮಾನವೀಯ ಬೆಸುಗೆ, ಧೀಮಂತಿಕೆಗಳ ಕುರಿತು ಮರಳಿ ಮರಳಿ ವಿಶ್ಲೇಷಿಸಲಾಗಿದೆ. 'ಅಮೃತವಾಹಿನಿಯೊಂದು ಹರಿಯುತಿದೆ ಮಾನವನ ಎದೆಯಿಂದಲೆದೆಗೆ ಸತತ'- ಎಂದ ಕವಿವಾಣಿಯ ಒಡಲಲ್ಲಿರುವುದೂ ಭಾವವನ್ನು ಸಂವಹನಿಸುವ ಭಾಷೆಯ ಅನೂಹ್ಯತೆಯ ಬೆರಗೇ. 'ನಾಲಗೆ ಪ್ರಮಾಣ', 'ನುಡಿ ಸೂತಕ'- ಇಂತಹ ನುಡಿಗಟ್ಟುಗಳಲ್ಲಿ ಮಾತಿನ ಅಗಾಧ ಶಕ್ತಿಯನ್ನು ತೋರಿಗೊಡಲಾಗಿದೆ. ನಾವೀಗ ಆಡುನುಡಿಗಳು ಜನಭಾಷೆಗಳು ಮೃತವಾಗುವ ಕಾಲದಲ್ಲಿದ್ದೇವೆ. ಮಾತ್ರವಲ್ಲ ಮಾತಿನ ಅಗಾಧ ಸಾಮರ್ಥ್ಯವನ್ನು ಮನದಟ್ಟುಮಾಡಿಕೊಳ್ಳಬೇಕಾದ ಕಾಲದಲ್ಲೂ ಇದ್ದೇವೆ. ನುಡಿಗೌರವದ ವಿಸ್ಮೃತಿಯಿಂದ ಎಚ್ಚರಗೊಳ್ಳಬೇಕಾದ ಹೊತ್ತಿದು. ಇಂದಿನ ದಿನಮಾನದಲ್ಲಿ ಮಾತು ತನ್ನ ಅರ್ಥ ಪರಂಪರೆಯನ್ನು ಕಳೆದುಕೊಂಡು ಸತ್ತು ಬಾತು ನಾರುತ್ತಿರುವ ದಿಗಿಲಾಗುತ್ತಿದೆ. ಪ್ರಪಂಚಕ್ಕೆ ಪ್ರಳಯವಾಗಿ ಪ್ರಳಯದಲೆಗಳ ಮೇಲೆ ತೇಲುವ ಆಲದೆಲೆಯಲ್ಲಿ ಹೊಸ ಜೀವದ ಬೀಜವು ದಡಸೇರಿ ಹೊಸಹುಟ್ಟು ಸಂಭವಿಸಲಿ- ಎಂಬ ಆ ಹಳೆಯ ಮಿಥ್ ನೆನಪಾಗುತ್ತದೆ. ಥೇಟ್ ಹಾಗೇ, ಮಾತು ಅದೆಷ್ಟೇ ಸರ್ವಶಕ್ತವಾದರೂ ಅದೀಗ ಲೋಕದಿಂದಲೇ ಮರೆಯಾಗಿ ಬಿಡಲಿ ಅನ್ನಿಸುತ್ತಿದೆ.

ತೀವ್ರ ಅನಾರೋಗ್ಯದವನ ಮಾತು ನೆನಪಿನ ಅರಕೆಯಾಗಿ ಹದತಪ್ಪತೊಡಗಿದಂತೆಲ್ಲ, 'ಆಯಿತು, ಮುಗಿಯಿತು' ಎನ್ನುತ್ತೇವೆ. ಮಾತು ಸೋಲುವ ಈ ದುರಂತ ಬದುಕಲ್ಲಿ ಸಂಭವಿಸಿದರೆ ಸರಿ, ಸಮಾಜ ಹೀಗೇಕೆ ಉಬ್ಬಸಗೊಂಡರೆ? ವ್ಯಕ್ತಿಯೊಬ್ಬ ಕಡೆಯ ಹಾಸಿಗೆಯಲ್ಲಿ ಬಿದ್ದುಕೊಂಡು ಸುತ್ತಲನ್ನು ಬರಿದೇ ಮಿಕಿಮಿಕಿ ದಿಟ್ಟಿಸುತ್ತ ಗುರುತು ಹಿಡಿಯಲಾಗದ ನೆನಪಿನ ಜೀಕು ಮೀಟಲಿಕ್ಕಾಗದ ನಿರ್ಭಾವುಕತೆ ಅನುಭವಿಸುತ್ತಾನಲ್ಲ ಹಾಗೆ, ಜನರು ತಮ್ಮ ಸುತ್ತಲಿನ ವಿದ್ಯಮಾನಗಳನ್ನು ಅರ್ಥೈಸಿಕೊಳ್ಳುವಲ್ಲಿ ಸೋಲುತ್ತಿದ್ದಾರೆ. ಮಾತು-ಮೌನ, ನಗು-ಅಳುಗಳೆಲ್ಲವೂ ನಿರುಪಯುಕ್ತವಾಗುತ್ತಿವೆ.

ಜನಪದರು 'ತೋಳ ಬಂತಲೆ ತೋಳ' ಎಂಬ ಕಥೆಕಟ್ಟಿದ್ದರು. ಕುರಿಕಾಯುವ ಬಾಲಕ, ಜನರನ್ನು ಮೋಸ ಮಾಡುವುದನ್ನೇ ಖಯಾಲಿ ಆಗಿಸಿಕೊಂಡ. ಕಥೆಯ ಕೊನೆಗಾದರೂ ಮಾತಿನ ದುರುಪಯೋಗದ ದುರಂತವನ್ನು ಕಂಡ. ಗುಹೇಶ್ವರನೆಂಬ ಶಬುದವೂ ಸಿನೆ ಬಂಜೆಯಾಗುವುದನ್ನು ಅನುಭವಿಸಿದ. ಆದರೆ ನಾವೀಗ ಇಷ್ಟು ಸರಳವಾದ ಕಥನ ಕಟ್ಟಲಾರೆವು. ಸುಳ್ಳು ಎಂದರೇ ಮಾತು ಎಂಬಂತಾಗಿದೆ. ಜನ ನಿಜವಾದ ಕಳಕಳಿ ಮತ್ತು ಢೋಂಗಿತನಗಳ ವ್ಯತ್ಯಾಸವನ್ನು ಗುರುತಿಸಲಾರದಷ್ಟು ದುರ್ಬಲರಾಗಿದ್ದಾರೆ. ತೋಳ ಬರುವುದಿಲ್ಲ, ಬಂತೆಂಬ ಮಾತು ನಿಲ್ಲುವುದಿಲ್ಲ. ಎದೆಗುದಿಯೂ ಮುಗಿಯುವುದಿಲ್ಲ.

ದಿನಬಳಕೆಯ ಮಾತಲ್ಲಿ ನಂನಮ್ಮ ಆಡುನುಡಿಯ ಸೊಗಡು ಮರೆಯಾಗಿದೆ. ಸಂಪರ್ಕ ಭಾಷೆಯಾಗಿ ನಾಗರಿಕ ಭಾಷೆ ಹುಟ್ಟಿದೆ. ಈ ನಾಗರಿಕ ಭಾಷೆಯು ಬಂಡವಾಳವಾದವು ನಿಗದೀಕರಣಗೊಳಿಸಿದ್ದು. ಇದು ಸ್ಥಾನಿಕ ಭಾಷೆ ಮತ್ತು ಯಾಜಮಾನ್ಯ ಭಾಷೆಗಳ ಸಂಕರರೂಪವಾದಾಗಲೂ ಅವುಗಳ ಮೂಲಧುನಿಯನ್ನು ಅರಗಿಸಿಕೊಂಡಿದ್ದಲ್ಲ. ಹಾಗಾಗಿ ಇದು ಜನಪರಂಪರೆಯ ಚಾರಿತ್ರಿಕ ಸ್ಮೃತಿಕೋಶವಾಗಿ ಬೇರೂರುವುದಿಲ್ಲ. 'ಮಾತು ಬಲ್ಲ' ಆದರೆ ಮಾತಿನ ಸತ್ವದ ಸ್ಪರ್ಶವಿಲ್ಲದ ಪೇಲವ ಸಮುದಾಯ ನಿರ್ಮಾಣಗೊಂಡಿದೆ. ಈ ಸಮುದಾಯವನ್ನು ಸುಳ್ಳುಗಳಿಂದ ನಂಬಿಸುವುದು, ಉದ್ರೇಕಕಾರಿ ಭ್ರಮೆಗಳಿಂದ ವಿಕೃತಗೊಳಿಸುವುದು, ಭಾವಾವೇಶಕ್ಕೆ ಈಡು ಮಾಡುವುದು ಸುಲಭವಾಗುತ್ತದೆ. ಮತೀಯವಾದಿ ಕೋಮುವಾದಿ ರಾಜಕಾರಣಕ್ಕೆ ಮತ್ತು ಸಂಘಟನೆಗಳಿಗೆ ಯುವ ಸಮೂಹ ಬಲಿಯಾಗುವ ಸುಲಭದಾರಿಯಿದು. ಅವಕಾಶವಾದಿ ರಾಜಕಾರಣ ಜನರ ಮನಸ್ಸಿನಲ್ಲಿ ವಿದ್ರೋಹದ ಬೀಜಗಳನ್ನು ಬಿತ್ತುತ್ತದೆ. ಅವರನ್ನು ಬಲಿಹಾಕಿ ತನ್ನ ರಕ್ಷಣಾ ಗೋಡೆಯಾಗಿಸಿಕೊಳ್ಳುತ್ತದೆ.

ಸ್ವಾತಂತ್ರ್ಯಕಾಲದ ಮೌಲ್ಯಗಳೀಗ ನಮ್ಮ ಸ್ಮೃತಿಕೋಶದಿಂದ ಅಳಿಸಿಹೋಗಿದೆ. ಸುಳ್ಳನ್ನು ಯಾರು ಎಲ್ಲಿ ಯಾಕೆ ಬಳಸುತ್ತಿದ್ದಾರೆ ಎಂದು ಗಮನಿಸಿದರೆ ನಾವು ತಲುಪಿರುವ ಅಧಃಪತನದ ಅಂದಾಜಾಗುತ್ತದೆ. ದೇಶದ ಉನ್ನತ ಅಧಿಕಾರ ಸ್ಥಾನದಲ್ಲಿರುವವರು ತಮ್ಮನ್ನು ಪಕ್ಷದ ವಕ್ತಾರರು ಎಂದು ತಿಳಿದಿದ್ದಾರೆ. ದೇಶದ ನೇತಾರರೆಂದಲ್ಲ. ದುಷ್ಟನುಡಿ ದುಷ್ಟ ಆಲೋಚನೆಯ ಪ್ರತೀಕವಾಗಿದ್ದ ಹಿಟ್ಲರನ ಬಲಗೈಯಾಗಿದ್ದ ಗೊಬೆಲ್ಸ, ಜನಮಾನಸದಲ್ಲಿ ಜನಾಂಗೀಯ ದ್ವೇಷವನ್ನು ಬಿತ್ತುವಾಗ; ಒಂದು ಸುಳ್ಳನ್ನು ನೂರು ಬಾರಿ ಹೇಳಿದರೆ ಅದು ಸತ್ಯವಾಗಿ ಅನುವಾದಗೊಳ್ಳುತ್ತದೆ ಎಂಬ ವಿಕ್ಷಿಪ್ತವಾದವನ್ನು ಕಾರ್ಯರೂಪಕ್ಕೆ ತಂದಿದ್ದನಂತೆ. ಸದ್ಯದ ಭಾರತದಲ್ಲಿ ಗೊಬೆಲ್ಸರು ಸುಳ್ಳನ್ನು ಸತ್ಯವಾಗಿಸಲು ಇದೇ ಮಂತ್ರವನ್ನು ಉಚ್ಚರಿಸುತ್ತಿದ್ದಾರೆ. ತಂತ್ರೋಪಾಯವಾಗಿ ಅತ್ಯಾಧುನಿಕ ಮಾಧ್ಯಮಗಳನ್ನು ಬಳಸುತ್ತಿದ್ದಾರೆ. ಮಾಧ್ಯಮಗಳನ್ನು ಖರೀದಿ ಮಾಡಿ ತಮ್ಮ ಜಾಹೀರುನಾಮಾ ಮಾಡಿಕೊಂಡಿದ್ದರಿಂದ, ಮಾಧ್ಯಮಗಳನ್ನು ನಂಬುವ ಜನರನ್ನು ಮೋಸಗೊಳಿಸುವುದು ಸುಲಭವಾಯಿತು. ಈಗ ನಡೆಯುತ್ತಿರುವುದು ಮುಂದಿನ ಪರ್ವ. ಮಾತೀಗ ಕನಿಷ್ಟ ಶಿಷ್ಟಾಚಾರ ಮೀರಿದೆ. ಪ್ರಧಾನ ಮಂತ್ರಿಗಳು ರಾಜ್ಯಗಳಿಗೆ ಭೇಟಿಕೊಡುವ, ಭಾಷಣ ಮಾಡುವ ವಿಧಾನವನ್ನು ಗಮನಿಸಿ. ಗಣರಾಜ್ಯ ವ್ಯವಸ್ಥೆಯಲ್ಲಿ ಕಾಪಾಡಿಕೊಂಡು ಬರಬೇಕಾದ ಸೌಹಾರ್ದ ಸಂಬಂಧಕ್ಕೆ ಆಸ್ಪದವೇ ಕಾಣುತ್ತಿಲ್ಲ. ಜನರ ಸಂಕಟ-ಸಮಸ್ಯೆಗಳ ಬಗ್ಗೆ ಕನಿಷ್ಠ ಕಾಳಜಿಯೂ ಇರುವುದಿಲ್ಲ. ಅದು ಅಪ್ಪಟ ಪಕ್ಷ ರಾಜಕಾರಣದ ಚುನಾವಣಾ ಭಾಷಣವಾಗಿರುತ್ತದೆ. ಜನರ ಮನಸ್ಸನ್ನು ಬೇರೆಡೆ ಸೆಳೆಯಲು ಧಾರಾಳವಾಗಿ ಗಿಮಿಕ್ ಬಳಸಲಾಗುತ್ತದೆ. ಆಗ ರಾಜ್ಯಗಳ ಆಡುಭಾಷೆ ಆಪ್ತ ಬಾಂಧವನಂತೆ ಒದಗಿ ಬರುತ್ತದೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ವ್ಯಕ್ತಿಗಳ ಮಾತಿನಲ್ಲಿ ಸುಳ್ಳಿನ ನಿಯಾನ್ ದೀಪಗಳಿರುತ್ತವೆ ಎನ್ನುವುದು ಖಂಡಿತಾ, ಯಾವುದೇ ದೇಶದ ಸಜ್ಜನಿಕೆಯ ಲಕ್ಷಣವಲ್ಲ. ಸಂವಿಧಾನ ಬದ್ಧವಾಗಿ ಜನಪ್ರತಿನಿಧಿಗಳಾದವರು- ಒಂದು ಧರ್ಮವನ್ನು ಅನ್ಯ ಎಂದು ಕಲ್ಪಿಸಿ, ಸೇಡಿನ ಮಾತುಗಳನ್ನಾಡುವುದು; ಅಸಹ್ಯ ಲೈಂಗಿಕ ಶ್ಲೇಷೆಯ ಮಾತಾಡುವುದು ಇದು ಸರಿಯೇ? ಎಂದು ಪ್ರಶ್ನಿಸುವವರ ವಿರುದ್ಧವೂ ಕೀಳುಮಟ್ಟದಲ್ಲಿ ಭಾಷೆಯನ್ನು ಬಳಸುವುದು ಏನನ್ನು ಸೂಚಿಸುತ್ತದೆ? ಮಾತಿನ ಸಾವು, ಮಾನವೀಯತೆಯ ಸಾವೂ ಆಗಿದೆ. ಸಂವಿಧಾನದ ಜನತಂತ್ರದ ವಿರೋಧಿಗಳು, ಹತ್ಯೆಯ ಪ್ರಕರಣಗಳ ವಿಚಾರಣೆ ಸಿಬಿಐ ವಶದಲ್ಲಿದ್ದರೂ ಊರುಗಳಲ್ಲಿ, ರಸ್ತೆ-ಕೂಟುಗಳಲ್ಲಿ ಫ್ಲೆಕ್ಸ್‌ಗಳನ್ನು ಹಾಕಿ ಅನ್ಯದ್ವೇಷದ ವಿಷಗಾಳಿಯನ್ನು ಹರಡುತ್ತಲೇ ಇದ್ದಾರೆ. ಸಂವಿಧಾನಕ್ಕೆ ತೋರುವ ಈ ಅಗೌರವ, ಸಂವಿಧಾನ ಬದ್ಧವಾದ ಮಾತಿನ ಪಡಿ-ಪದಾರ್ಥಗಳನ್ನೇ ಕಳೆದುಹಾಕುತ್ತಿದೆ. ಬೆಳೆ ಬೆಳೆವಲ್ಲಿ ಕಳೆ ಬೆಳೆಯುತ್ತಿದೆ.

'ಸತ್ಯವನ್ನು ಮಾತನಾಡುವುದು ಒಬ್ಬ ಮರ್ಯಾದಸ್ಥ ಮನುಷ್ಯನ ಬೌದ್ಧಿಕ ಜವಾಬ್ದಾರಿ'- ಎನ್ನುತ್ತಾರೆ ಚಾಮಸ್ಕಿ. ಆದರೆ ಭಾರತದ ಮರ್ಯಾದಸ್ಥರೀಗ ಮೌನದ ಮೋಹಿಗಳಾಗಿದ್ದಾರೆ. ಮಾನವೀಯವಾಗಿ ಯೋಚಿಸುವುದು, ಸತ್ಯದ ಪರವಾಗಿರುವುದು, ತಪ್ಪನ್ನು ತಪ್ಪು ಎನ್ನುವುದು ಅನಗತ್ಯ ಉಸಾಬರಿ ಅನ್ನಿಸಿಕೊಳ್ಳುತ್ತಿದೆ. ಹಾಗಿಲ್ಲದವರನ್ನು 'ಪ್ರಗತಿಪರರು, ಬುದ್ಧಿಜೀವಿಗಳು' ಎಂದು ಮೂದಲಿಸಲಾಗುತ್ತಿದೆ. ಯಾವುದೋ ಸರ್ಕಾರಿ ಎಂಜಲಿಗೆ ಆಸೆ ಪಡುವವರೆಂದು ತೇಜೋವಧೆ ಮಾಡಲಾಗುತ್ತದೆ.

ಕೋಮುವಾದ ಮತ್ತು ಭ್ರಷ್ಟರಾಜಕಾರಣ ಮಾತಿನ ಏಕಮಾದರಿಯನ್ನು ಚಲಾವಣೆಗೆ ತರುತ್ತಿದೆ. ಸುಳ್ಳನ್ನು, ಕಲ್ಪಿತಗಳನ್ನು ಎತ್ತರದ ಧ್ವನಿಯಲ್ಲಿ, ಆಕರ್ಷಕ ಭಂಗಿಯಲ್ಲಿ, ಆಕರ್ಷಕ ಪೋಷಾಕುಗಳಲ್ಲಿ, ನಾಟಕೀಯ ಏರಿಳಿತಗಳಲ್ಲಿ ಪ್ಯಾಕೇಜ್ ಮಾಡಲಾಗುತ್ತಿದೆ. ಎಂದೆಂದೂ ಜೊತೆಗಿಟ್ಟು ನೋಡಬಾರದ ಭಾರತ ಕಂಡ ಎರಡು ವಿರುದ್ಧ ವ್ಯಕ್ತಿತ್ವಗಳು ಮಹಾತ್ಮ ಗಾಂಧೀಜಿ ಮತ್ತು ಪ್ರಧಾನಮಂತ್ರಿ ಮೋದಿ. ಗಾಂಧೀಜಿಗೆ ಎಂದೂ ಆಕರ್ಷಕವಾದ ಜನರನ್ನು ಪ್ರಭಾವಿಸಬಲ್ಲ ಪರಿಕರಗಳಾಗಲಿ ಭಾಷಿಕ ನಿರೂಪಣೆಯಾಗಲಿ ಅಗತ್ಯ ಬೀಳಲಿಲ್ಲ. ಗಾಂಧೀಜಿ ಸರಳವಾಗಿದ್ದರು. ಸರಳವಾಗಿ ಮಾತನಾಡಿದರು. ಮೆಲುವಾಗಿ ಆದರೆ ಗಟ್ಟಿಯಾಗಿ. ಆ ಪಿಸುದನಿಗೆ ದೇಶದೆಲ್ಲೆಡೆ ಹೊಕ್ಕಾಡುವ ಕ್ಷಮತ್ವವಿತ್ತು. ಎದುರಾಳಿಯನ್ನು ಬಗ್ಗು ಬಡಿಯುವ ಇರಾದೆಯಾಗಲಿ, ಸ್ವ ವಿಜೃಂಭಣೆಯ ಜರೂರತ್ತಾಗಲಿ ಅವರಿಗಿರಲಿಲ್ಲ. ಎಂತಹ ಆಪತ್ತಿನಲ್ಲೂ ಸಂಯಮ ಮೀರಲಿಲ್ಲ. ಮಾತು ಹಳಸಬಹುದಾದ ಹೊತ್ತಿನಲ್ಲೆಲ್ಲ ಮೌನಕ್ಕೆ ಮೊರೆಹೋದರು. ಮಾತಿನ ಪಾವಿತ್ರ್ಯವನ್ನು ಕಾಪಾಡಿಕೊಳ್ಳುವ ಅಗತ್ಯವನ್ನು ನಿರೂಪಿಸಿದರು. 'ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದೊಡೆ ಹಿಡಿದಿರ್ದ ಲಿಂಗ ಘಟಸರ್ಪ ಕಾಣಾ' ಎಂಬ ವಚನಕಾರರ ಎಚ್ಚರದ ಮನನವಿತ್ತು. ... ವಿವರಿಸಬೇಕಾಗಿಲ್ಲ. ಮಾತು ಬರಿದೇ ಅಪ್ಪಳಿಸುತ್ತಿದೆ. ಸಂಸತ್ತಿನಲ್ಲಿ ಸದನವನ್ನು ಉದ್ದೇಶಿಸಿ ಮಾಡುವ ಭಾಷಣಕ್ಕೂ; ಪಕ್ಷದ ಚುನಾವಣಾ ಪ್ರಚಾರದ ಭಾಷಣಕ್ಕೂ ವ್ಯತ್ಯಾಸವಿಲ್ಲದ ಸ್ಥಿತಿ- ಯಾವುದೇ ಪ್ರಜಾತಂತ್ರ ವ್ಯವಸ್ಥೆಗೆ ತಕ್ಕುದಲ್ಲ.

ಜನಪ್ರಜ್ಞೆಯನ್ನು ದಿಕ್ಕುತಪ್ಪಿಸಿ, ಬಹಿರಂಗದ ಆಡಂಬರಕ್ಕೆ ಒಗ್ಗಿಸಿದಾಗಲೇ ಪ್ರಜಾಪ್ರಭುತ್ವದ ರೋಗಗ್ರಸ್ಥ ಸ್ಥಿತಿಯ ಆರಂಭವಾಗುತ್ತದೆ. ಜನರು, ಮಾತಿನ ಆರ್ಭಟವನ್ನು, ಆರಾಧಿಸುತ್ತ; ಮಾತಿನ ಟೊಳ್ಳನ್ನು ಮರೆತುಬಿಡುತ್ತಾರೆ. ಕೊಲ್ಲುವವನು ಸಾಯುವವನ ಭಾಷೆಯಲ್ಲಿ ಮಾತನಾಡುತ್ತಿರುವುದನ್ನು ಗಮನಿಸುವುದಿಲ್ಲ. ಅಲ್ಲಿಗೆ ಪರ್ಯಾಯವೇ ಇಲ್ಲದ ಇಕ್ಕಟ್ಟೊಂದು ನಿರ್ಮಾಣವಾಗುತ್ತದೆ. ವಿರೋಧಿಸಬೇಕಾದವರೂ ಇದೇ ಮಾದರಿಯಲ್ಲಿ ವ್ಯವಹರಿಸಬೇಕಾಗುತ್ತದೆ. ಪ್ರಾಮಾಣಿಕವಾದ ವೈವಿಧ್ಯಮಯವಾದ ವಿಧಾನಗಳು ಸಾಯತೊಡಗುತ್ತವೆ. ನಮ್ಮನ್ನು ನಾವು ನಮ್ಮದಲ್ಲದ ಹಾಗೆ ಮರುರೂಪಿಸುವ ದಣಿವು ಉಂಟಾಗುತ್ತದೆ. ಭಾರತದ ಮಾನವೀಯ ಮನಸ್ಸುಗಳು ಜಾಗರೂಕವಾಗಲೇಬೇಕಿದೆ. ಕೆಟ್ಟ ಮಾದರಿಗಳ ಎದುರು ವಿವೇಕಪೂರ್ಣವಾದ ಪರ್ಯಾಯವನ್ನು ಆಯ್ದುಕೊಳ್ಳಬೇಕಿದೆ. ಒಂದು ಕೆನ್ನೆಗೆ ಹೊಡೆದವನಿಗೆ ಇನ್ನೊಂದು ಕೆನ್ನೆಯನ್ನು ಒಡ್ಡುವ ತೀವ್ರ ಪ್ರತಿರೋಧದ ರೂಪಕವನ್ನು ಧ್ಯಾನಿಸಿಕೊಳ್ಳಬೇಕಿದೆ. ಮಾತು ಸಾಯುವ, ಈ ಕಾಲದಲ್ಲಿ ಮಾತಿನ ಆತ್ಮಘನತೆಯನ್ನು ಸಂಚಯಿನಿಸಬೇಕಾದ ಬೇಗೆಯಿದು. ●

ಉತ್ತರ ಪ್ರದೇಶ ಕೊಡುತ್ತಿರುವ ಮುನ್ಸೂಚನೆ ಏನು?



ಬಿಜೆಪಿಯನ್ನು ಸೋಲಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶ ಉಪ–ಚುನಾವಣೆ ಫಲಿತಾಂಶ ಭವಿಷ್ಯಕ್ಕೆ ಅನೇಕ ಪಾಠಗಳನ್ನು ಹೊಂದಿದೆ. ಅವುಗಳಲ್ಲಿ ಪ್ರಮುಖವಾದ್ದೆಂದರೆ, ರಾಜ್ಯವಾರಾಗಿ ಬಿಜೆಪಿ–ವಿರೋಧಿ ಮತಗಳನ್ನು ಕ್ರೋಡೀಕರಿಸಲು ಪ್ರಯತ್ನಿಸುವುದು ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಇರುವ ತುಂಬಾ ಪರಿಣಾಮಕಾರಿ ಚುನಾವಣಾ ತಂತ್ರ ಎಂಬುದು.

***ಪ್ರಕಾಶ್ ಕಾರಟ್**

ಉತ್ತರ ಪ್ರದೇಶದ ಗೋರಖ್‌ಪುರ ಮತ್ತು ಫೂಲ್‌ಪುರ ಲೋಕಸಭೆ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಗಳಲ್ಲಿ ಬಿಜೆಪಿ ಆಘಾತಕಾರಿ ಸೋಲನ್ನು ಅನುಭವಿಸಿದೆ. 2014ರ ಲೋಕಸಭೆ ಚುನಾವಣೆಗಳಲ್ಲಿ ಈ ಕ್ಷೇತ್ರಗಳಲ್ಲಿ ಅನುಕ್ರಮವಾಗಿ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮತ್ತು ಉಪ ಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ ಗೆದ್ದಿದ್ದರು. ಇಬ್ಬರೂ ತಲಾ ಮೂರು ಲಕ್ಷಕ್ಕಿಂತ ಹೆಚ್ಚಿನ ಮತಗಳನ್ನು ಪಡೆದಿದ್ದರು. ಈಗ ಎರಡೂ ಕ್ಷೇತ್ರಗಳನ್ನು ಸಮಾಜವಾದಿ ಪಕ್ಷ (ಎಸ್‌ಪಿ) ತನ್ನ ಕಟ್ಟಾ ವಿರೋಧೀ ಬಿಎಸ್‌ಪಿಯ ಬೆಂಬಲದೊಂದಿಗೆ ಗೆದ್ದುಕೊಂಡಿದೆ.

ಈ ಫಲಿತಾಂಶಗಳು ಭವಿಷ್ಯದಲ್ಲಿ ಮಹತ್ವದ ಪರಿಣಾಮಗಳನ್ನು ಬೀರಲಿದೆಯೆಂಬುದು ನಿಸ್ಸಂಶಯ. 2014ರ ಲೋಕಸಭೆ ಚುನಾವಣೆಗಳಲ್ಲಿ ಬಿಜೆಪಿ ಉತ್ತರ ಪ್ರದೇಶದ 80 ಸ್ಥಾನಗಳ ಪೈಕಿ 71ರಲ್ಲಿ ಜಯ ಸಾಧಿಸಿತ್ತು. ಪ್ರತಿಸ್ಪರ್ಧಿ ಎಸ್‌ಪಿ ಮತ್ತು ಬಿಎಸ್‌ಪಿಗಳ ಶಕ್ತಿ ಗುಂದಿಸಿತ್ತು. ಎಸ್‌ಪಿ ಐದರಲ್ಲಿ ಗೆದ್ದಿದ್ದರೆ ಬಿಎಸ್‌ಪಿ ಒಂದರಲ್ಲೂ ಜಯ ದಾಖಲಿಸಿರಲಿಲ್ಲ.

ಈ ವಿಸ್ಮಯಕಾರಿ ಫಲಿತಾಂಶ ಬಂದಿದ್ದಾರೂ ಹೇಗೆ?. ಎರಡೂ ಸ್ಥಾನಗಳಲ್ಲಿ ಎಸ್‌ಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದವು. ಉಪಚುನಾವಣೆಗಳಲ್ಲಿ ಸ್ಪರ್ಧಿಸಬಾರದೆಂಬ ತನ್ನ ಬಹುಕಾಲದ ನೀತಿಯಂತೆ ಬಿಎಸ್‌ಪಿ ಸ್ಪರ್ಧಿಸಲಿಲ್ಲ. ಆದರೆ ಚುನಾವಣೆಗೆ ಕೇವಲ ಒಂದು ವಾರ ಬಾಕಿಯಿರುವಾಗ ಎರಡೂ ಸ್ಥಾನಗಳಲ್ಲಿ ಎಸ್‌ಪಿಗೆ ಬೆಂಬಲ ನೀಡುವುದಾಗಿ ಬಿಎಸ್‌ಪಿ ಘೋಷಿಸಿತು. ತಳಮಟ್ಟದ ಪರಿಣಾಮಕಾರಿ ಪ್ರಚಾರದೊಂದಿಗೆ ಎಸ್‌ಪಿ ಚಿಹ್ನೆ 'ಸೈಕಲ್'ಗೆ ತನ್ನ ಬೆಂಬಲದ ಅವಶ್ಯಕತೆಯನ್ನು ತನ್ನ ಬೆಂಬಲಿಗರಿಗೆ ಮನಗಾಣಿಸುವಲ್ಲಿ ಬಿಎಸ್‌ಪಿ ಯಶಸ್ವಿಯಾಯಿತು. ಒಗ್ಗಟ್ಟಿನಿಂದಾಗಿ ಒಬಿಸಿಗಳು, ದಲಿತರು ಮತ್ತು ಅಲ್ಪಸಂಖ್ಯಾತರ ಮತಗಳನ್ನು ಕ್ರೋಡೀಕರಿಸಲು ಸಾಧ್ಯವಾಯಿತು ಎಂಬುದು ಫಲಿತಾಂಶದಿಂದ ಸಾಬೀತಾಯಿತು. ಅಷ್ಟು ಮಾತ್ರವೇ ಅಲ್ಲದೆ ಬಿಜೆಪಿ ಅಲೆ ಮಾಯವಾಗುತ್ತಿರುವುದರ ಸೂಚನೆಯೂ ಇದಾಗಿದೆ. ಯೋಗಿ ಆದಿತ್ಯನಾಥರ ಒಂದು ವರ್ಷದ ಆಡಳಿತ ವೈಖರಿಯೂ ಅದಕ್ಕೆ ಕಾರಣ.

ಉತ್ತರ ಪ್ರದೇಶದ ಚುನಾವಣೆಯೊಂದರಲ್ಲಿ ಎಸ್‌ಪಿ ಮತ್ತು ಬಿಎಸ್‌ಪಿ ಒಟ್ಟಾಗಿ ಕೆಲಸ ಮಾಡಿದ್ದು ಇದೇ ಮೊದಲ ಸಲ. 1993ರ ಅಸೆಂಬ್ಲಿ ಚುನಾವಣೆಗಳಲ್ಲಿ ಅವರು ಮೊದಲ ಬಾರಿಗೆ ಸಹಕರಿಸಿದ್ದರು ಎಂದು ಅನೇಕ ಜನರು ಆಡಿಕೊಳ್ಳುತ್ತಿದ್ದಾರೆ. ಆದರೆ ನಿಜ ಹೇಳಬೇಕೆಂದರೆ ಆಗ ಅವುಗಳ ನಡುವೆ ಚುನಾವಣೆ–ಪೂರ್ವ ಮೈತ್ರಿ ಇರಲಿಲ್ಲ. ಚುನಾವಣೆಗಳ ನಂತರವಷ್ಟೆ ಅವುಗಳು ಸರಕಾರ ರಚಿಸಲು ಕೈ ಜೋಡಿಸಿದ್ದವು. ಆಗ ಮುಲಾಯಂ ಸಿಂಗ್ ಯಾದವ್ ಮುಖ್ಯಮಂತ್ರಿಯಾದರು. ಎರಡೇ ವರ್ಷಗಳಲ್ಲಿ ಆ ಮೈತ್ರಿ ಮುರಿದುಬಿದ್ದಿತ್ತು, ಅದಾದ ನಂತರ ಇದುವರೆಗೆ ಅವುಗಳ ನಡುವೆ ಯಾವುದೇ ಸಹಕಾರ ಇರಲಿಲ್ಲ.

ಬಿಜೆಪಿಯನ್ನು ಸೋಲಿಸುವ ವಿಚಾರಕ್ಕೆ ಸಂಬಂಧಿಸಿದಂತೆ ಉತ್ತರ ಪ್ರದೇಶ ಉಪ–ಚುನಾವಣೆ ಫಲಿತಾಂಶ ಭವಿಷ್ಯಕ್ಕೆ ಅನೇಕ ಪಾಠಗಳನ್ನು ಹೊಂದಿದೆ. ಉತ್ತರ ಪ್ರದೇಶದ ಲೋಕಸಭೆ ಸ್ಥಾನಗಳಲ್ಲಿ ಹೆಚ್ಚಿನ ಸ್ಥಾನಗಳನ್ನು ಬಿಜೆಪಿ ಕಳೆದುಕೊಂಡರೆ ಲೋಕಸಭೆಯಲ್ಲಿ ಬಹುಮತದ ಹತ್ತಿರವೂ ಸುಳಿಯಲು ಅದಕ್ಕೆ ಸಾಧ್ಯವಾಗದು. ಪ್ರಮುಖ ಬಿಜೆಪಿಯೇತರ ಪಕ್ಷಗಳು ಒಗ್ಗಟ್ಟಾದರೆ ಸಣ್ಣ ಪಕ್ಷಗಳು ಮತ್ತು ಶಕ್ತಿಗಳು ಅದಕ್ಕೆ ಬೆಂಬಲ ನೀಡಬಹುದಾಗಿದೆ. ಉತ್ತರ ಪ್ರದೇಶ ಸದ್ಯದ ಪ್ರಕರಣದಲ್ಲಿ ಎಡ ಪಕ್ಷಗಳು ಬಿಎಸ್‌ಪಿಯ ಘೋಷಣೆಯ ಹಿನ್ನೆಲೆಯಲ್ಲಿ ಎಸ್‌ಪಿಗೆ ಬೆಂಬಲ ನೀಡಿದ್ದವು. ಇತರ ಕೆಲವು ಸಣ್ಣ ಪಕ್ಷಗಳು ಕೂಡ ಹಾಗೇ ಮಾಡಿದವು. ಚುನಾವಣೆ ಕಣದಿಂದ ಹಿಂದೆ ಸರಿಯದ ಕಾಂಗ್ರೆಸ್ ದಯನೀಯ ಸೋಲು ಕಂಡು ಠೇವಣಿಯನ್ನೂ ಕಳೆದುಕೊಂಡಿತು. ಏನೇ ಇದ್ದರೂ, ಈ ಉಪ–ಚುನಾವಣೆ ಮತ್ತು ರಾಜ್ಯಸಭೆ ಚುನಾವಣೆ ಹಿನ್ನೆಲೆಯಲ್ಲಿ ಮಾಡಿಕೊಂಡ ತಾತ್ಕಾಲಿಕ ಸಹಯೋಗ ಮಾತ್ರವೇ ಅಥವಾ ಅದರಾಚೆಗೂ ಎಸ್‌ಪಿ ಮತ್ತು ಬಿಎಸ್‌ಪಿಯ ಈ ಮೈತ್ರಿ ದೀರ್ಘ ಕಾಲ ಮುಂದುವರಿಯಲಿದೆಯೇ ಎನ್ನುವುದನ್ನು ಕಾದು ನೋಡಬೇಕಾಗಿದೆ.

ಎರಡನೇ ಪಾಠವೆಂದರೆ, ಅಖಿಲ ಭಾರತ ಮಟ್ಟದಲ್ಲಿ ಮೈತ್ರಿ ಅಥವಾ ಎಲ್ಲಾ ಪ್ರತಿಪಕ್ಷಗಳ ರಂಗವನ್ನು ರಚಿಸಿಕೊಳ್ಳುವುದು ಬಿಜೆಪಿಯನ್ನು ಲೋಕಸಭೆ ಚುನಾವಣೆಗಳಲ್ಲಿ ಎದುರಿಸಲು ಇರುವ ಪರಿಣಾಮಕಾರಿ ಮಾರ್ಗ ಅಲ್ಲ ಎನ್ನುವುದು.. ಬಿಜೆಪಿಯನ್ನು ಎದುರಿಸಲು ಯುಪಿಎ ಮಾದರಿಯ ಮೈತ್ರಿಕೂಟವನ್ನು ರಚಿಸುವ ಕನಸನ್ನು ಕಾಂಗ್ರೆಸ್ ಕಾಣುತ್ತಿದೆ. ಆದರೆ ಅದು ಯಶಸ್ವಿಯಾಗುವುದಿಲ್ಲ. ಪರ್ಯಾಯ ಕಾರ್ಯಕ್ರಮದ ವಿಚಾರದಲ್ಲಿ ಹೇಳುವುದಾದರೆ ಇಂಥದ್ದೊಂದು ಮೈತ್ರಿಯನ್ನು ಮುನ್ನಡೆಸುವ ವಿಶ್ವಾಸಾರ್ಹತೆ ಕಾಂಗ್ರೆಸ್‌ಗೆ ಇಲ್ಲ. ಕಾಂಗ್ರೆಸ್ ಜೊತೆ ಮೈತ್ರಿಕೂಟದ ಭಾಗವಾಗಿರಲು ಬಯಸದ ಅನೇಕ ಪ್ರಾದೇಶಿಕ ಪಕ್ಷಗಳಿವೆ–ಒಡಿಶಾದ ಬಿಜೆಡಿ, ತೆಲಂಗಾಣದ ಟಿಆರ್‌ಎಸ್ ಮತ್ತು ಆಂಧ್ರ ಪ್ರದೇಶದಲ್ಲಿ ತೆಲುಗು ದೇಶಂ ಇತ್ಯಾದಿ. ಕಾಂಗ್ರೆಸ್‌ಅನ್ನು ಮೈತ್ರಿ ಕೂಟದ ನಾಯಕನಾಗಿ ಒಪ್ಪಲು ಎಚ್ಚರಿಕೆಯ ನಡೆಯಿಡುವ ಇತರ ಪಕ್ಷಗಳೂ ಇವೆ. ಕಾಂಗ್ರೆಸ್‌ನೊಂದಿಗೆ ರಾಷ್ಟ್ರೀಯ ಮೈತ್ರಿಕೂಟದ ಭಾಗವಾಗಿರುವುದಿಲ್ಲ ಎಂದು ಸಿಪಿಐ (ಎಂ) ಆಗಲೇ ಸ್ಪಷ್ಟಪಡಿಸಿದೆ.

ಅದೇ ರೀತಿ, ಬಿಜೆಪಿಯೇತರ, ಕಾಂಗ್ರೆಸೇತರ 'ಒಕ್ಕೂಟ ರಂಗ' ಕಟ್ಟುವ ತೆಲಂಗಾಣ ಮುಖ್ಯಮಂತ್ರಿ ಕೆ.ಸಿ. ರಾವ್ ಅವರ ಯತ್ನ ವಿಫಲವಾಗುವುದು ನಿಶ್ಚಿತ. ಡಿಎಂಕೆ ಮತ್ತು ಆರ್‌ಜೆಡಿಯಂಥ ಕೆಲವು ಪ್ರಾದೇಶಿಕ ಪಕ್ಷಗಳು ಆಯಾ ರಾಜ್ಯಗಳಲ್ಲಿ ಕಾಂಗ್ರೆಸ್‌ನ ಜೊತೆಗಿವೆ. ಅಷ್ಟು ಮಾತ್ರವಲ್ಲದೆ, ನೀತಿಗಳು ಹಾಗೂ ಪ್ರಾದೇಶಿಕ ಹಿತಗಳಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಪಕ್ಷಗಳ ನಡುವೆ ಅನೇಕ ವಿರೋಧಾಭಾಸಗಳಿವೆ. ಅದು ಎಲ್ಲಾ ಪ್ರಾದೇಶಿಕ ಪಕ್ಷಗಳು ಒಂದೇ ವೇದಿಕೆಗೆ ಬರುವುದನ್ನು ತಡೆಯಬಹುದು.

ಆದ್ದರಿಂದ, ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಲು ಇರುವ ತುಂಬಾ ಪರಿಣಾಮಕಾರಿ ಚುನಾವಣಾ ತಂತ್ರವೆಂದರೆ ಅದು ರಾಜ್ಯವಾರಾಗಿ ಬಿಜೆಪಿ–ವಿರೋಧಿ ಮತಗಳನ್ನು ಕ್ರೋಡೀಕರಿಸಲು ಪ್ರಯತ್ನಿಸುವುದೇ ಆಗಿದೆ. ಉತ್ತರ ಪ್ರದೇಶ ಉಪ–ಚುನಾವಣೆಯಲ್ಲಿ ಆಗಿದ್ದೇ ಅದು.

ಒಂದು ವಿಚಾರ ಇಲ್ಲಿ ಪ್ರಸ್ತುತವಾಗುತ್ತದೆ. 1993ರ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕಾಮ್ರೇಡ್ ಜ್ಯೋತಿ ಬಸು ಆ ರಾಜ್ಯದಲ್ಲಿ ನಾಲ್ಕು ದಿನ ಚುನಾವಣೆ ಪ್ರಚಾರ ನಡೆಸಿದರು. ಬಾಬ್ರಿ ಮಸೀದಿ ನಾಶದ ಹಿನ್ನೆಲೆಯಲ್ಲಿ ಬಿಜೆಪಿ ಸರಕಾರದ ವಜಾ ಹಾಗೂ ವಿಧಾನಸಭೆ ವಿಸರ್ಜನೆಯ ಹಿನ್ನೆಲೆಯಲ್ಲಿ ನಡೆದ ಚುನಾವಣೆಯದು. ಸಂವಿಧಾನ ಮತ್ತು ಜಾತ್ಯತೀತತೆ ಮೇಲೆ ಘಾತುಕ ಆಕ್ರಮಣ ನಡೆಸಿದ ಬಿಜೆಪಿಯನ್ನು ಸೋಲಿಸಲು ಅದು ಅಗತ್ಯವಾಗಿತ್ತು.

ಪ್ರಚಾರದ ಮೊದಲ ದಿನ ವಾರಾಣಸಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜ್ಯೋತಿ ಬಸು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಸೋಲಿಸುವ ಸಾಮರ್ಥ್ಯವಿರುವ ಅಭ್ಯರ್ಥಿಗಳನ್ನು ಗೆಲ್ಲಿಸುವಂತೆ ಜನರಿಗೆ ಕರೆ ನೀಡಿದ್ದರು. ಎಲ್ಲಾ ಬಿಜೆಪಿ–ವಿರೋಧಿ ಶಕ್ತಿಗಳ ಮತಗಳನ್ನು ಕ್ರೋಡೀಕರಿಸಬೇಕೆನ್ನುವುದು ಅದರ ಸಾರಾಂಶ. ಆಗ ಬಿಜೆಪಿ ಸೋತಿತು, ಎಸ್‌ಪಿ–ಬಿಎಸ್‌ಪಿ ಸರಕಾರ ರಚನೆಯಾಯಿತು.

1993ರಲ್ಲಿ ಉತ್ತರ ಪ್ರದೇಶದ ಜೊತೆಯಲ್ಲಿ ಮಧ್ಯ ಪ್ರದೇಶ ಮತ್ತು ರಾಜಸ್ಥಾನ ವಿಧಾನಸಭೆಗಳಿಗೆ ಕೂಡ ಚುನಾವಣೆ ನಡೆದವು. ಬಾಬರಿ ಮಸೀದಿ ಧ್ವಂಸದಲ್ಲಿನ ಪಾತ್ರಕ್ಕಾಗಿ ಆ ರಾಜ್ಯಗಳ ಬಿಜೆಪಿ ಸರಕಾರಗಳನ್ನು ವಜಾಗೊಳಿಸಲಾಗಿತ್ತು. ಅಲ್ಲಿ, ತನಗೆ ಶಕ್ತಿಯಿರುವ ಕೆಲವು ಸೀಟುಗಳಲ್ಲಿ ಸ್ಪರ್ಧಿಸಲು ಹಾಗೂ ಬಿಜೆಪಿ–ವಿರೋಧಿ ಮತಗಳ ಕ್ರೋಡೀಕರಣಕ್ಕೆ ಅನುಕೂಲವಾಗುವಂಥ ಸಾರ್ವತ್ರಿಕ ಪ್ರಚಾರ ನಡೆಸಲು ಸಿಪಿಐ (ಎಂ) ಅದೇ ಮೊದಲ ಸಲ ತೀರ್ಮಾನಿಸಿತ್ತು. ಈ ಎರಡೂ ರಾಜ್ಯಗಳಲ್ಲಿ ಬಿಜೆಪಿಗೆ ಕಾಂಗ್ರೆಸ್ ಪ್ರಧಾನ ಪ್ರತಿಪಕ್ಷವಾಗಿತ್ತು.

ಬಿಜೆಪಿಯನ್ನು ಸೋಲಿಸುವುದಕ್ಕೆ ಸಂಬಂಧಿಸಿ ಸಿಪಿಐ (ಎಂ) ನ 22ನೇ ಮಹಾಧಿವೇಶನದಲ್ಲಿ ಅಂಗೀಕರಿಸಲಾಗುವ ಪ್ರಸ್ತಾವಿತ ತಂತ್ರ ಧೋರಣೆಯ ಪರಿಣಾಮತ್ವದ ಬಗ್ಗೆ ಜಾತ್ಯತೀತ ವಲಯದ ಕೆಲವರು ಪ್ರಶ್ನಿಸಿದ್ದಾರೆ. ಮೋದಿ ಸರಕಾರದ ಶ್ರೀಮಂತ–ಪರ ಆರ್ಥಿಕ ನೀತಿಗಳ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸುವಂತೆ ಹಾಗೂ ಕೋಮುವಾದಿ ಶಕ್ತಿಗಳು ಮತ್ತು ಸರ್ವಾಧಿಕಾರಿ ಆಕ್ರಮಣಗಳ ವಿರುದ್ಧ ಸೆಣಸಲು ವಿಶಾಲವಾದ ಏಕತೆಯನ್ನು ಕಟ್ಟುವಂತೆ ಆ ರಾಜಕೀಯ ಧೋರಣೆ ಕರೆ ನೀಡಿದೆ. ಈ ಹೋರಾಟಗಳು ಮತ್ತು ಚಳವಳಿಗಳು ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧದ ಜನತೆಯ ಏಕತೆಯನ್ನು ರೂಪಿಸಬಲ್ಲವು. ಅದೇ ನವ–ಉದಾರವಾದಿ ನೀತಿಗಳನ್ನು ಅಳವಡಿಸಿ ಅನುಸರಿಸುವ ಕಾಂಗ್ರೆಸ್ ಜೊತೆ ಒಂದು ಚುನಾವಣಾ ಮೈತ್ರಿ ಅಥವಾ ತಿಳುವಳಿಕೆಯಿಂದ ಉದ್ದೇಶ ಈಡೇರುವುದಿಲ್ಲ.

ಈ ಧೋರಣೆಯ ಆಧಾರದಲ್ಲಿ, ಬಿಜೆಪಿ–ವಿರೋಧಿ ಮತಗಳನ್ನು ಗರಿಷ್ಠ ಪ್ರಮಾಣದಲ್ಲಿ ಕ್ರೋಡೀಕರಿಸಲು ಅನುಕೂಲವಾಗುವ ಚುನಾವಣಾ ತಂತ್ರಗಳನ್ನು ರೂಪಿಸಬಹುದಾಗಿದೆ. 1993ರ ಅಸೆಂಬ್ಲಿ ಚುನಾವಣೆಗಳು ಮತ್ತು ಉತ್ತರ ಪ್ರದೇಶದ ಈ ಬಾರಿಯ ಲೋಕಸಭೆ ಉಪ–ಚುನಾವಣೆಗಳ ಚುನಾವಣಾ ತಂತ್ರಗಳು ತೋರಿಸಿಕೊಡುವಂತೆ, ಪ್ರತಿಯೊಂದು ರಾಜ್ಯದಲ್ಲಿ ಬಿಜೆಪಿಯನ್ನು ಒಂಟಿಯಾಗಿಸಲು ಹಾಗೂ ಸೋಲಿಸಲು ಮತ್ತು ಅದೇ ವೇಳೆ ಪಕ್ಷದ ಹಿತಗಳನ್ನು ರಕ್ಷಿಸಲು ಮತ್ತು ಎಡ–ಪ್ರಜಾಪ್ರಭುತ್ವವಾದಿ ಶಕ್ತಿಗಳ ಮುನ್ನಡೆಯನ್ನು ಸಾಧಿಸಲು ಇರುವ ತುಂಬಾ ಕಾರ್ಯಸಾಧು ದಾರಿಯಾಗಿದೆ ಇದು.

ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿಕೆ...

ಪುಟ 2 ರಿಂದ

ಸೋಲು ಒಂದು ಸಕಾರಾತ್ಮಕ ಬೆಳವಣಿಗೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವರ್ಣಿಸಿದೆ. ಎಡಪಕ್ಷಗಳು ಉತ್ತರಪ್ರದೇಶದ ಗೋರಖ್‌ಪುರ ಮತ್ತು ಫುಲ್‌ಪುರದಲ್ಲಿ ಸಮಾಜವಾದಿ ಪಕ್ಷದ ಅಭ್ಯರ್ಥಿಗಳಿಗೆ ಮತ್ತು ಬಿಹಾರದ ಅರರಿಯಾದಲ್ಲಿ ಆರ್‌ಜೆಡಿ ಅಭ್ಯರ್ಥಿಗೆ ಬೆಂಬಲ ಘೋಷಿಸಿದ್ದವು. ಜಹಾನಾಬಾದ್‌ನಲ್ಲಿ ಸಿಪಿಐ(ಎಂಎಲ್)ಗೆ ಸಿಪಿಐ(ಎಂ) ಬೆಂಬಲ ನೀಡಿತು.

ಅವಿಶ್ವಾಸ ಗೊತ್ತುವಳಿಗೆ ಬೆಂಬಲ –ಬಿಜೆಪಿ ಇಬ್ಬಂದಿತನಕ್ಕೆ ಖಂಡನೆ

ಆಂಧ್ರಪ್ರದೇಶ ರಾಜ್ಯಕ್ಕೆ ವಿಶೇಷ ಸ್ಥಾನಮಾನ ನೀಡುವ ಬಗ್ಗೆ ನೀಡಿದ ಆಶ್ವಾಸನೆಯನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿ ವೈಎಸ್‌ಆರ್ ಕಾಂಗ್ರೆಸ್ ಮತ್ತು ಟಿಡಿಪಿ ಲೋಕಸಭೆಯಲ್ಲಿ ತಂದಿರುವ ಅವಿಶ್ವಾಸ ಗೊತ್ತುವಳಿಗೆ ಸಿಪಿಐ(ಎಂ) ಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಈ ವಿಷಯದಲ್ಲಿ ಸರಕಾರದ ವಿಶ್ವಾಸದ್ರೋಹವನ್ನು ಒಪ್ಪಲು ಸಾಧ್ಯವಿಲ್ಲ ಎಂದಿರುವ ಪೊಲಿಟ್‌ಬ್ಯುರೊ ಈ ಗೊತ್ತುವಳಿಯ ಮೇಲಿನ ಚರ್ಚೆಯಲ್ಲಿ ಸರಕಾರದ ಸರ್ವತೋಮುಖ ವಿಫಲತೆ ಮತ್ತು ಸಂಸದೀಯ ಜವಾಬುದಾರಿಕೆಯನ್ನು ತಪ್ಪಿಸಿಕೊಳ್ಳುವುದನ್ನು ಎತ್ತಿ ತೋರಿಸಲಾಗುವುದು ಎಂದಿದೆ.

ಈ ಗೊತ್ತುವಳಿಯನ್ನು ಬೆಂಬಲಿಸಿ ಲೋಕಸಭಾ ಸದಸ್ಯರಲ್ಲಿ 10%ಕ್ಕಿಂತ ಹೆಚ್ಚು ಮಂದಿ ಎದ್ದು ನಿಂತರೂ ಸದನ ವ್ಯವಸ್ಥಿತವಾಗಿಲ್ಲ ಎನ್ನುತ್ತ ಸದನದ ಅಧ್ಯಕ್ಷರು ಅಧಿವೇಶನವನ್ನು ಮುಂದೂಡಿದ್ದಾರೆ. ಇದೇ ಲೋಕಸಭೆ ಭಾರತದ ಕ್ರೋಡೀಕೃತ ನಿಧಿಯಿಂದ ಸುಮಾರು 10ಲಕ್ಷ ಕೋಟಿ ರೂ.ಗಳನ್ನು ತೆಗೆಯಲು ಅನುಮತಿ ನೀಡುವ ಹಣಕಾಸು ಮಸೂದೆಯನ್ನು ಗದ್ದಲಗಳ ನಡುವೆಯೇ ಪಾಸು ಮಾಡಿತ್ತು. ಸಂಸತ್ತಿನ ವ್ಯವಹಾರಗಳನ್ನು ನಡೆಸುವಲ್ಲಿ ಬಿಜೆಪಿಯ ಈ ಇಬ್ಬಗೆ ನೀತಿ ಮತ್ತು ಅದರ ಪ್ರಜಾಪ್ರಭುತ್ವ–ವಿರೋಧಿ ಸ್ವರೂಪ ಅತ್ಯಂತ ಖಂಡನೀಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಉನ್ನತ ಶಿಕ್ಷಣದ ಮೇಲೆ ದಾಳಿಗಳು ಮುಂದುವರೆಯುತ್ತಿವೆ

ಉನ್ನತ ಶಿಕ್ಷಣ ಸಂಸ್ಥೆಗಳ ಮೇಲೆ, ಅದರಲ್ಲೂ ಕೇಂದ್ರೀಯ ವಿಶ್ವವಿದ್ಯಾಲಯಗಳ ಮೇಲೆ ದಾಳಿ ಮಾಡುವ ಧೋರಣೆಯನ್ನು ಅನುಸರಿಸುವುದನ್ನು ಬಿಜೆಪಿ ಸರಕಾರ ಮುಂದುವರೆಸಿದೆ. ಇಂತಹ ದಾಳಿಗಳು ಭಾರತೀಯ ಇತಿಹಾಸದ ಬದಲಿಗೆ ಭಾರತೀಯ ಪುರಾಣಗಳನ್ನು ಅಧ್ಯಯನ ಮಾಡುವ, ಭಾರತೀಯ ತತ್ವಶಾಸ್ತ್ರದ ಸ್ಥಾನದಲ್ಲಿ ಭಾರತೀಯ ಧರ್ಮಶಾಸ್ತ್ರವನ್ನು ಅಧ್ಯಯನ ಮಾಡುವಂತೆ ಪ್ರಯತ್ನಿಸುವ ಸರಕಾರದ ಒಟ್ಟಾರೆ ತತ್ವದ ಭಾಗವಾಗಿದೆ.

ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಮೇಲೆ ಕಡ್ಡಾಯ ಹಾಜರಾತಿಯನ್ನು ಹೇರುವುದು ಮುಂತಾದ ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ದಾಳಿಗಳನ್ನು ಮತ್ತು ಅವರ ಚಟುವಟಿಕೆಗಳ ಮೇಲೆ ತೀವ್ರ ನಿರ್ಬಂಧ ಹೇರುವ ಪ್ರಜಾಪ್ರಭುತ್ವ–ವಿರೋಧಿ ದಾಳಿಗಳನ್ನು ಜವಹರ್‌ಲಾಲ್ ವಿಶ್ವವಿದ್ಯಾಲಯದ ಆರೆಸ್ಸೆಸ್–ಪರ ಉಪಕುಲಪತಿಗಳು ಮಾಡುತ್ತಿದ್ದಾರೆ. ವಿವಿ ಆಡಳಿತ ಕೆಲವು ಡೀನ್‌ಗಳನ್ನು ಮತ್ತು ವಿಭಾಗ ಮುಖ್ಯಸ್ಥರನ್ನು ತೆಗೆದು ಹಾಕಿದೆ. ಆರೆಸ್ಸೆಸ್‌ನ ವಿದ್ಯಾರ್ಥಿ ವಿಭಾಗವಾದ ಎಬಿವಿಪಿ ಜವಹರಲಾಲ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ಆಂದೋಲನದ ವಿರುದ್ಧ ದಾಳಿಗಳ ಮುಂಚೂಣಿಯಲ್ಲಿದ್ದರೆ, ಅಲ್ಲಿನ ಪ್ರಗತಿಶೀಲ ಬೋಧಕ ಸಮುದಾಯದ ಜಾಗಗಳಲ್ಲಿ ಹಿಂದುತ್ವ ತತ್ವವನ್ನು ಪ್ರಚಾರ ಮಾಡುವವರನ್ನು ನೇಮಿಸಲಾಗುತ್ತಿದೆ.

ಯುಜಿಸಿ ಒಂದು ನ್ಯಾಯಾಂಗ ನಿರ್ದೇಶನಕ್ಕೆ ಬದ್ಧವಾಗುವ ಹೆಸರಿನಲ್ಲಿ ವಿಶ್ವವಿದ್ಯಾಲಯಗಳ ವಿವಿಧ ಹುದ್ದೆಗಳ ನೇಮಕಾತಿಯ ಮೀಸಲಾತಿ ರೋಸ್ಟರ್‌ಗಳಲ್ಲಿ ಬದಲಾವಣೆಗಳನ್ನು ಮಾಡುವ ನಿರ್ದೇಶನಗಳನ್ನು ನೀಡಿದೆ. ಇದು ಮೀಸಲಾತಿ ನೇಮಕಗಳನ್ನು ನಿಧಾನಗೊಳಿಸುತ್ತದೆ ಮತ್ತು ಈಗ ನಡೆದಿರುವ ನೇಮಕಾತಿ ಪ್ರಕ್ರಿಯೆಯನ್ನು ನಿಲ್ಲಿಸುತ್ತದೆ. ದಿಲ್ಲಿ ವಿಶ್ವವಿದ್ಯಾಲಯವನ್ನು ಇದು ತಟ್ಟುತ್ತದೆ. ಸರಕಾರ ಆ ನ್ಯಾಯಾಂಗ ನಿರ್ದೇಶನದ ಮೇಲೆ ಮರು ವಿಮರ್ಶೆಯ ಅರ್ಜಿ ಹಾಕುವುದಾಗಿ ಒಪ್ಪಿತ್ತು. ಆದರೆ ಅದನ್ನು ಇನ್ನೂ ಮಾಡಿಲ್ಲ. ಯುಜಿಸಿ ನಿರ್ದೇಶನವನ್ನು ಸದ್ಯ ಅಮಾನತಿನಲ್ಲಿಟ್ಟು ಆಮೂಲಕ ದಿಲ್ಲಿಯಲ್ಲಿ ಮೀಸಲಾತಿ ಹುದ್ದೆಗಳ ಭರ್ತಿ ವಿಳಂಬಗೊಳ್ಳದಂತೆ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಮಹಾಧಿವೇಶನದ ರಾಜಕೀಯ– ಸಂಘಟನಾತ್ಮಕ ಕರಡು ವರದಿ

ಹೈದರಾಬಾದಿನಲ್ಲಿ ಎಪ್ರಿಲ್ 18 ರಿಂದ 22 ರವರೆಗೆ ನಡೆಯಲಿರುವ ಸಿಪಿಐ(ಎಂ)ನ 22ನೇ ಮಹಾಧಿವೇಶನದಲ್ಲಿ ಮಂಡಿಸುವ ಕರಡು ರಾಜಕೀಯ–ಸಂಘಟನಾತ್ಮಕ ವರದಿಯನ್ನು ಪೊಲಿಟ್‌ಬ್ಯುರೊ ಚರ್ಚಿಸಿತು. ಅದನ್ನು ಈಗ ಮಾರ್ಚ್ 28 ರಿಂದ 30 ರ ವರೆಗೆ ನಡೆಯಲಿರುವ ಕೇಂದ್ರ ಸಮಿತಿಯ ಸಭೆಯ ಮುಂದೆ ಇಡಲಾಗುವುದು, ಮತ್ತು ಅದನ್ನು ಅಂಗೀಕರಿಸಿದ ಮೇಲೆ ಮಹಾಧಿವೇಶನದ ಮುಂದೆ ಮಂಡಿಸಲಾಗುವುದು.

ಸಂಘಪರಿವಾರದ ಪ್ರತಿಮೆ–ಧ್ವಂಸಕ ರಾಜಕಾರಣವನ್ನು ಗುಹಾ ಸಮರ್ಥಿಸುತ್ತಿದ್ದಾರಾ?



ಮಾರ್ಚ್ 16ರಂದು ಪ್ರಜಾವಾಣಿ ಯಲ್ಲಿ ರಾಮಚಂದ್ರ ಗುಹಾ ಅವರ “ಲೆನಿನ್ ಬದಲಿಗೆ ಭಗತ್ ಸಿಂಗ್ ಯಾಕಾಗದು?” ಎಂಬ ಲೇಖನ ಪ್ರಕಟವಾಗಿದೆ. ಇದು ತ್ರಿಪುರಾ ಚುನಾವಣೆಯ ನಂತರ ಸಿಪಿಐ(ಎಂ)–ಕಮ್ಯುನಿಸ್ಟರು–ಎಡಪಂಥೀಯರ ಮೇಲೆ ಮುಂಬಾನುಮುಂಬಾಗಿ ಬರಲಾರಂಭಿಸಿದ ಸರಣಿ ದಾಳಿಯಲ್ಲಿ ಒಂದು ಕೊಂಡಿ. ತ್ರಿಪುರಾ ಚುನಾವಣೆಯನ್ನು ಸಂಘಪರಿವಾರ ಮಾತ್ರವಲ್ಲ, ಹಲವು ಆಳುವ ವರ್ಗದ ಬುದ್ದಿಜೀವಿಗಳು ಕಮ್ಯುನಿಸ್ಟರ ಮೇಲೆ “ಸೈದ್ಧಾಂತಿಕ ವಿಜಯ” ಎಂದುಕೊಂಡಿದ್ದಾರೆ. ಕೆಲವರು ಭಾರತದಲ್ಲಿ ಎಡಪಂಥೀಯರನ್ನು ಭಾರತದ ರಾಜಕಾರಣದಿಂದ “ರೈಟ್–ಆಫ್” ಮಾಡುತ್ತಾರೆ. ಇನ್ನು ಕೆಲವರು ಕಮ್ಯುನಿಸ್ಟರು ತಮ್ಮ ಸಿದ್ಧಾಂತ, ಧೋರಣೆಗಳನ್ನು ಬದಲಾಯಿಸಿಕೊಳ್ಳಬೇಕು, ಬದಲಾಗಬೇಕು, ಇಲ್ಲದಿದ್ದರೆ ಅಪ್ರಸ್ತುತವಾಗುತ್ತೀರಿ ಎಂದು ಬಿಟ್ಟಿ ಉಪದೇಶ ಮಾಡುತ್ತಾರೆ. ಗುಹಾ ಅವರದು ಎರಡನೇಯ ವಿಧ. ಅವರೆಲ್ಲರ ಉದ್ದೇಶ ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಮತ್ತು ಅವರ ನವ–ಉದಾರವಾದಿ ನೀತಿಗಳಿಗೆ ದೃಢ ವಿರೋಧ ಬಿಟ್ಟು ಕೊಡುವಂತೆ, ದುಡಿಯುವ ಜನರ ವಿಮೋಚನೆಗೆ ನೈಜ ಪ್ರಜಾಪ್ರಭುತ್ವ ಮತ್ತು ಅಂತಿಮವಾಗಿ ಸಮಾಜವಾದಿ ವ್ಯವಸ್ಥೆ ಸ್ಥಾಪಿಸುವ ಪ್ರಯತ್ನವನ್ನು ಕೈಬಿಡುವಂತೆ ಮಾಡುವುದು. ಅದಕ್ಕಾಗಿ ಮತ್ತು ಬೂರ್ಜ್ವಾ ಪಕ್ಷಗಳ ಯಜಮಾನಿಕೆಯಲ್ಲಿರಲು ಸಿಪಿಐ(ಎಂ) ಮತ್ತು ಎಡಪಕ್ಷಗಳ ಸದಸ್ಯರು ಹಾಗೂ ನಾಯಕರುಗಳ ಮೇಲೆ ಒತ್ತಡ ಹಾಕುವ ಹುನ್ನಾರದ ಭಾಗ. ಅದಕ್ಕಾಗಿ ಸೆಕ್ಯುಲರ್ ಉದಾರವಾದಿಗಳಾಗಿದ್ದವರೂ ಸಂಘಪರಿವಾರದ ಪ್ರಚಾರತಂತ್ರವನ್ನು ಬಳಸಲೂ ಹೇಸುವುದಿಲ್ಲ. ಈ ಲೇಖನದಲ್ಲಿ ಗುಹಾ ಪ್ರಯತ್ನಿಸುತ್ತಿರುವುದೂ ಅದನ್ನೇ. ಇಂತಹ ಸೈದ್ಧಾಂತಿಕ ಪ್ರಹಾರಗಳನ್ನು ದೃಢವಾಗಿ ಎದುರಿಸಿ ಹಿಮ್ಮೆಟ್ಟಿಸಬೇಕಾಗಿದೆ.

ಇದು ರಾಮಚಂದ್ರ ಗುಹಾ ಅವರ ಲೇಖನಕ್ಕೆ ಬರೆದ ಪ್ರತಿಕ್ರಿಯೆಯ ಪೂರ್ಣ ರೂಪ. ಇದರ ಸಂಗ್ರಹಿತ ರೂಪ ಪ್ರಜಾವಾಣಿಯಲ್ಲಿ ಪ್ರಕಟವಾಗಲಿದೆ.

ಜಿ.ವಿ. ಶ್ರೀರಾಮರೆಡ್ಡಿ

ಇದು ಮಾರ್ಚ್ 16 ರಂದು ಪ್ರಜಾವಾಣಿ ಯಲ್ಲಿ ಪ್ರಕಟವಾದ ರಾಮಚಂದ್ರ ಗುಹಾ ಅವರ ಗುಹಾಂಕಣದಲ್ಲಿ ಪ್ರಕಟವಾದ “ಲೆನಿನ್ ಬದಲಿಗೆ ಭಗತ್ ಸಿಂಗ್ ಯಾಕಾಗದು?” ಎಂಬ ಲೇಖನಕ್ಕೆ ಪ್ರತಿಕ್ರಿಯೆ. ಗುಹಾ ಅವರು ತಮ್ಮ ಲೇಖನದಲ್ಲಿ ಹಲವು ವಿಷಯಗಳ ಬಗ್ಗೆ ಆತಂಕಕಾರಿ ಎನ್ನಬಹುದಾದ ಪ್ರತಿಕ್ರಿಯೆಗಳನ್ನು ನೀಡಿದ್ದಾರೆ.

ಅದರಲ್ಲಿ ಮೊದಲನೆಯದು ತ್ರಿಪುರಾದಲ್ಲಿ ಲೆನಿನ್ ಪ್ರತಿಮೆಗಳನ್ನು ನೆಲಕ್ಕುರುಳಿಸಿದ ವಿಧ್ವಂಸಕ ಕೃತ್ಯಗಳ ಬಗ್ಗೆ ಅವರ ಪ್ರತಿಕ್ರಿಯೆ. ಅವರ ಪ್ರತಿಕ್ರಿಯೆಯ ಕೆಲವು ಉದಾಹರಣೆಗಳನ್ನು ನೋಡಿ:

* “ಲೆನಿನ್ ಪ್ರತಿಮೆಗಳ ಜಾಗದಲ್ಲಿ ತ್ರಿಪುರಾದ ಕಮ್ಯುನಿಸ್ಟ್ ನಾಯಕ ನೃಪೇನ್ ಚಕ್ರವರ್ತಿ ಪ್ರತಿಮೆಗಳಿದ್ದಿದ್ದರೆ ಅವನ್ನು ಒಡೆದು ಹಾಕುತ್ತಿರಲಿಲ್ಲವೇನೋ ಎಂದು ಬಿಜೆಪಿ ಕಾರ್ಯಕರ್ತನೊಬ್ಬ ಹೇಳಿದ್ದಾಗಿ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆ ವರದಿ ಮಾಡಿದೆ”
* “ತ್ರಿಪುರಾದಲ್ಲಿ ಸಿಪಿಎಂ ಭಗತ್ ಸಿಂಗ್ ಪ್ರತಿಮೆಗಳನ್ನು ಸ್ಥಾಪಿಸಿದ್ದರೆ ಏನಾಗುತ್ತಿತ್ತು? ರಾಜ್ಯದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಸಿಪಿಎಂ ಸೋತ ಬಳಿಕ ಬಿಜೆಪಿ ಕಾರ್ಯಕರ್ತರು ಈ ಪ್ರತಿಮೆಗಳನ್ನು ಒಡೆದು ಹಾಕುತ್ತಿದ್ದರೇ?”
* “ತ್ರಿಪುರಾದಲ್ಲಿ ಲೆನಿನ್ ಪ್ರತಿಮೆಗಳನ್ನು ನೆಲಕ್ಕುರುಳಿಸಿದ ಬಿಜೆಪಿಯ ವಿಜಯೋತ್ಸಾಹಿ ದುರುಳರಿಗೆ ಅಸಡ್ಡೆಗಿಂತ ಹೆಚ್ಚಿನ ಬೆಲೆ ಕೊಡುವ ಅಗತ್ಯ ಇಲ್ಲ. ಆದರೆ, ಆ ಪ್ರತಿಮೆಗಳನ್ನು ಅಲ್ಲಿ ಸ್ಥಾಪಿಸಿದ ಜನರ ಬಗ್ಗೆ ಅನುಕಂಪ ತೋರುತ್ತದೆ ಮತ್ತು ಬೇಸರವೂ ಅನಿಸುತ್ತದೆ.”
* “ನಾನು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬದುಕುತ್ತಿರುವ ವ್ಯಕ್ತಿ. ಹಾಗಾಗಿ ಸರ್ವಾಧಿಕಾರಿಗಳಿಂದ ದೂರ ಇರಬೇಕು.”

ಈ ಎಲ್ಲಾ ಹೇಳಿಕೆಗಳ ಮೂಲಕ ಗುಹಾ ಏನು ಹೇಳಲು ಬಯಸುತ್ತಾರೆ? ಸಂಘ ಪರಿವಾರಕ್ಕೆ ಕಿರಿಕಿರಿ ಉಂಟುಮಾಡದವರ, ಅವರಿಗೆ ಅಪಥ್ಯವಾಗದವರ ಪ್ರತಿಮೆ ಮಾತ್ರ ಸ್ಥಾಪಿಸಬೇಕು. ಪ್ರತಿಮೆ ಸ್ಥಾಪಿಸುವ ಮೊದಲು ಅವರ ಸಮ್ಮತಿ ತೆಗೆದುಕೊಳ್ಳಬೇಕು ಅಂತನಾ? ಭಗತ್ ಸಿಂಗ್ ಅಥವಾ ನೃಪೇನ್ ಚಕ್ರವರ್ತಿ ಪ್ರತಿಮೆಗಳನ್ನು ಸಂಘಪರಿವಾರದ ಗೂಂಡಾಗಳು ಒಡೆಯುವುದಿಲ್ಲ ಎಂದು ಗುಹಾ ಭರವಸೆಯಿಂದ ಹೇಳಬಲ್ಲರೇ? ಈ ವರೆಗೆ ಭಗತ್ ಸಿಂಗ್ ಯಾವುದೇ 'ವಿದೇಶಿ' ಸಿದ್ದಾಂತದಿಂದ ಕಳಂಕಿತನಾಗದ ಅಪ್ಪಟ ದೇಶಪ್ರೇಮಿ” ಎಂದಷ್ಟೇ ಸಂಘ ಪರಿವಾರದ ಮಂಡಲಿಗೆ ಗೊತ್ತಿದ್ದದ್ದು. ಭಗತ್ ಸಿಂಗ್ ಮಾರ್ಕ್ಸ ವಾದಿ ಎಂದು ಗುಹಾ ಸರ್ಟಿಫಿಕೇಟ್ ನೀಡಿದ್ದರಿಂದ ಖಂಡಿತ ಮುಂದಿನ ಅವಕಾಶದಲ್ಲಿ ಭಗತ್ ಸಿಂಗ್ ಪ್ರತಿಮೆಯೂ ಅವರ ಪಟ್ಟಿಗೆ ಸೇರಿಕೊಳ್ಳುತ್ತದೆ.

ಮರುದಿನವೇ ಸಂಘ ಪರಿವಾರ ಪೆರಿಯಾರ್ ಅಂಬೇಡ್ಕರ್ ಅವರ ಪ್ರತಿಮೆಗಳ ಮೇಲೂ ವಿಧ್ವಂಸಕ ಕೃತ್ಯ ಮಾಡಿದ್ದಕ್ಕೆ ಗುಹಾ ಏನು ಹೇಳುತ್ತಾರೆ? ಅವರನ್ನೂ ಗುಹಾ 'ವಿದೇಶಿ' ಮತ್ತು 'ಸರ್ವಾಧಿಕಾರಿ' ಎಂದು ಕರೆಯುತ್ತಾರಾ? ಆ ಪ್ರತಿಮೆಗಳನ್ನು ಸ್ಥಾಪಿಸಿದವರ ಬಗೆಗೂ, ಪೆರಿಯಾರ್ ಹಾಗೂ ಅಂಬೇಡ್ಕರ್ ವಾದಿಗಳಿಗೂ ಮತ್ತು ಈ ನಾಯಕರನ್ನು ಒಪ್ಪದಿದ್ದರೂ ಗೌರವಿಸುವವರ ಬಗೆಗೂ ಗುಹಾ ಅವರಿಗೆ “ಅನುಕಂಪ ತೋರುತ್ತದೆ ಮತ್ತು ಬೇಸರವೂ ಅನಿಸುತ್ತದೆ.”ಯಾ? ಈ ಬಗ್ಗೆ ಯಾಕೆ ಅವರು ಜಾಣಮೌನಕ್ಕೆ ಜಾರುತ್ತಾರೆ?



ಮರುದಿನವೇ ಸಂಘ ಪರಿವಾರ ಪೆರಿಯಾರ್ ಅಂಬೇಡ್ಕರ್ ಅವರ ಪ್ರತಿಮೆಗಳ ಮೇಲೂ ವಿಧ್ವಂಸಕ ಕೃತ್ಯ ಮಾಡಿದ್ದಕ್ಕೆ ಗುಹಾ ಏನು ಹೇಳುತ್ತಾರೆ? ಅವರನ್ನೂ ಗುಹಾ 'ವಿದೇಶಿ' ಮತ್ತು 'ಸರ್ವಾಧಿಕಾರಿ' ಎಂದು ಕರೆಯುತ್ತಾರಾ? ಆ ಪ್ರತಿಮೆಗಳನ್ನು ಸ್ಥಾಪಿಸಿದವರ ಬಗೆಗೂ ಗುಹಾ ಅವರಿಗೆ “ಅನುಕಂಪ ತೋರುತ್ತದೆ ಮತ್ತು ಬೇಸರವೂ ಅನಿಸುತ್ತದೆ.”ಯಾ? ಈ ಬಗ್ಗೆ ಯಾಕೆ ಅವರು ಜಾಣಮೌನಕ್ಕೆ ಜಾರುತ್ತಾರೆ?

ಸಂಘ ಪರಿವಾರದ “ಪ್ರತಿಮೆ–ವಿಧ್ವಂಸಕ” ರಾಜಕಾರಣವನ್ನು ದೇಶದ ಪ್ರಜಾಪ್ರಭುತ್ವವಾದಿಗಳು ಒಕ್ಕೊರಲಿನಿಂದ ಖಂಡಿಸಿದ್ದಾರೆ. ಆತಂಕ ವ್ಯಕ್ತಪಡಿಸಿದ್ದಾರೆ. ತ್ರಿಪುರಾದ ಚುನಾವಣಾ ವಿಜಯದ ನಂತರ ಸಿಪಿಐ(ಎಂ) ಸದಸ್ಯರು ಬೆಂಬಲಿಗರ ಮೇಲೆ ಸಂಘಪರಿವಾರ ನಡೆಸುತ್ತಿರುವ ದೌರ್ಜನ್ಯಗಳು, ಕೊಲೆ–ಸುಲಿಗೆಗಳು ಮತ್ತು ಕಚೇರಿಗಳ ನಾಶವನ್ನೂ ಅವರು ಖಂಡಿಸಿದ್ದಾರೆ. ಇವರಲ್ಲಿ ಹಲವು ಕಮ್ಯುನಿಸ್ಟ್–ವಿರೋಧಿಗಳೂ ಸೇರಿದ್ದಾರೆ. ಅವರೆಲ್ಲರೂ ಈ ಪ್ರತಿಮೆ ಯಾರದು? ಅವರ ಸಿದ್ಧಾಂತಗಳನ್ನು ತಾವು ಒಪ್ಪುತ್ತೇವೋ ಬಿಡುತ್ತೇವೋ? ಎಂಬುದರ ತಾರತಮ್ಯವಿಲ್ಲದೆ ಈ ವಿಧ್ವಂಸಕ ರಾಜಕಾರಣದ ಮಾದರಿ ಪ್ರಜಾಪ್ರಭುತ್ವವಾದಿ ವ್ಯವಸ್ಥೆ ಮೇಲೆ ಪ್ರಹಾರ ಎಂದು ಖಂಡಿಸಿದ್ದಾರೆ. ಈಗ ತ್ರಿಪುರಾದಲ್ಲಿ ಸಂಘಪರಿವಾರ ತೋರಿಸಿರುವುದು ಬರಿಯ 'ಟ್ರೈಲರ್'. ಗುಹಾ ಸೂಚಿಸುವಂತೆ ಈ ಬಗ್ಗೆ ಎಲ್ಲರೂ ಅಸಡ್ಡೆ ತೋರಿದರೆ ನೆಹರೂ, ಭಗತ್ ಸಿಂಗ್, ಗಾಂಧೀಜಿ, ಬಸವಣ್ಣ ಎಲ್ಲಾ ಪ್ರತಿಮೆಗಳಿಗೂ ಅದೇ ಗತಿ ಕಾದಿದೆ.

ನನಗೆ ಗೊತ್ತಿರುವ ಹಾಗೆ ಸಂಘಪರಿವಾರದ ಬೆಂಬಲಿಗರು ಒಡನಾಡಿಗಳು ಬಿಟ್ಟರೆ ಯಾರೂ ಗುಹಾ ತಮ್ಮ ಲೇಖನದಲ್ಲಿ ಮಾಡಿದಂತಹ ವಿತಂಡವಾದ ಮಾಡಿ “ಪ್ರತಿಮೆ–ವಿಧ್ವಂಸಕ” ರಾಜಕಾರಣವನ್ನು ಎಳ್ಳಷ್ಟು ಸಮರ್ಥಿಸಿಲ್ಲ. 'ಅಸಡ್ಡೆ' ಮಾಡಿದರೆ ಸಾಕು ಎಂದು ಕೂತಿಲ್ಲ. ಕೆಲವು ಸಂಘಪರಿವಾರದ ಬೆಂಬಲಿಗರೂ ಒಡನಾಡಿಗಳೂ ಅದನ್ನು ಸಮರ್ಥಿಸಲಾಗದೆ ಖಂಡಿಸಿದ್ದಾರೆ. ಇಲ್ಲಿ ಉದಾಹರಣೆಗಳಾಗಿ ಕೇವಲ ಎರಡು ಪ್ರತಿಕ್ರಿಯೆಗಳನ್ನು ನಾನು ಇಲ್ಲಿ ನೆನಪಿಸಲು ಬಯಸುತ್ತೇನೆ. ಒಂದು ಗೋಪಾಲಕೃಷ್ಣ ಗಾಂಧಿ ಅವರ (ದಿ ಹಿಂದೂ ನಲ್ಲಿ ಪ್ರಕಟವಾದ) ಪ್ರತಿಕ್ರಿಯೆ ಪ್ರಾಮಾಣಿಕ ಪ್ರಜಾಪ್ರಭುತ್ವವಾದಿಗಳ ಪ್ರತಿಕ್ರಿಯೆಯ ಉದಾಹರಣೆಯಾಗಿ. ಇನ್ನೊಂದು ಸಂಘಪರಿವಾರದ ಒಡನಾಡಿ ಚಂದನ್ ಗುಪ್ತಾ ಅವರ (ಎನ್.ಡಿ.ಟಿ.ವಿ. ವೆಬ್ ಸೈಟಿನಲ್ಲಿ ಪ್ರಕಟವಾದ) ಪ್ರತಿಕ್ರಿಯೆ.

ಗೋಪಾಲಕೃಷ್ಣ ಗಾಂಧಿ ಅವರು ಇದನ್ನು ಬಾಬ್ರಿ ಮಸೀದಿ–ನಾಶದಿಂದ ಆರಂಭವಾದ “ಆಪರೇಶನ್ ಧಕ್ಕಾ”ದ ಧ್ವಂಸ ಕೃತ್ಯಗಳ ಸರಣಿಯ ಭಾಗವಾಗಿ ನೋಡುತ್ತಾರೆ. ಚಂದನ್ ಗುಪ್ತಾ ತಮ್ಮ ಲೇಖನದಲ್ಲಿ ಲೆನಿನ್, ಸಿಪಿಐ(ಎಂ), ಕಮ್ಯುನಿಸಂ ವಿರುದ್ಧ ತಮ್ಮ ವಿರೋಧವನ್ನು ವ್ಯಕ್ತಪಡಿಸಿಯೂ ನಮ್ಮ ಸಮಾಜದ ಜಾತಿ ಮುಂತಾದ ಕಂದಕಗಳ ಸಾಮಾಜಿಕ ಹಂದರವನ್ನೆ ನಾಶ ಮಾಡಬಲ್ಲ ಪ್ರತಿಮೆ–ವಿಧ್ವಂಸಕ ರಾಜಕಾರಣದ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ.

ಚಂದನ್ ಗುಪ್ತಾ ಅವರಷ್ಟೂ ಆತಂಕ ವ್ಯಕ್ತಪಡಿಸದ, ಮಾತ್ರವಲ್ಲ ಅದನ್ನು ಸಮರ್ಥಿಸುವ, ತ್ರಿಪುರಾದ ಸಿಪಿಐ(ಎಂ) ಕಾರ್ಯಕರ್ತರ ಕಚೇರಿಗಳ ಮೇಲೆ ಕೊಲೆ–ಸುಲಿಗೆಗಳನ್ನು ಖಂಡಿಸದೆ ಅದರ ಬಗ್ಗೆ ಜಾಣ ಮೌನ ವಹಿಸುವ ಗುಹಾ ಅವರನ್ನು ಪ್ರಜಾಪ್ರಭುತ್ವವಾದಿ ಎಂದು ನಾವು ಒಪ್ಪಿಕೊಳ್ಳಬಹುದೇ?

“ಚಾರಿತ್ರಿಕ” ತಪ್ಪುಗಳು

ಖ್ಯಾತ ಇತಿಹಾಸಕಾರನೆನಿಸಿರುವ ಗುಹಾ ಲೇಖನದ ಕೆಲವು ಮುಖ್ಯ 'ಚಾರಿತ್ರಿಕ' ತಪ್ಪುಗಳನ್ನು ನೋಡಿ:

1. “ಭಗತ್ ಸಿಂಗ್ ಗೆ ರಷ್ಯಾದಲ್ಲಿ ಲೆನಿನ್ ಮತ್ತು ಸ್ಟಾಲಿನ್ ಸೃಷ್ಟಿಸಿದ ವಿಕೃತಿಗಳು ಮತ್ತು ಭೀತಿಯ ಬಗ್ಗೆ ತಿಳಿದಿರುವುದು ಸಾಧ್ಯವೇ ಇಲ್ಲ.

ಲೆನಿನ್ ತೀರಿಕೊಂಡಿದ್ದು 1924ರಲ್ಲಿ. ಭಗತ್ ಸಿಂಗ್ ಹುತಾತ್ಮರಾದದ್ದು 1931ರಲ್ಲಿ. ಸ್ಟಾಲಿನ್ ಅಲ್ಲದಿದ್ದರೂ, ಲೆನಿನ್ ಅವರು ಸೃಷ್ಟಿಸಿದ ತಥಾಕಥಿತ “ವಿಕೃತಿಗಳು ಮತ್ತು ಭೀತಿಯ ಬಗ್ಗೆ ತಿಳಿದಿರುವುದು ಸಾಧ್ಯವೇ ಇಲ್ಲ.” ಎಂದು ಗುಹಾ ಹೇಗೆ ಹೇಳುತ್ತಾರೆ?

2. “1989ರಲ್ಲಿ ಬರ್ಲಿನ್ ಗೋಡೆ ಉರುಳಿತು; ಒಂದು ಕಾಲದಲ್ಲಿ ಆತ ಆಳಿದ್ದ ದೇಶಗಳೇ ಲೆನಿನನ್ನು ಸಮಗ್ರವಾಗಿ ತಿರಸ್ಕರಿಸಿಬಿಟ್ಟವು”

1989ರಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ತ್ಯಜಿಸಿದ ದೇಶಗಳು ಪೂರ್ವ ಯುರೋಪಿನ ದೇಶಗಳು. ಅವುಗಳನ್ನು ಲೆನಿನ್ ಎಂದೂ “ಆಳಿ”ರಲಿಲ್ಲ, ಏಕೆಂದರೆ ಇವು ಸಮಾಜವಾದಿ ಬಣ ರೂಪಿಸಿದ್ದೇ ಲೆನಿನ್ ನಿಧನದ ಎರಡು ದಶಕಗಳ ನಂತರ.

3. “ಈಶಾನ್ಯ ಭಾರತದಲ್ಲಿ ಎಚ್.ಎಸ್.ಆರ್.ಎ. ಹೆಚ್ಚು ಸಕ್ರಿಯವಾಗಿತ್ತು. ಹೀಗಾಗಿ, ಭಗತ್ ಸಿಂಗ್ ಮಾರ್ಕ್ಸ್‌ವಾದಿ ಆಗಿದ್ದರೂ ಅವರು ಅವಿಭಜಿತ ಸಿಪಿಐ ಸದಸ್ಯ ಆಗಿರಲಿಲ್ಲ.”


4. “ಸಿಪಿಎಂ ತನ್ನ ಮೂಲವನ್ನು ಗುರುತಿಸಿಕೊಳ್ಳುವುದು ಅವಿಭಜಿತ ಸಿಪಿಐನಲ್ಲಿ. ಸಿಖ್ ಕ್ರಾಂತಿಕಾರಿ ಭಗತ್ ಸಿಂಗ್ ಸಿಪಿಐನ ಸದಸ್ಯ ಆಗಿರಲಿಲ್ಲ. ಹಾಗಾಗಿಯೇ ಸಿಪಿಎಂನ ಮಹಾಪುರುಷರ ಪಟ್ಟಿಯಲ್ಲಿ ಭಗತ್ ಸಿಂಗ್ ಗೆ ಜಾಗ ಇಲ್ಲ”

ಎಚ್.ಎಸ್.ಆರ್.ಎ. ಸಕ್ರಿಯವಾಗಿದ್ದದ್ದು ವಾಯುವ್ಯ ಮತ್ತು ಉತ್ತರ ಭಾರತದಲ್ಲಿ ಮತ್ತು 1930ರ ದಶಕದಲ್ಲಿ. ಭಗತ್ ಸಿಂಗ್ ನನ್ನು “ಸಿಖ್ ಕ್ರಾಂತಿಕಾರಿ” ಎಂದು ಕರೆಯುವುದು ಚಾರಿತ್ರಿಕವಾಗಿ

ಪುಟ 11 ಕ್ಕೆ

ರಾಷ್ಟ್ರಕವಿ ಕುವೆಂಪು ಲೆನಿನ್ ಬಗ್ಗೆ ಬರೆದ ಪದ್ಯದಲ್ಲಿ ಹೀಗೆನ್ನುತ್ತಾರೆ:

ಲೆನಿನ್, ನಿನ್ನ ಹೆಸರದು ಸಿಡಿಲ್ ಸದ್ದು
ದೊರೆಗಿವಿಗೆ! ನಿನ್ನ ಸಮತಾಬೋಧೆ
ಸಿಡಿಮದ್ದು
ಅಂದರೆ ಗುಹಾ ಅವರದು ದೊರೆಗಿವಿಯೇ?
ದೇಶಿ–ವಿದೇಶಿ ದೊರೆಗಳ ಪರವಾದ
ಧೋರಣೆಯೇ?



ವಾಸುದೇವ ಉಚ್ಚಿಲ

ಮುಂಬರುವ ವಿಧಾನಸಭೆ ಚುನಾವಣೆಗಳಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳು ಸ್ಪರ್ಧಿಸಲಿರುವ ಆಯ್ದ ಕ್ಷೇತ್ರಗಳ ಚುನಾವಣಾ ಪ್ರಕ್ರಿಯೆ ಬಗ್ಗೆ ವಿಶೇಷವಾಗಿ ವರದಿ ಮಾಡಲು 'ಜನಶಕ್ತಿ' ನಿರ್ಣಯಿಸಿದೆ. ಈ ವರದಿಗಳು ಪ್ರಮುಖವಾಗಿ ಮೂರು ಹಂತದ ಸಮೀಕ್ಷೆಗಳನ್ನು ಹೊಂದಿರುತ್ತವೆ. ಇವಲ್ಲದೆ ಕೆಲವು ಕ್ಷೇತ್ರಗಳ ವಿಶೇಷ ವರದಿಗಳು ಪ್ರಕಟವಾಗಲಿವೆ. ಪ್ರತಿ ಕ್ಷೇತ್ರದ ಬಗ್ಗೆ ಚುನಾವಣಾ ಘೋಷಣೆಗೆ ಮೊದಲಿನ, ಘೋಷಣೆಯ ನಂತರ ಮತ್ತು ಅಭ್ಯರ್ಥಿ ಆಯ್ಕೆ ನಂತರ – ಈ ಮೂರು ಹಂತದ ಸಮೀಕ್ಷಾ ವರದಿಗಳನ್ನು ಪ್ರಕಟಿಸಲಾಗುತ್ತದೆ. ಮೊದಲ ಹಂತದ ವರದಿ ಕ್ಷೇತ್ರದ ಸಾಮಾಜಿಕ–ಆರ್ಥಿಕ ಪರಿಸ್ಥಿತಿ, ಜನತೆ ಎದುರಿಸುತ್ತಿರುವ ಸಮಸ್ಯೆಗಳು, ಅವನ್ನು ಪರಿಹರಿಸಲು ಹಾಲಿ ಶಾಸಕನ ಪ್ರಯತ್ನಗಳು, ಸಾಫಲ್ಯ–ವೈಫಲ್ಯಗಳು, ಹಾಲಿ ಶಾಸಕನ ಹಗರಣಗಳು, ಇತ್ಯಾದಿಗಳನ್ನು ಒಳಗೊಂಡಿರುತ್ತದೆ.

ಈ ವರೆಗೆ ಮಂಗಳೂರು ದಕ್ಷಿಣ, ಉತ್ತರ ಮತ್ತು ಶ್ರೀನಿವಾಸಪುರ ಕ್ಷೇತ್ರಗಳ ಮೊದಲಿನ ಹಂತದ ಸಮೀಕ್ಷಾ ವರದಿಗಳು ಪ್ರಕಟವಾಗಿವೆ. ಈ ವಾರ ಮಂಗಳೂರು ಮತ್ತು ಕೆ.ಜಿ.ಎಫ್. ಕ್ಷೇತ್ರಗಳ ವರದಿ.

ಕರ್ನಾಟಕ ಜನಮತ 2018

ಈಗ ಮಂಗಳೂರು ಎನಿಸಿದ ಹಳೆಯ ಉಳ್ಳಾಲ ಅಸೆಂಬ್ಲಿ ಕ್ಷೇತ್ರ



204 ಮಂಗಳೂರು ಎನಿಸಿರುವ ಇಂದಿನ ವಿಧಾನಸಭಾ ಕ್ಷೇತ್ರದಲ್ಲಿ ಮಂಗಳೂರು ಮಹಾನಗರದ ಒಂದು ಭಾಗವೂ ಇಲ್ಲ. ಇದರ ಹೆಚ್ಚಿನ ಪ್ರದೇಶಗಳು ಹಿಂದೆ ಬಹಳ ಕಾಲ ಉಳ್ಳಾಲ ವಿಧಾನಸಭಾ ಕ್ಷೇತ್ರ ಎಂದು ಪರಿಚಿತವಾಗಿದ್ದ ಅಸೆಂಬ್ಲಿ ಕ್ಷೇತ್ರದ ಊರುಗಳು, ದಕ್ಷಿಣ ಕನ್ನಡದ ಅತ್ಯಂತ ದಕ್ಷಿಣದಲ್ಲಿದ್ದು ಕೇರಳವೇ ದಕ್ಷಿಣದ ಗಡಿಯಾಗಿರುವ ಮಂಗಳೂರು ಅಸೆಂಬ್ಲಿ ಕ್ಷೇತ್ರಕ್ಕೆ ಪಶ್ಚಿಮದಲ್ಲಿ ಅರಬಿ ಸಮುದ್ರವೇ ಗಡಿಯಾಗಿದೆ. ಉತ್ತರದಲ್ಲಿ ಅಗಲವಾಗಿ ಹರಿಯುವ ನೇತ್ರಾವತಿ ನದಿಯ ಬಹುಪಾಲು ಗಡಿಯಾಗಿದ್ದರೂ, ನೇತ್ರಾವತಿಯ ಉತ್ತರಕ್ಕಿರುವ ಬಂಟ್ವಾಳ ತಾಲೂಕಿನ 4 ಗ್ರಾಮಗಳೂ ಈ ಕ್ಷೇತ್ರಕ್ಕೆ ಸೇರಿವೆ. ಮಂಗಳೂರು ತಾಲೂಕಿನ 14 ಗ್ರಾಮಗಳೂ, ಪೂರ್ವಕ್ಕಿರುವ ಬಂಟ್ವಾಳ ತಾಲೂಕಿನ 13 ಗ್ರಾಮಗಳೂ ಸೇರಿ ಮಂಗಳೂರು ವಿಧಾನಸಭಾ ಕ್ಷೇತ್ರವಾಗಿದೆ.

ಹಳೆಯ ಉಳ್ಳಾಲ ಅಸೆಂಬ್ಲಿ ಕ್ಷೇತ್ರದಲ್ಲಿ ಮಂಗಳೂರು ತಾಲೂಕಿನ ಈಗಿನ 13 ಗ್ರಾಮಗಳಲ್ಲದೆ, ಮಂಗಳೂರು ನಗರದ ದಕ್ಷಿಣದಲ್ಲಿ ನೇತ್ರಾವತಿ ನದಿಗೆ ಒತ್ತಿನಲ್ಲಿರುವ ಹಲವಾರು ವಾರ್ಡುಗಳು ಸೇರಿಕೊಂಡಿದ್ದವು. ನಗರದ ವಾರ್ಡುಗಳಲ್ಲಿ ಕೆಳವರ್ಗದ ಕಾರ್ಮಿಕ ವರ್ಗ ಜಾಸ್ತಿ ಇದ್ದಿತ್ತು. ಅಂತೆಯೇ ನೇತ್ರಾವತಿ ದಕ್ಷಿಣದಲ್ಲಿರುವ 13 ಗ್ರಾಮಗಳಲ್ಲಿಯೂ ರೈತರ ಮಕ್ಕಳು, ಕೂಲಿಕಾರರು ಮಂಗಳೂರಿಗೆ ಬಂದು ಹಂಚಿನ ಕಾರ್ಖಾನೆಗಳಲ್ಲೋ, ಹಳೆ ಮಂಗಳೂರು ಬಂದರಿನಲ್ಲೋ, ಅಥವಾ ಮಂಗಳೂರಿನ ಇನ್ನಿತರ ಉದ್ದಿಮೆಗಳಲ್ಲೋ ದುಡಿಯುವ ಕೂಲಿ ಕಾರ್ಮಿಕರಾಗಿದ್ದರು. ಹಳೆಯ ಉಳ್ಳಾಲ ಅಸೆಂಬ್ಲಿ ಪ್ರದೇಶವು ಮಂಗಳೂರು ನಗರಕ್ಕೆ ಆಧುನಿಕ ಕೈಗಾರಿಕಾ ಕಾರ್ಮಿಕರನ್ನು ಒದಗಿಸಿದ ಪ್ರದೇಶವಾಗಿತ್ತು. ಹಾಗಾಗಿ ಮಂಗಳೂರಿನಲ್ಲಿ ನೇಯ್ಗೆ, ಬೀಡಿ, ಹಂಚು ಇತ್ಯಾದಿ ಉದ್ಯಮಗಳು 1930 ರಿಂದ ಉದಯಿಸಿ ಬೆಳೆಯುವಲ್ಲಿ ಶ್ರಮದ ಪಾಲನ್ನು ಒದಗಿಸಿದ ಮಾನವ ಶಕ್ತಿಯ ನೆಲೆಯಾಗಿ ಉಳ್ಳಾಲ ಅಸೆಂಬ್ಲಿ ಪ್ರದೇಶವು ಇದ್ದಿತ್ತು. ಭಾರತ ಪ್ರಜಾಪ್ರಭುತ್ವ ರಾಷ್ಟ್ರವಾಗಿ ರಾಜ್ಯಗಳ ಅಸೆಂಬ್ಲಿಗಳಿಗೆ ಚುನಾವಣೆ 1952 ರಲ್ಲಿ ಆರಂಭವಾದಾಗಿನಿಂದಲೂ, ಈ ಪ್ರದೇಶದಲ್ಲಿ (ಆಗ ಇದು ಪಾಣೆಮಂಗಳೂರು–ಮಂಜೇಶ್ವರ ಕ್ಷೇತ್ರ) ಕಾರ್ಮಿಕ ಪರವಾದ ಕಮ್ಯೂನಿಸ್ಟ್ ಪಕ್ಷವು ಸ್ಪರ್ಧಿಸುವ ಪರಂಪರೆಯನ್ನು ನಾವು ಕಾಣುತ್ತೇವೆ. ರಾಜ್ಯ ಪುನರ್ವಿಂಗಡಣೆಯ ಬಳಿಕ ಮಂಜೇಶ್ವರ ಕೇರಳಕ್ಕೆ ಸೇರಿದುದರಿಂದ 1957ರಲ್ಲಿ ಉಳ್ಳಾಲವು ಪಾಣೆಮಂಗಳೂರು ಕ್ಷೇತ್ರದ ಭಾಗವಾಗಿತ್ತು. 1962ರಲ್ಲಿ ಉಳ್ಳಾಲ ಅಸೆಂಬ್ಲಿ ಕ್ಷೇತ್ರ ಎನಿಸಿದ್ದು, ಅಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ಗೆದ್ದ ಎ.ಕೃಷ್ಣ ಶೆಟ್ಟರು 5 ವರ್ಷ ಕಮ್ಯೂನಿಸ್ಟ್ ಪಕ್ಷದಿಂದ ಶಾಸಕರಾಗಿ ದ.ಕ. ಜಿಲ್ಲೆಯಿಂದ ಮೊದಲನೆಯದಾಗಿ ಆಯ್ಕೆ ಆದವರು. ಮತ್ತೆ 1983ರಲ್ಲಿ ಉಳ್ಳಾಲದಿಂದ ಸ್ಪರ್ಧಿಸಿ ಗೆದ್ದ ಪಿ.ರಾಮಚಂದ್ರ ರಾವ್ 2 ವರ್ಷ ಸಿಪಿಐ(ಎಂ)ನ ಶಾಸಕರಾಗಿ ಪ್ರತಿನಿಧಿಸಿದ್ದರು. ಉಳ್ಳಾಲ ಅಸೆಂಬ್ಲಿ ಕ್ಷೇತ್ರ ಎನಿಸಿದಾಗೆಲ್ಲ, ಈ ಕ್ಷೇತ್ರ ವ್ಯಾಪ್ತಿಯಲ್ಲಿ ಮಂಗಳೂರು ನಗರದ ಕೆಲವು ವಾರ್ಡುಗಳೂ ಇದ್ದುವು. 2008ರಲ್ಲಿ ಕ್ಷೇತ್ರಗಳ ಪುನರ್ವಿಂಗಡಣೆಯಾದಾಗ, ಹಳೆಯ ಉಳ್ಳಾಲವು 204 ಮಂಗಳೂರು ಎನಿಸಿದ್ದು, ಅದು ಒಂದೆಡೆ ಮಂಗಳೂರು ನಗರದ ವಾರ್ಡುಗಳನ್ನು ಕಳಕೊಂಡಿತ್ತು. ಅದಕ್ಕೆ ಬದಲಿಯಾಗಿ ಬಂಟ್ವಾಳ ತಾಲೂಕಿನ ರೈತರು ಪ್ರಧಾನವಾದ ಗ್ರಾಮಗಳನ್ನು ತಗಲಿಸಿಕೊಂಡಿತು.

ಸದ್ಯದ 204 ಮಂಗಳೂರು ಅಸೆಂಬ್ಲಿ ಕ್ಷೇತ್ರವನ್ನು ಸಿಪಿಐ(ಎಂ) ಪಕ್ಷದ ಪ್ರಭಾವದ ದೃಷ್ಟಿಯಿಂದ ವಿವರಿಸುವುದು ಅಗತ್ಯ. 204 ಮಂಗಳೂರು ಅಸೆಂಬ್ಲಿ ಕ್ಷೇತ್ರದ 26 ಗ್ರಾಮಗಳಲ್ಲಿ ಕೆಲವು ಸಣ್ಣ ಪಟ್ಟಣಗಳಾಗಿ ಬೆಳವಣಿಗೆ ಹೊಂದಿದೆ. ಉಳ್ಳಾಲ ಪುರಸಭೆಯಾಗಿದೆ. ಸೋಮೇಶ್ವರ, ಕೋಟೆಕಾರು, ಪುದು, ತುಂಬೆ, ಸಜಿಪನಡುಗಳು ಪಟ್ಟಣ ಪಂಚಾಯತುಗಳಾಗಿ ಮೇಲ್ದರ್ಜೆಗೇರಿದೆ. ಒಂದೊಮ್ಮೆ ಬತ್ತದ ಸಾಗುವಳಿಯ ಪ್ರದೇಶಗಳಾಗಿದ್ದ ಗ್ರಾಮಗಳಲ್ಲಿ ವಾಣಿಜ್ಯ ಬೆಳೆಗಳಾಗಿ ಅಡಿಕೆ, ತೆಂಗು ಬೆಳೆಯಲಾಗುತ್ತಿದೆ. ಮಂಗಳೂರಿನಿಂದ ತೊಕ್ಕೋಟಾಗಿ ಮುಡಿಪುವರೆಗೆ ಸಾಗುವ ರಸ್ತೆ ಪಕ್ಕಗಳಲ್ಲಿ ಸಾಲಾಗಿ ಮೆಡಿಕಲ್ ಕಾಲೇಜು, ಆಸ್ಪತ್ರೆ, ಎಂಜಿನಿಯರಿಂಗ್ ಕಾಲೇಜುಗಳನ್ನು ಇತರ ಪದವಿ ಕಾಲೇಜುಗಳನ್ನು, ಮಂಗಳೂರು ವಿ.ವಿ.ಕ್ಯಾಂಪಸನ್ನು ಕಾಣಬಹುದಾಗಿದೆ. ಏನೆಪೋಯ, ನಿಟ್ಟೆ ಕೆ.ಎಸ್. ಹೆಗ್ಡೆ, ಕಣಚೂರು, ಫಾದರ್ ಮುಲ್ಲರ್ಸ್ ಸಮೂಹದ ಮೆಡಿಕಲ್ ಕಾಲೇಜುಗಳು ಹಾಗೂ ಆಸ್ಪತ್ರೆಗಳಿವೆ. ಸೈಂಟ್ ಅಲೋಶಿಯಸ್ ಉನ್ನತ ಶಿಕ್ಷಣ ಕೇಂದ್ರ, ಮಂಗಳೂರು ವಿ.ವಿ., ಪಿ.ಎ.ಇಂಜಿನಿಯರಿಂಗ್ ಕಾಲೇಜು ಎಲ್ಲ ದಾಟಿ ಮುಡಿಪಿನ ಬಳಿಗೆ ಹೋದರೆ ಅಲ್ಲಿ ವಿಶಾಲವಾದ ಗುಡ್ಡದ ಮೇಲೆಯೇ ಇನ್ಫೋಸಿಸ್ ಸಂಸ್ಥೆಯ ಕಟ್ಟಡ ಸಾಲುಗಳಿವೆ. ಮಂಗಳೂರಿನಲ್ಲಿ 40ರಷ್ಟು ಹಂಚಿನ ಕಾರ್ಖಾನೆಗಳು ಇದ್ದ ದಿನಗಳಲ್ಲಿ ಮುಡಿಪಿನಿಂದಲೂ ಸೈಕಲ್ ಮೆಟ್ಟಿ ನೇತ್ರಾವತಿ ಸೇತುವೆವರೆಗೆ ಬಂದು ಹೊಳೆದಾಟಿ ಮಂಗಳೂರಿನ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಗ್ರಾಮೀಣ ರೈತರಿದ್ದರು. ಮುಡಿಪು ಮತ್ತು ಸುತ್ತಲಿನ ಬಂಟ್ವಾಳ ತಾಲೂಕಿನ ಗ್ರಾಮಗಳಲ್ಲಿ ಇವತ್ತಿಗೂ ಕೃಷಿಯೇ ಪ್ರಧಾನವಾಗಿದೆ. ಮಹಿಳೆಯರಿಗೆ ಬೀಡಿ ಕಟ್ಟುವುದು ಸಾಮಾನ್ಯ ವೃತ್ತಿಯಾಗಿದೆ. ನೇತ್ರಾವತಿ ನದಿಯ ಉತ್ತರದಲ್ಲಿರುವ ಪುದು(ಫರಂಗಿಪೇಟೆ), ತುಂಬೆಗಳು ಮಂಗಳೂರು–ಬೆಂಗಳೂರು ಹೆದ್ದಾರಿ ಮೇಲಿದ್ದು, ಸಣ್ಣ ಪಟ್ಟಣಗಳಾಗಿ ವ್ಯಾಪಾರ ಕೇಂದ್ರಗಳಾಗಿವೆ. ಕ್ಷೇತ್ರದ ಕರಾವಳಿಯ ಗ್ರಾಮಗಳು ಮಂಗಳೂರು–ಕೇರಳ ರಾಷ್ಟ್ರೀಯ ಹೆದ್ದಾರಿ ಮೇಲಿದ್ದು, ಮಂಗಳೂರಿಗಿರುವ ಸಾಮೀಪ್ಯ ಹಾಗೂ ಸಾರಿಗೆ ಅನುಕೂಲತೆಗಳಿಂದ ತೊಕ್ಕೋಟು, ಉಳ್ಳಾಲ, ಕೋಟೆಕಾರ್, ಕೆ.ಸಿ.ರೋಡ್, ದೇರಳಕಟ್ಟೆ ಇತ್ಯಾದಿ ಪೇಟೆಗಳನ್ನು ಸೃಷ್ಟಿಸಿಕೊಂಡಿದ್ದು, ವ್ಯಾಪಾರ ಕೇಂದ್ರಗಳಾಗಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಇತರ ಊರುಗಳಂತೆಯೇ ಗುಡ್ಡ ಕಣಿವೆಗಳ ಕ್ಷೇತ್ರ 204 ಮಂಗಳೂರು. ಹಾಗಿದ್ದಾಗಿಯೂ ಆಸ್ಪತ್ರೆಗಳು, ವ್ಯಾಪಾರದ ಪೇಟೆಗಳು ಮತ್ತು ಮಂಗಳೂರಿನಲ್ಲಿ ಉದ್ಯೋಗ ಲಭ್ಯತೆಯ ಕಾರಣವಾಗಿ ಇಡೀ ಜನಸಮೂಹದ ಉದ್ಯೋಗದ ಸ್ವರೂಪ ಕಳೆದ 25 ವರ್ಷಗಳಲ್ಲಿ ವಿಶೇಷವಾಗಿ ಬದಲಾಗಿದೆ. ಬೀಡಿ ಕಟ್ಟುವ ಮಹಿಳೆಯರು ಆಸ್ಪತ್ರೆ, ಹೋಟೇಲುಗಳಲ್ಲಿ ಸ್ವಚ್ಛತಾ ಮತ್ತಿತರ ಸೇವೆಗೆ ಹೋಗುತ್ತಿದ್ದಾರೆ. ಹಂಚಿನ ಉದ್ಯಮ ಮಂಗಳೂರಿನಲ್ಲಿ ಹೆಚ್ಚು ಕಡಿಮೆ ನಿಂತೇ ಹೋದುದರಿಂದ ಈ ಪ್ರದೇಶದ ಗಂಡಸರು ಹೆಚ್ಚಾಗಿ ವ್ಯಾಪಕವಾಗಿ ನಡೆಯುತ್ತಿರುವಂಥ ಕಟ್ಟಡ ನಿರ್ಮಾಣಕ್ಕೆ ಹೋಗುತ್ತಿದ್ದಾರೆ. ಅಲ್ಲದೆ ಮರದ ಮಿಲ್ಲು, ಗ್ಯಾರೇಜು, ಸಾರಿಗೆ ಲಾರಿ, ಕಲ್ಲು ಕೋರೆಗಳಲ್ಲಿ ಕೆಲಸ ಮಾಡಲು ಹೋಗುತ್ತಿದ್ದಾರೆ. ತೀರಾ ಪಶ್ಚಿಮದ ಊರುಗಳ ಕೃಷಿಕರು ಕೃಷಿ ಕೆಲಸಕ್ಕೆ ಕಡಿಮೆ ಮಾಡಿ, ಮಂಗಳೂರು ನಗರದಲ್ಲಿ ಕೆಲಸಕ್ಕೆ ಹೋಗುತ್ತಿದ್ದಾರೆ. ಕ್ಷೇತ್ರ ಮೂಡಲಭಾಗದ ಊರುಗಳಲ್ಲಿ ಒಂದಿಷ್ಟು ಕೃಷಿ ಉಳಿದಿದೆಯಾದರೂ, ಬತ್ತದ ಸಾಗುವಳಿ ಕಡಿಮೆಯಾಗಿದೆ. ಒಂದೊಮ್ಮೆ ಕಮ್ಯೂನಿಸ್ಟರ ನೇತೃತ್ವದಲ್ಲಿ ರೈತರ ಚಳುವಳಿಗಳು ಎದ್ದು ಬಂದ ಇರಾ, ಬಾಳೆಪುಣಿ ಗ್ರಾಮಗಳು ಇಲ್ಲಿ ಇವೆಯಾದರೂ, ಅಲ್ಲಿ ಈಗ ಹೇಳಿಕೊಳ್ಳಬಹುದಾದ ರೈತ ಸಮೂಹವೇ ಇಲ್ಲ. ಅಲ್ಲದೆ 1974ರ ಭೂಸುಧಾರಣಾ ಕಾಯಿದೆಯಿಂದ ಭೂಮಿ ಲಭ್ಯವಾದ ಮೇಲೆ ಲಭಿಸಿದ ಭೂಮಿ ಕುಟುಂಬದಲ್ಲಿ ಒಂದೆಡೆ ವಿಂಗಡಣೆಯಾಗಿದ್ದರೆ, ಇನ್ನೊಂದೆಡೆ ಬತ್ತದ ಬೇಸಾಯ ಲಾಭದಾಯಕವಾಗುತ್ತಿಲ್ಲ. ಹಾಗಂತ ದಣಿಗಳ ಭೂಮಿಯನ್ನು ಕಾಯಿದೆಗೆ ಮುಂಚಿನಿಂದಲೂ ಸಾಗುವಳಿ ಮಾಡುತ್ತಾ ಬಂದಿದ್ದರೂ, ರೈತನ ವಶಕ್ಕೆ ಬಾರದೆ ಉಳಿದಿರುವ ಭೂಮಿಯೂ ಸಾಕಷ್ಟಿದೆ. ಅಲ್ಲದೆ ಸರಕಾರೀ ಜಾಗದಲ್ಲಿ ಮಾಡಿದ ಬಗರ್‌ಹುಕುಂ ಕೃಷಿಭೂಮಿಗೆ ಹಕ್ಕುಪತ್ರ ಮಂಜೂರಾಗದೆ ಇರುವವೂ ಇದೆ. ಸರಕಾರಿ ಜಾಗದಲ್ಲಿ ಮನೆಯಡಿ ಸ್ಥಳಕ್ಕೆ ಅರ್ಜಿ ಸಲ್ಲಿಸಿದ್ದು, ಇದೀಗ 94ಸಿ ನಿಯಮದಡಿ ಒಂದಿಷ್ಟು ಜನರಿಗೆ ತಿಂಗಳಿಂದೀಚೆಗೆ ನಿವೇಶನ ಮಂಜೂರಾಗುತ್ತಿದೆ. ಸ್ವಂತ ಮನೆಯಲ್ಲದೆ ಬಾಡಿಗೆ ಮನೆಯಲ್ಲಿದ್ದೋ, ಅವಿಭಕ್ತ ಕುಟುಂಬದ ಮನೆಯಲ್ಲಿದ್ದೋ ಸ್ವಂತ ಮನೆ ನಿವೇಶನಕ್ಕಾಗಿ ಸರಕಾರಕ್ಕೆ ಅರ್ಜಿ ಸಲ್ಲಿಸಿ ಕಾಯುವ ಸಾವಿರಾರು ಕುಟುಂಬಗಳು ಈ ಕ್ಷೇತ್ರದಲ್ಲಿವೆ.

ಸಮುದ್ರದಿಂದ ಉಳ್ಳಾಲ, ಸೋಮೇಶ್ವರ, ಉಚ್ಚಿಲ, ತಲಪಾಡಿವರೆಗಿನ ಊರುಗಳಲ್ಲಿ ಮೀನುಗಾರರು ವಾಸವಾಗಿದ್ದಾರೆ. ಮಂಗಳೂರಿಗೆ ಬಂದು, ಅಲ್ಲಿನ ಹಳೆಬಂದರಿನಲ್ಲಿ ತಮ್ಮ ಯಾಂತ್ರಿಕ ದೋಣಿಗಳನ್ನು ಲಂಗರು ಹಾಕಿ, ಅಲ್ಲಿಂದ ಸುಮದ್ರಕ್ಕೆ ಆ ದೋಣಿಗಳಲ್ಲಿ ತೆರಳಿ ಮೀನುಗಾರಿಕೆ ನಡೆಸುತ್ತಿದ್ದಾರೆ. ದೋಣಿಗಳು ತಂದ ಮೀನನ್ನು ಹಳೆ ಬಂದರು ದಕ್ಕೆಯಲ್ಲಿಯೇ ಮೀನು ಮಾರಾಟ ಮಾಡುವ ಮೀನುಗಾರರ ಮಹಿಳೆಯರೋ, ಬ್ಯಾರಿ ಗಂಡಸರೋ ಹರಾಜಿನಲ್ಲಿ ಪಡೆದು ಅದನ್ನು ವಿವಿಧ ಮಾರ್ಕೆಟುಗಳಿಗೆ ಒಯ್ದು ಮಾರಾಟ ಮಾಡುತ್ತಾರೆ. ಮಂಗಳೂರು ಮಾರ್ಕೆಟು ಅಲ್ಲದೆ ತೊಕ್ಕೋಟು ಮತ್ತಿತರ ಮಾರ್ಕೆಟುಗಳಲ್ಲಿ ಮಹಿಳೆಯರು ವ್ಯಾಪಾರ ಮಾಡುತ್ತಾರೆ. ಸೈಕಲ್ ಹಾಗೂ ಟೆಂಪೋ ಮೇಲೆ ಮೀನು ಒಯ್ಯುವ ಮುಸ್ಲಿಂ ಗಂಡಸರು ಹಲವು ಊರುಗಳಿಗೆ ಒಯ್ದು ಮಾರಾಟ ಮಾಡುತ್ತಾರೆ. ಮೀನುಗಾರಿಕೆ ನಡೆಸುವ ಗಂಡಸರಲ್ಲಿ ಮೊಗವೀರ ಸಮುದಾಯವಲ್ಲದೆ ಬ್ಯಾರಿ, ಕ್ರೈಸ್ತ ಸಮುದಾಯದವರೂ ಇದ್ದಾರೆ. ಮಂಗಳೂರು ಬಂದರಿನ ಮೀನುಗಾರಿಕೆ ಮಾಡುವ ಗಂಡಸರಲ್ಲದೆ, ತಮ್ಮ ತಮ್ಮ ಊರುಗಳ ಸಮುದ್ರದಲ್ಲಿ ನಾಡದೋಣಿಗಳಲ್ಲೋ, ಬೇರೆ ಬಲೆಗಾರಿಕೆಯಲ್ಲೋ ಮೀನು ಖಾಯಂ ಆಗಿ ಹಿಡಿದು ಮಾರಾಟ ಮಾಡುವವರಿದ್ದಾರೆ. ಈ ಕಡಲ ತೀರಗಳು ಕಳೆದ 7 ವರ್ಷಗಳಿಂದ ನಿರಂತರವಾಗಿ ಕೊರೆತಕ್ಕೀಡಾಗುತ್ತಿವೆ. ಉಳ್ಳಾಲ, ಕೋಟೆಪುರ, ಮುಕ್ಕಚ್ಚೇರಿ, ಉಚ್ಚಿಲ, ತಲಪಾಡಿಗಳಲ್ಲಿ ವರ್ಷ ವರ್ಷ ಒಂದಿಷ್ಟು ಮನೆಗಳು ಸಮುದ್ರ ಪಾಲಾಗುತ್ತಿವೆ. ಕಳೆದ 7 ವರ್ಷಗಳಿಂದಲೂ ಉಳ್ಳಾಲದಿಂದ ತಲಪಾಡಿಯವರೆಗೆ ಸ್ಥಳೀಯ ಶಾಸಕರು ಮುತುವರ್ಜಿ ವಹಿಸಿ ತಡೆಗೋಡೆ ಬಂಡೆ ಕಟ್ಟಿಸುತ್ತಿದ್ದಾರೆ. ಅವು ಮತ್ತಿನ ಮಳೆಗಾಲದಲ್ಲಿ ಸಮುದ್ರ ಸೇರುವುದನ್ನು ನೋಡುತ್ತಿದ್ದೇವೆ. ಮತ್ತೆ ಹೊಸದಾಗಿ ತಡೆಗೋಡೆ ಮಾಡಲಾಗುತ್ತಿದೆ. ಕೋಟಿಗಟ್ಟಲೆ ದುಡ್ಡನ್ನು ಪ್ರತೀವರ್ಷ ಸಮುದ್ರಕ್ಕೆ ಸುರಿಯಲಾಗುತ್ತಿದೆ. ಆದರೂ ಶಾಶ್ವತ ತಡೆಗೋಡೆಯ ಯೋಜನೆಗಳನ್ನು ಶಾಸಕರು ಮಾಡುತ್ತಿಲ್ಲ. ವಿಪತ್ತಿನ ವೇಳೆ ಮಾಡುವ ತಾತ್ಕಾಲಿಕ ತಡೆಗೋಡೆಗಳು ಗುತ್ತಿಗೆದಾರರಿಗೂ, ಶಾಸಕರಿಗೂ ಸೌಭಾಗ್ಯವಾಗಿದೆಯೆಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ.




ಮರಳುಗಾರಿಕೆ ನೇತ್ರಾವತಿ ನದಿಯುದ್ದಕ್ಕೂ ನಡೆಯುವ ಇತ್ತೀಚಿನ ಮುಖ್ಯ ಆರ್ಥಿಕ ಚಟುವಟಿಕೆ. ನದಿ ಮಧ್ಯದಿಂದ ಮರಳು ಗಣಿಗಾರಿಕೆಗೆ ನಿಗದಿಯಾದ ಚೌಕಟ್ಟು ಮೀರಿ ಮರಳು ಗಣಿಗಾರಿಕೆ ಮಾಡುವ ಮಾಫಿಯಾಗಳು 204 ಮಂಗಳೂರು ಕ್ಷೇತ್ರದಲ್ಲಿ ಕ್ರಿಯಾಶೀಲವಾಗಿದೆ. ಕೆಲವೊಂದು ಸಂದರ್ಭದಲ್ಲಿ ಮರುಳುಗಾರಿಕೆಗೆ ಜಿಲ್ಲಾಡಳಿತ ನಿಷೇಧ ಹಾಕಿದಾಗಲೂ ನೇತ್ರಾವತಿ ನದಿಯ ಉತ್ತರ ಹಾಗೂ ದಕ್ಷಿಣ ದಡಗಳಲ್ಲಿ ಮರಳು ಕಳ್ಳ ಸಾಗಾಟ ನಡೆಯುತ್ತಿದೆ. ರೆವಿನ್ಯೂ ಇಲಾಖೆಯವರೋ, ಪೋಲೀಸು ಇಲಾಖೆಯವರೋ ಅವರನ್ನು ಹಿಡಿಯ ಹೋದರೆ, ಅವರ ಮೇಲೆಯೇ ವಾಹನ ಹಾಯಿಸುವ ಕೇಡಿಗಳ ಗುಂಪು ಇದೆ.

ಮರಳು ಮಾಫಿಯಾದ ಜೊತೆಗಾರರಾಗಿ ಕೆಲವು ಗಂಡಸರು ಗೂಂಡಾಗಳಾಗಿರುವ ವಿದ್ಯಾಮಾನದೊಂದಿಗೆ, ಇಡೀ ಕ್ಷೇತ್ರದ ಯುವ ಜನತೆಯನ್ನೇ ಈಚೆಗೆ ವ್ಯಾಪಕವಾಗಿ ಆವರಿಸುತ್ತಿರುವ ಮಾದಕ ದ್ರವ್ಯ ವ್ಯಸನ. ಈ ಪ್ರದೇಶದಲ್ಲಿರುವ ಕಾಲೇಜುಗಳ ಸಮೀಪದಲ್ಲಿ ಗಾಂಜಾ ಮತ್ತು ಮಾದಕ ದ್ರವ್ಯ ಮಾರಾಟ ಆರಂಭವಾಗಿದ್ದು, ಸಣ್ಣ ಪೇಟೆಗಳ

ಪುಟ 10 ಕ್ಕೆ

ಕೆ.ಜಿ.ಎಫ್. ಕ್ಷೇತ್ರ – ಕೈಗಾರಿಕಾ ಕೇಂದ್ರದಿಂದ ವಲಸೆಯತ್ತ

ಕೆ.ಜಿ.ಎಫ್. ವಿಧಾನಸಭಾ ಕ್ಷೇತ್ರ ಹಿಂದೆ ಬಂಗಾರಪೇಟೆ ತಾಲೂಕಿನ ಭಾಗವಾಗಿದ್ದು ಕೆ.ಜಿ.ಎಫ್. ಪಟ್ಟಣ ಪ್ರಮುಖವಾಗಿದ್ದ ಕ್ಷೇತ್ರವಾಗಿತ್ತು. 2008ರಲ್ಲಿ ನಡೆದ ಕ್ಷೇತ್ರ ಪುನರ್ವಿಂಗಡಣೆಯಲ್ಲಿ ಕೆ.ಜಿ.ಎಫ್. ಪಟ್ಟಣದ ಸುತ್ತ ಇರುವ 192 ಹಳ್ಳಿಗಳು ಕ್ಷೇತ್ರದ ಭಾಗವಾಗಿವೆ. ಈಗ ಕೆ.ಜಿ.ಎಫ್. ಕ್ಷೇತ್ರದಡಿ ಬರುವಂತಹ ಪ್ರದೇಶವನ್ನು ಹೊಸ ಕೆ.ಜಿ.ಎಫ್ ತಾಲೂಕು ಆಗಿ ಸಹ ರಚಿಸಲಾಗಿದೆ.



ಕೆ.ಜಿ.ಎಫ್. ಕ್ಷೇತ್ರದಲ್ಲಿ ವಿಶ್ವಖ್ಯಾತಿಯ ಕೋಲಾರ ಚಿನ್ನದ ಗಣಿ ಇದ್ದು, 17 ವರುಷಕ್ಕೆ ಹಿಂದೆ ಬಿಜೆಪಿ ಸರ್ಕಾರದಿಂದ ಮುಚ್ಚಲ್ಪಟ್ಟಿತ್ತು. ಇದರಿಂದ ಸಾವಿರಾರು ಕುಟುಂಬಗಳು ಬೀದಿಪಾಲಾಗಿದ್ದು ಮಾತ್ರವಲ್ಲದೆ ಸ್ಥಳಿಯವಾಗಿ ಉದ್ಯೋಗ ಅವಕಾಶ ಇಲ್ಲದಾಯಿತು. ಇದರಿಂದ ಸುಮಾರು 12 ಸಾವಿರ ಕಾರ್ಮಿಕರು ಬೆಂಗಳೂರಿಗೆ ದೈನಂದಿನ ಪ್ರಯಾಣ ಮಾಡಿ ಜೀವನ ಮಾಡುತ್ತಿದ್ದಾರೆ.

ಇನ್ನೊಂದು ದೊಡ್ಡ ಕೈಗಾರಿಕೆ ಎಂದರೆ ಬಿಇಎಂಎಲ್. ಹತ್ತು ವರ್ಷಗಳ ಹಿಂದೆ ಸುಮಾರು 8,000 ಖಾಯಂ ಕಾರ್ಮಿಕರು ಇದ್ದ ಈ ಕಾರ್ಖಾನೆಯಲ್ಲಿ ಈಗ 3,000 ಖಾಯಂ ಕಾರ್ಮಿಕರು ಇದ್ದಾರೆ. ಸುಮಾರು 4,500 ಗುತ್ತಿಗೆ ಕಾರ್ಮಿಕರು ಇದ್ದಾರೆ. ಇದರ ಮಧ್ಯೆ ಕಳೆದ ವರ್ಷ ಕೇಂದ್ರ ಸರ್ಕಾರ ಬಿಇಎಂಎಲ್ ಕಾರ್ಖಾನೆಯನ್ನು 26% ಖಾಸಗಿಯವರಿಗೆ ಮಾರಾಟ ಮಾಡಲು ನಿರ್ಧಾರ ಮಾಡಿತ್ತು. ಈಗಾಗಲೇ 49% ಖಾಸಗಿಯವರ ವಶವಾಗಿದೆ. ಇದನ್ನು ವಿರೋಧಿಸಿ ಸಿಪಿಐ(ಎಂ) ಪಕ್ಷ ದೊಡ್ಡ ಹೋರಾಟ ಮಾಡಿತ್ತು. ನಮ್ಮ ಪಕ್ಷದ ಎಂ.ಪಿ. ಗಳಾದ ಎಂ.ಬಿ. ರಾಜೇಶ್ ಮತ್ತು ತಪಾನ್ ಸೇನ್ ಪಾರ್ಲಿಮೆಂಟ್‌ನಲ್ಲಿ ನಿರಂತರ ಹೋರಾಟ ಮಾಡುತ್ತಿದ್ದಾರೆ.

ಇನ್ನೊಂದು ಕಡೆ ಗ್ರಾಮಾಂತರ ಪ್ರದೇಶದಲ್ಲಿ ರೈತರು, ಕೃಷಿ ಕಾರ್ಮಿಕರು ರಾಜ್ಯದ ಬೇರೆ ಪ್ರದೇಶದಲ್ಲಿ ಎದುರಿಸುತಿರುವ ಸಮಸ್ಯೆಗಳನ್ನು ಕೆಜಿಎಫ್ ನಲ್ಲೂ ಎದುರಿಸುತ್ತಿದ್ದಾರೆ. ಕೆ.ಜಿ.ಎಫ್ ಕ್ಷೇತ್ರ ಅತಿ ಹೆಚ್ಚು 60% ಎಸ್.ಸಿ. ಜನಾಂಗ ಇರುವಂತಹ ಕ್ಷೇತ್ರ. ಮಾತ್ರವಲ್ಲದೆ ಅತಿ ಹೆಚ್ಚು ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರಿರುವ ಕ್ಷೇತ್ರ. ಕ್ರಿಶ್ಚಿಯನ್ ಮತ್ತು ಮುಸ್ಲಿಮರು ಸೇರಿ 30% ಇದ್ದಾರೆ. ಅದೇ ರೀತಿ ತಮಿಳು ಭಾಷಿಕರು ಗಣನೀಯ ಸಂಖ್ಯೆಯಲ್ಲಿದ್ದಾರೆ.

ಇಲ್ಲಿ ಸ್ಥಳಿಯವಾಗಿ ಉದ್ಯೋಗದ ಅವಕಾಶ ಇಲ್ಲದಿರುವುದು ಒಂದು ಸಮಸ್ಯೆಯಾದರೆ, ಬೇರೆ ಯಾವುದೇ ಸೌಲಭ್ಯಗಳು ಸರಿಯಾಗಿ ಇಲ್ಲ. ಆರೋಗ್ಯದ ವ್ಯವಸ್ಥೆ ಅತಿ ಮೋಸವಾಗಿದೆ. ಆಸ್ಪತ್ರೆ ಸೌಲಭ್ಯಗಳು ತುಂಬ ಹೀನಾಯ ಸ್ಥಿತಿಯಲ್ಲಿವೆ. ಸರಿಯಾದ ಸಿಬ್ಬಂದಿ, ವೈದ್ಯರು, ಆಧುನಿಕ ಸೌಲಭ್ಯಗಳು ಇಲ್ಲಿ ಇಲ್ಲ. ಕಳೆದ ತಿಂಗಳು ಹುಟ್ಟಿದ ಮಗುವು ಕಳ್ಳತನ ಆದ ಪ್ರಕರಣ ಇಲ್ಲಿ ನಡೆದಿದೆ. ಇನ್ನೊಂದು ಕಡೆ ಖಾಸಗಿ ಆಸ್ಪತ್ರೆಗಳು ಒಳ್ಳೆಯ ವ್ಯಾಪಾರ ಮಾಡುತ್ತಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ ಇನ್ನೊಂದು ದೊಡ್ಡ ಸಮಸ್ಯೆ. ಸರಿಯಾದ ಆರೋಗ್ಯಕರವಾದ ಕುಡಿಯುವ ನೀರು ಇಲ್ಲಿ ಸರಬರಾಜು ಆಗಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ನೀರು ಸಂಬಂದಪಟ್ಟ ಆರೋಗ್ಯ ಸಮಸ್ಯೆಗಳು ಕಾಣುತ್ತಿದೆ. ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಲಂಚವಿಲ್ಲದೆ ಕೆಲಸ ನಡೆಯಲ್ಲ. ಹಲವಾರು ರಸ್ತೆಗಳು ದುರಸ್ತಿಯಲ್ಲಿದೆ. ರೈತರಿಗೆ ಸೇರಬೇಕಾದ ಸರ್ಕಾರದ ಅನುದಾನಗಳಲ್ಲಿ ಹೆಚ್ಚಿನ ಭ್ರಷ್ಟಚಾರ ನಡೆಯುತ್ತಿದೆ. ನಗರದ ಸ್ವಚ್ಛತೆ ಕೂಡ ಒಂದು ಗಂಭೀರವಾದ ಸಮಸ್ಯೆ, ಇದರಿಂದ ಕಳೆದ ದಿನಗಳಲ್ಲಿ ಚಿಕನ್‌ಗುನ್ಯಾ, ಡೆಂಗ್ಯೂದಂತ ಕಾಯಿಲೆಗಳಿಂದ ಕೆಲವರು ಸತ್ತಿದ್ದಾರೆ.

ಕೆ.ಜಿ.ಎಫ್.ನಿಂದ ಸಾವಿರಾರು ಯುವಕರು, ಕಾರ್ಮಿಕರು ದಿನಾ ಬೆಂಗಳೂರಿಗೆ ಕೆಲಸಕ್ಕೆ ಪ್ರಯಾಣ ಮಾಡುತ್ತಿದ್ದಾರೆ. ಇಲ್ಲಿನ ಮುಖ್ಯವಾದ ಒಂದು ಬೇಡಿಕೆ, ರೈಲು ಸೇವೆಯ ಮತ್ತು ಸೌಲಭ್ಯಗಳ ಹೆಚ್ಚಳ ಮಾಡಬೇಕೆಂಬುದು. 1) ಹೆಚ್ಚಿನ ರೈಲು ಸೇವೆ, 2) ಕೆ.ಜಿ.ಎಫ್. ನಿಂದ ಬಂಗಾರಪೇಟ್ ವರೆಗೂ ಎರಡು ರೈಲಿನ ಹಳಿ (ಡಬಲ್ ಟ್ರಾಕ್), ಮಾರಿಕುಪ್ಪಂ ಕುಪ್ಪಂ ರೈಲು ಲೈನ್ ಲಿಂಕ್ ಮಾಡಬೇಕು. ಇತ್ಯಾದಿ.



ಶಾಸಕಿಯ ಕೆಲಸ :

ಕೆ.ಜಿ.ಎಫ್. ಕ್ಷೇತ್ರದ ಈಗಿನ ಹಾಲಿ ಶಾಸಕರಾದ ಶ್ರೀಮತಿ ವೈ. ರಾಮಕ್ಕ ಇವರು ಇದಕ್ಕೆ ಹಿಂದೆ ಶಾಸಕ ವೈ. ಸಂಪಂಗಿಯವರ ತಾಯಿ ರಾಮಕ್ಕ ಶಾಸಕರಾಗಿದ್ದರು. ವಿಧಾನಸೌಧದಲ್ಲಿಯೇ 5 ಲಕ್ಷ ರೂಪಾಯಿ ಲಂಚ ಪಡೆದ ಆರೋಪದಲ್ಲಿ ಶಿಕ್ಷೆಗೆ ಒಳಗಾಗಿ ತಾಯಿಗೆ ಟಿಕೆಟ್ ಪಡೆದು ಗೆದ್ದಿದ್ದು.

ಕಳೆದ ಎರಡು ಬಾರಿ ಬಿಜೆಪಿ ಈ ಕ್ಷೇತ್ರದಲ್ಲಿ ಗೆದ್ದಿದೆ. ಮೊದಲು ವೈ. ಸಂಪಂಗಿ ನಂತರ ಅವರ ತಾಯಿ ರಾಮಕ್ಕ. ಇವರು ಗೆದ್ದಿದ್ದಕ್ಕೆ ಕಾರಣ ಇವರು ಇಲ್ಲಿ ಬಲವಾಗಿದ್ದಾರೆ ಮತ್ತು ಇವರ ಪಕ್ಷ ಬಲವಾಗಿದೆ ಎಂಬುದಲ್ಲ. ಈ ಕ್ಷೇತ್ರದಲ್ಲಿ ಹಿಂದೆ 5 ಬಾರಿ ಶಾಸಕರಾಗಿದ್ದ ಎಂ. ಭಕ್ತವತ್ಸಲಂ ಮತ್ತು ಎಸ್. ರಾಜೇಂದ್ರನ್ ಇವರಿಬ್ಬರು ಈ ಕ್ಷೇತ್ರಕ್ಕೆ ಏನು ಅಭಿವೃದ್ಧಿ ಕೆಲಸಗಳು ಮಾಡಿಲ್ಲ ಎಂಬ ಕೋಪದಿಂದ ಜನರು ಇವರನ್ನು ಗೆಲ್ಲಿಸಿದ್ದಾರೆ. ಕ್ಷೇತ್ರದ್ರ ಪುನರ್ವಿಂಗಡಣೆ ಭಾಷಿಕ ಸಂಯೋಜನೆಯನ್ನು ಗ ್ವ ್ ಂ ನಾ ಹ ್ ೯ ವಾ ಗಿ ಬದಲಾಯಿಸಿದ್ದೂ ರಾಜಕೀಯ ಬದಲಾವಣೆಗೆ ಒಂದು ಕಾರಣವಾಗಿದೆ

ಈಗ ಇರುವ ವೈ. ರಾಮಕ್ಕ ಕ್ಷೇತ್ರದ ಕಡೆ ಬರುವುದೆ ಇಲ್ಲ. ಏನಿದ್ದರೂ ಸಂಪಂಗಿಯವರೇ ಓಡಾಡುವುದು. ಕ್ಷೇತ್ರದ ಜನರ ಸಮಸ್ಯೆಗಳಿಗೆ ಇವರು ಸ್ಪಂದಿಸುವುದೇ ಇಲ್ಲ. ಇವರು ಚುನಾವಣೆ ಸಂದರ್ಭದಲ್ಲಿ ಮಾತ್ರ ಭಾಷೆ ಮತ್ತು ಜಾತಿ ರಾಜಕೀಯ ಮಾಡಿ ಗೆಲ್ಲುವುದಕ್ಕೆ ಪ್ರಯತ್ನ ಮಾಡುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವೇ ಕೆಲಸಗಳು ಮುಖ್ಯವಾಗಿ ರಸ್ತೆಗಳು ಆಗಿರುವುದೆ ಇವರ ದೊಡ್ಡ ಸಾಧನೆ.

ರಾಮಕ್ಕ ಮತ್ತು ಸಂಪಂಗಿ ಹೆಚ್ಚಿನ ಆಸ್ತಿ ಹಣವನ್ನು ಈ ಅವಧಿಯಲ್ಲಿ ಸಂಪಾದನೆ ಮಾಡಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಕೋಳಿ ಫಾರಂ, ಮನೆಗಳು, ಜಮೀನು, ರೆಸಾರ್ಟ್‌ಗಳು ಮಾಡಿರುವುದು ಅವರ ಸ್ವಂತ ಊರಾದ ಆನೆಕಲ್‌ನಲ್ಲಿ ಆಸ್ತಿ ಮಾಡಿದ್ದಾರೆ. ■

ಜಿಲ್ಲೆಯಲ್ಲಿ ಮುಂದುವರೆದ ತಾಲೂಕು,_ಆದರೂ.. ..

ಕೋಲಾರ ಕರ್ನಾಟಕದಲ್ಲಿ ಹಿಂದುಳಿದ ಜಿಲ್ಲೆಗಳಲ್ಲಿ ಒಂದು. ಜಿಲ್ಲಾ ಮಾನವ ಅಭಿವೃದ್ಧಿ ವರದಿ 2014ರ ಪ್ರಕಾರ ಕೆ.ಜಿ.ಎಫ್. ಹಿಂದೆ ಭಾಗವಾಗಿ ಇದ್ದ ಬಂಗಾರಪೇಟೆ ಕೋಲಾರ ಜಿಲ್ಲೆಯಲ್ಲಿ ಮುಂದುವರೆದ ತಾಲೂಕು. ಕೆ.ಜಿ.ಎಫ್. ಹೊಸ ತಾಲೂಕು ಆದ್ದರಿಂದ ಅದರ ಪ್ರತ್ಯೇಕ ಬೆಳವಣಿಗೆ ಸೂಚ್ಯಂಕಗಳು ಲಭ್ಯವಿಲ್ಲ. ಬಂಗಾರಪೇಟೆ ಜನತೆಯ ಆರ್ಥಿಕ ಮಟ್ಟ ಸೂಚಿಸುವ ಜೀವನ ಮಟ್ಟ, ಆರೋಗ್ಯ, ಆಹಾರ ಭದ್ರತೆ ಸೂಚ್ಯಂಕಗಳಲ್ಲಿ 2ನೇ ಸ್ಥಾನದಲ್ಲಿದೆ. ಶಿಕ್ಷಣ ಮತ್ತು ನಗರಾಭಿವೃದ್ಧಿ ಸೂಚ್ಯಂಕಗಳಲ್ಲಿ ಮೊದಲನೆಯ ಸ್ಥಾನದಲ್ಲಿದೆ. ಒಟ್ಟಾರೆ ಮಾನವ ಅಭಿವೃದ್ಧಿ ಸೂಚಕದಲ್ಲಿ ಸಹ ತಾಲೂಕು 2ನೇ ಸ್ಥಾನದಲ್ಲಿದೆ. ಆದರೆ ತಾಲೂಕು ಸಂಯುಕ್ತ ಅಭಿವೃದ್ಧಿ ಸೂಚಕದಲ್ಲಿ 4ನೇ ಸ್ಥಾನದಲ್ಲಿದೆ. ಲಿಂಗ ಸಮಾನತೆ ಸೂಚಕದಲ್ಲಿ ಕೊನೆಯ(5ನೇ) ಸ್ಥಾನದಲ್ಲಿದೆ. ಅನಿಮೀಯಾದಿಂದ ಶೇ. 85.24 ರಷ್ಟು ಮಹಿಳೆಯರು ನರಳುತ್ತಿದ್ದು, ಅದು ಜಿಲ್ಲೆಯ ಸರಾಸರಿ ಮಟ್ಟಕ್ಕಿಂತ ಹಿಂದಿದೆ. ಜಿಲ್ಲೆಯ ತಾಯಂದಿರ ಮರಣದ ಪ್ರಮಾಣ (ಸಾವಿರದಲ್ಲಿ 153) ಜಿಲ್ಲಾ ಸರಾಸರಿ 140 ಕ್ಕಿಂತಲೂ ಹೆಚ್ಚು ಇದೆ. ಜಿಲ್ಲೆಯಲ್ಲೇ ಅತ್ಯಂತ ಕಡಿಮೆ ದುಡಿಮೆಯಲ್ಲಿ ಸಹಭಾಗಿತ್ವ ಪರಿಣಾಮ ಪುರುಷರಲ್ಲೂ (ಶೇ. 63.4) ಮಹಿಳೆಯರಲ್ಲೂ (ಶೇ. 29) ಮತ್ತು ಅದರಲ್ಲಿ ಲಿಂಗ ಸಮಾನತೆ ಬಹಳ ಕಡಿಮೆ ಇರುವ ತಾಲೂಕು ಬಂಗಾರಪೇಟೆ.

ಈಗ ಮಂಗಳೂರು ಎನಿಸಿದ ಹಳೆಯ ಉಳ್ಳಾಲ ಅಸೆಂಬ್ಲಿ ಕ್ಷೇತ್ರ........ ಪುಟ 9 ರಿಂದ

ಗೂಡಂಗಡಿಗಳಿಗೂ ವ್ಯಾಪಿಸಿದೆ. ದಾರಿತಪ್ಪಿದ ಯುವಜನ ಇದರಿಂದ ಅಪರಾಧ ಪ್ರಕರಣಗಳಲ್ಲಿ ಭಾಗಿಗಳಾಗಿದ್ದಾರೆ. ಗಾಂಜಾ ಮಾರಾಟ ಜಾಲವನ್ನು ಬಯಲಿಗೆಳೆದ ಸಮಾಜ ಸೇವಕರೊಬ್ಬರ ಕೊಲೆ ಕೆಲವು ತಿಂಗಳ ಹಿಂದೆ ಉಳ್ಳಾಲದಲ್ಲಿ ನಡೆದಿದೆ. ಸಮುದ್ರ ತೀರದ ವಿಹಾರ ತಾಣಗಳಲ್ಲಿ ಅಮಲಿನಲ್ಲಿರುವ ಯುವಕರನ್ನು ನಾವು ಆಗಾಗ ಕಾಣಬಹುದಾಗಿದೆ.

ಬೇರೆ ಪ್ರದೇಶಗಳಿಗಿಂತ 204 ಮಂಗಳೂರು (ಉಳ್ಳಾಲ) ಪ್ರದೇಶದಲ್ಲಿ ಮುಸ್ಲಿಂ ಜನಸಂಖ್ಯೆ ಜಾಸ್ತಿ. ಸಾಮಾನ್ಯ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಮುಸ್ಲಿಂ ಸಮುದಾಯವನ್ನೇ ಅಭ್ಯರ್ಥಿಗಳಾಗಿ ನಿಲ್ಲಿಸುತ್ತಾರೆ. ಈ ಕ್ಷೇತ್ರದ ಚುನಾವಣಾ ಇತಿಹಾಸದಲ್ಲಿ 2 ಬಾರಿ ಕಮ್ಯೂನಿಸ್ಟ್, 1 ಬಾರಿ ಬಿಜೆಪಿ ಗೆದ್ದದ್ದು ಬಿಟ್ಟರೆ, ಕಾಂಗ್ರೆಸ್ ಪಕ್ಷವೇ ಕ್ಷೇತ್ರವನ್ನು ಪ್ರತಿನಿಧಿಸುತ್ತಿದೆ. ಈಗ 7 ವರ್ಷಗಳಿಂದ ಇಲ್ಲಿನ ಶಾಸಕರಾಗಿರುವ ಯು.ಟಿ.ಖಾದರ್ ಸದ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯ ಸಚಿವರೂ ಆಗಿದ್ದಾರೆ. ಸಚಿವರಾಗಿರುವುದರಿಂದ ಕ್ಷೇತ್ರಕ್ಕೆ ಕ್ಷಿಪ್ರ ಸೌಲಭ್ಯವನ್ನು ತರಿಸುವ ಸಾಧ್ಯತೆ ಅವರಿಗಿದೆ. ಅವರು ಜನಪ್ರಿಯರಾಗಿದ್ದರೂ ರಾಜ್ಯ ಕಾಂಗ್ರೆಸ್ ಸರಕಾರದ ಬಗೆಗೆ ಜನರಲ್ಲಿ ತೀವ್ರ ಅತೃಪ್ತಿ ಇದೆ. ಕೋಟ್ಪಾ ಕಾಯಿದೆ ಅನುಷ್ಠಾನದಿಂದಾಗಿ ಬೀಡಿ ಉದ್ದಿಮೆ ನಶಿಸುತ್ತಿದೆ. ಬೀಡಿ ಕಾರ್ಮಿಕರಿಗೆ ಸರಕಾರ ಪರ್ಯಾಯ ಉದ್ಯೋಗ ಕಲ್ಪಿಸಿಲ್ಲ. ಈ ಕ್ಷೇತ್ರದಲ್ಲಿ ಜನ ಹೆಚ್ಚಿಗೆ ವಿದ್ಯಾವಂತರಾಗುತ್ತಿದ್ದು, ಅರೆ ಉದ್ಯೋಗದಲ್ಲೋ ಉದ್ಯೋಗ ಇಲ್ಲದೆಯೋ ಇದ್ದಾರೆ. ಭೂಮಿಯ ಹಕ್ಕುಪತ್ರ, ಮನೆನಿವೇಶನ ರಹಿತರಿಗೆ ನಿವೇಶನ ಸರಕಾರ ಕಲ್ಪಿಸಿಲ್ಲ ಎಂಬುದನ್ನು ಇಲ್ಲಿ ಮೊದಲೇ ಹೇಳಿದೆ. ಮುನ್ನೂರು ಗ್ರಾಮ ಪಂಚಾಯತು ಬಿಟ್ಟರೆ ಬೇರೆ ಯಾವ ಪಂಚಾಯತಿನಲ್ಲೂ ಈ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿಲ್ಲ. ನೇತ್ರಾವತಿ ನದಿ ಸಮೀಪವಿದ್ದರೂ ಈ ಪ್ರದೇಶದಲ್ಲಿ ಬೇಸಗೆಯಲ್ಲಿ ಪ್ರತೀ ವರ್ಷವೂ ಕುಡಿಯುವ ನೀರಿನ ಕೊರತೆ ಇದೆ. ಪ್ರಭಾವೀ ಶಾಸಕರಿದ್ದರೂ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಂಥ ಕಾರ್ಯಕ್ರಮಗಳು ಕ್ಷೇತ್ರದಲ್ಲಿ ಕಾರ್ಯಗತಗೊಂಡಿಲ್ಲ.

ಕೋಮುವಾದಿ ಘರ್ಷಣೆಗಳಿಗೆ ಉಳ್ಳಾಲ ಪ್ರದೇಶ ಕುಖ್ಯಾತವಾಗಿತ್ತು. ಉಳ್ಳಾಲದಲ್ಲಿಯೇ ಸಣ್ಣ ಪುಟ್ಟ ಕಾರಣಗಳಿಗೆ ಹಿಂದೂ ಮುಸ್ಲಿಮರ ನಡುವೆ ಆಗೀಗ ಘರ್ಷಣೆಗಳಾಗುತ್ತವೆ. ಕಾಲೇಜುಗಳಿರುವ ದೇರಳಕಟ್ಟೆ ಕೋಣಾಜೆ ಪರಿಸರದಲ್ಲೂ ಹಿಂದೂ ಮುಸ್ಲಿಂ ವಿದ್ಯಾರ್ಥಿ ವಿದ್ಯಾರ್ಥಿನಿಯರು ಒಟ್ಟಿಗೆ ವಿಹಾರ ಹೋದರೆ ಹಿಂದೂತ್ವ ಪಡೆಗಳಿಂದ ದಾಳಿಗಳು ನಡೆದಿವೆ. ಮುಸ್ಲಿಂ ಯುವಕರ ಕ್ರಿಮಿನಲ್ ಗ್ಯಾಂಗೊಂದು ಕಾಲೇಜಿನ ಹೆಣ್ಣು ಮಕ್ಕಳನ್ನು ಅಪಹರಿಸಿ ಅತ್ಯಾಚಾರ ಮಾಡಿ ವೀಡಿಯೋ ಮಾಡಿ ಬ್ಲ್ಯಾಕ್‌ಮೈಲ್ ಮಾಡುತ್ತಿದ್ದ ಘಟನೆಗಳು ನಡೆದಿದೆ. ಈಗ ತಹಬಂದಿಗೆ ಬಂದಿದೆ. ಇವುಗಳಿಂದ ಕೂಡಾ ಹಿಂದೂ ಮುಸ್ಲಿಮರ ಮಧ್ಯೆ ಅನುಮಾನ, ದ್ವೇಷಗಳು ಮುಂದುವರಿದಿವೆ. ಇವುಗಳ ಹಿಂದೆ ಹಿಂದೂತ್ವ ಪಡೆಗಳು ಒಂದೆಡೆಗಿದ್ದರೆ, ಇನ್ನೊಂದೆಡೆ ಪಿಎಫ್ಐ ಪರಿವಾರದ ಬಣಗಳು ಮುಸ್ಲಿಂ ತರುಣರನ್ನು ತಮ್ಮೆಡೆ ಆಕರ್ಷಿಸುತ್ತಿವೆ.

204 ಮಂಗಳೂರು ಅಸೆಂಬ್ಲಿ ಕ್ಷೇತ್ರದ ಒಟ್ಟು 1,90,361 ಮತದಾರರಲ್ಲಿ 96,653 ಮಹಿಳೆಯರು, 93,708 ಪುರುಷರು. ದ.ಕ.ಜಿಲ್ಲೆಯ ಇತರ ಕ್ಷೇತ್ರದ ಮತದಾರರ ಸಂಖ್ಯೆಗಿಂತ ಈ ಕ್ಷೇತ್ರದ ಸಂಖ್ಯೆ ಕಡಿಮೆ. ಮುಸ್ಲಿಂ ಮತದಾರರು ಹೆಚ್ಚಿರುವ ಈ ಕ್ಷೇತ್ರದಲ್ಲಿ ಕಳೆದ ಸಾರಿ ಕಾಂಗ್ರೆಸ್ ಅಭ್ಯರ್ಥಿ ಬಿಜೆಪಿ ಅಭ್ಯರ್ಥಿಯನ್ನು 29,000 ಮತಗಳಿಂದ ಸೋಲಿಸಿದ್ದರು. ಜಿಲ್ಲೆಯಲ್ಲಿ 1952 ರಿಂದಲೂ ಕಮ್ಯೂನಿಸ್ಟರು ಸ್ಪರ್ಧಿಸುತ್ತಿರುವ ಏಕೈಕ ಕ್ಷೇತ್ರ ಉಳ್ಳಾಲವಾಗಿದೆ. ■

ಸಂಘಪರಿವಾರದ ಪ್ರತಿಮೆ–ಧ್ವಂಸಕ ರಾಜಕಾರಣವನ್ನು ಗುಹಾ ಸಮರ್ಥಿಸುತ್ತಿದ್ದಾರಾ?.......... ಪುಟ 8 ರಿಂದ

ತಪ್ಪು ಮತ್ತು ಇಡೀ ಭಾರತದ ವಿಮೋಚನೆಗೆ ಸ್ವಾತಂತ್ರ್ಯಕ್ಕೆ ಬಲಿದಾನ ನೀಡಿದ ಕ್ರಾಂತಿಕಾರಿ ಚೇತನಕ್ಕೆ ಘೋರ ಅಪಮಾನ.

1920ರಲ್ಲಿ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾದ ಕೂಡಲೇ ನಿಷೇಧಕ್ಕೆ ಒಳಗಾಗಿತ್ತು. ಸಕ್ರಿಯ ಕಮ್ಯುನಿಸ್ಟ್ ಕಾರ್ಯಕರ್ತರನ್ನು 'ಕಾನ್ಪುರ ಪಿತೂರಿ', 'ಪೇಶಾವರ್ ಪಿತೂರಿ' ಮುಂತಾದ ಕೇಸುಗಳನ್ನು ಹಾಕಿ ಬಂಧಿಸಲಾಗಿತ್ತು. ದೇಶದಾದ್ಯಂತ ಸಕ್ರಿಯವಾಗಿದ್ದ ಕಮ್ಯುನಿಸ್ಟ್ ಮತ್ತು ಕ್ರಾಂತಿಕಾರಿ ಗುಂಪುಗಳನ್ನೂ ಸಂಪರ್ಕಿಸುವುದೂ ಸಾಧ್ಯವಿರಲಿಲ್ಲ. ಇಂತಹ ಸಂಪರ್ಕ ಸಾಧ್ಯವಾದಾಗ ಎಚ್.ಎಸ್.ಆರ್.ಎ.ಯ ಹೆಚ್ಚಿನ ಸದಸ್ಯರು ಕಮ್ಯುನಿಸ್ಟ್ ಪಕ್ಷದ ಸದಸ್ಯರಾದರು. ಭಗತ್ ಸಿಂಗ್ ಕಮ್ಯುನಿಸ್ಟ್ ಪಕ್ಷದ ಸ್ಥಾಪಕ ಅಥವಾ ಸದಸ್ಯನಾಗಿರದಿದ್ದರೂ, ಎಚ್.ಎಸ್.ಆರ್.ಎ. 1930ರ ದಶಕದಲ್ಲಿ ಕಮ್ಯುನಿಸ್ಟ್ ಕ್ರಾಂತಿಕಾರಿ ಧಾರೆಯನ್ನು ಸೇರಿತು ಎಂಬುದೆಲ್ಲವನ್ನು ಗುಹಾ ಮುಚ್ಚಿಡುತ್ತಾರೆ.

ಎಚ್.ಎಸ್.ಆರ್.ಎ. ಮಾತ್ರವಲ್ಲ, ಗದರ್ ಪಾರ್ಟಿ, ಅನುಶೀಲನ್ ಜುಗಾಂತರ್ ಮುಂತಾದ ಬಂಗಾಳಿ ಕ್ರಾಂತಿಕಾರಿ ಗುಂಪುಗಳು, ದೇಶದ ಹಲವು ನಗರಗಳಲ್ಲಿ ಸಕ್ರಿಯವಾಗಿದ್ದ ದೇಶಪ್ರೇಮಿ ಕ್ರಾಂತಿಕಾರಿ ಗುಂಪುಗಳ ಹಾಗು ರೈತ–ಕಾರ್ಮಿಕ ಚಳುವಳಿಗಳ ಹಲವು ಧಾರೆಗಳು ಸೇರಿದ ದೇಶಪ್ರೇಮಿ ಕ್ರಾಂತಿಕಾರಿ ಪಕ್ಷವಾಗಿ ಕಮ್ಯುನಿಸ್ಟ್ ಪಕ್ಷ 1940ರ ದಶಕದ ಆದಿಯಲ್ಲಿ ಹೊಮ್ಮಿತ್ತು ಎಂಬುದನ್ನೂ ಗುಹಾ ಮುಚ್ಚಿಡಲು ಪ್ರಯತ್ನಿಸುತ್ತಾರೆ.

ಇಂತಹ "ಚಾರಿತ್ರಿಕ" ತಪ್ಪುಗಳನ್ನು ನಾನು ಖ್ಯಾತ ಇತಿಹಾಸಕಾರ ಗುಹಾರಿಂದ ನಿರೀಕ್ಷಿಸಿರಲಿಲ್ಲ. ಕಾಕತಾಳೀಯವೋ ಅಲ್ಲವೋ, ಸಂಘ ಪರಿವಾರ ಕಮ್ಯುನಿಸ್ಟರ ಮೇಲೆ ದಾಳಿ ಮಾಡುವಾಗ ಬಳಸುವ ತಂತ್ರಗಳೂ ಇವೇನೇ – ವಿದೇಶೀ ಸರ್ವಾಧಿಕಾರಿ ಸಿದ್ಧಾಂತ, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರ ಪಾತ್ರ ಮುಚ್ಚಿಡುವುದು, ಭಗತ್ ಸಿಂಗ್‌ನ್ನು ಕಮ್ಯುನಿಸ್ಟ್ ಪರಂಪರೆಯಿಂದ ಪ್ರತ್ಯೇಕಿಸಲು ಪ್ರಯತ್ನಿಸುವುದು. ಗುಹಾ ಅವರು ಸಂಘ ಪರಿವಾರದ ಈ ದಾಳಗಳಿಗೆ ಈಗ ಯಾಕೆ ಮೊರೆ ಹೋಗಿದ್ದಾರೆ?

ಭಗತ್ ಸಿಂಗ್ ಎಲ್ಲಾ ಕಮ್ಯುನಿಸ್ಟರ ದೇಶಪ್ರೇಮಿಗಳ ಹೀರೊ. ಚಾರಿತ್ರಿಕವಾಗಿ ಹಲವು ಧಾರೆಗಳು ಸೇರಿ ಆದ ಭಾರತದ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆ ಅಥವಾ ಬೆಳವಣಿಗೆಯಲ್ಲಿ (ಚೀನಾದಲ್ಲಿ ಮಾವೋ, ವಿಯೆಟ್ನಾಮಿನಲ್ಲಿ ಹೊ ಚಿ ಮಿನ್ ಇದ್ದಂತೆ) ಭಗತ್ ಸಿಂಗ್ ಅಥವಾ ಯಾವುದೇ ಒಬ್ಬ ವ್ಯಕ್ತಿ ಪಕ್ಷದ ಸಿಂಹಪಾಲು ವಹಿಸಿಲ್ಲ. ಈ ಹಿನ್ನೆಲೆಯಲ್ಲಿಯೇ ಕಮ್ಯುನಿಸ್ಟ್ ಪಕ್ಷದ ಸಮಾವೇಶದಲ್ಲಿ ಪಕ್ಷದ ಸದಸ್ಯನೂ ಆಗಿರದ ಭಗತ್ ಸಿಂಗ್ ಅಥವಾ ಇನ್ಯಾವ ನಾಯಕರ ಭಾವಚಿತ್ರವನ್ನು ಹಾಕುವ ಸಂಪ್ರದಾಯ ಇಲ್ಲ. ಇದು ಇತಿಹಾಸಕಾರ ಗುಹಾ ಗೆ ತಿಳಿಯದ್ದೇನಲ್ಲ. ಕಮ್ಯುನಿಸ್ಟರನ್ನು ಹೀಗಳೆಯಲು ಮತ್ತು ಪ್ರತಿಮೆ–ಧ್ವಂಸ ರಾಜಕಾರಣ ಸಮರ್ಥಿಸಿಕೊಳ್ಳುವ ವಿತಂಡವಾದಕ್ಕೆ ಇದನ್ನು ಬಳಸಿಕೊಳ್ಳುತ್ತಾರೆ ಅಷ್ಟೇ.

"ಬಿಜೆಪಿಯ ಅನ್ಯದ್ವೇಷವನ್ನು ನಾನು ಒಪ್ಪುವುದಿಲ್ಲ." ಎಂದು ಗುಹಾ ಹೇಳುತ್ತಾರೆ. ಆದರೆ ಅವರ ಲೇಖನದ ತುಂಬಾ ಅನ್ಯದ್ವೇಷವೇ ತುಂಬಿದೆ. ಗುಹಾ ದ್ವೇಷಿಸುವ 'ಅನ್ಯ'ರ ಪಟ್ಟಿಯಲ್ಲಿ ಸಂಘ ಪರಿವಾರದ ಪಟ್ಟಿಯ ಗೋಮಾಂಸ ತಿನ್ನುವ "ಮುಸ್ಲಿಮರು, ಕ್ರಿಶ್ಚಿಯನ್ನರು, ದಲಿತರು" ಇಲ್ಲದಿರಬಹುದು. ಅವರ ಪಟ್ಟಿಯಲ್ಲಿರುವ "ಕಮ್ಯುನಿಸ್ಟರು" ಮಾತ್ರ ಖಂಡಿತ ಇದ್ದಾರೆ.

ಲೆನಿನ್ ಜರೆದ ಮೊದಲ "ಪ್ರಜಾಪ್ರಭುತ್ವವಾದಿ"

ಲೆನಿನ್ ಅವರ ಬರಹಗಳು, ಸಿದ್ಧಾಂತ ಮತ್ತು ಅವರ ನಾಯಕತ್ವದ ರಶ್ಯನ್ ಕ್ರಾಂತಿ ಭಗತ್ ಸಿಂಗ್ ಅವರನ್ನು ಆಳವಾಗಿ ಪ್ರಭಾವಿಸಿದ್ದವು. ಭಗತ್ ಸಿಂಗ್ ಮಾತ್ರವಲ್ಲ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದ (ಕಾಂಗ್ರೆಸ್ ಸೇರಿದಂತೆ) ಭಾರತದ ಎಲ್ಲಾ ಧಾರೆಗಳಲ್ಲಿ ಸ್ಫೂರ್ತಿ ತುಂಬಿತ್ತು. ಭಾರತ ಮಾತ್ರವಲ್ಲ ಎಲ್ಲಾ ವಸಾಹತುಶಾಹಿ ನೊಗದಲ್ಲಿ ನರಳುತ್ತಿದ್ದ ದೇಶಗಳ ವಿಮೋಚನಾ ಹೋರಾಟಗಳಿಗೂ ಸ್ಫೂರ್ತಿ ತುಂಬಿತ್ತು. ಆಳವಾಗಿ ಪ್ರಭಾವಿಸಿತ್ತು. ವಸಾಹತು ದೇಶಗಳ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವಕ್ಕೆ ಹೋರಾಡುತ್ತಿದ್ದ ಎಲ್ಲಾ ರಾಷ್ಟ್ರೀಯವಾದಿ ಪ್ರಜಾಪ್ರಭುತ್ವವಾದಿಗಳಿಗೆ ಲೆನಿನ್ ಹೀರೋ ಆಗಿದ್ದರು.

ಲೆನಿನ್ ಹಲವು ವಿಷಯಗಳಿಗಾಗಿ ಚರಿತ್ರಾರ್ಹ ವ್ಯಕ್ತಿಯಾಗಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆ ಕಿತ್ತೊಗೆದು ಸಮಾಜವಾದಿ ವ್ಯವಸ್ಥೆ ಸ್ಥಾಪಿಸುವ ಸಮಾಜವಾದಿ ಕ್ರಾಂತಿ ಸಾಧ್ಯವೆಂದು ಸೈದ್ಧಾಂತಿಕವಾಗಿ ಮತ್ತು ಪ್ರಾಯೋಗಿಕವಾಗಿ ತೋರಿಸಿದ್ದು, ಇದನ್ನು ಸಾಧಿಸಬೇಕಾದ ಕಮ್ಯುನಿಸ್ಟ್ ಪಕ್ಷದ ಸಂಘಟನಾ ತತ್ವಗಳನ್ನು ನಿರ್ವಚಿಸಿದ್ದು. ಬಂಡವಾಳಶಾಹಿಯ ಸಾಮ್ರಾಜ್ಯಶಾಹಿ ಘಟ್ಟದ ವಿಶ್ಲೇಷಣೆ ನಡೆಸಿ ಅಂತರ–ಸಾಮ್ರಾಜ್ಯಶಾಹಿ ವೈರುಧ್ಯಗಳು ತೀವ್ರವಾಗಿದ್ದ ಮೊದಲನೆಯ ಮಹಾಯುದ್ಧ ಮತ್ತು ನಂತರದ ಅವಧಿ, ಅಭಿವೃದ್ಧ ಬಂಡವಾಳಶಾಹಿ ದೇಶಗಳಲ್ಲಿ ಸಮಾಜವಾದಿ ಕ್ರಾಂತಿಗೆ, ವಸಾಹತುಗಳ ಸ್ವಾತಂತ್ರ್ಯ ಸಾಧಿಸುವ ವಿಮೋಚನಾ ಹೋರಾಟಕ್ಕೆ ಪಕ್ವ ಕಾಲವೆಂದು ತೋರಿಸಿದ್ದು. ಅದನ್ನು ಕಾರ್ಯಗತಗೊಳಿಸಲು ದೇಶದೊಳಗೆ ರೈತ–ಕಾರ್ಮಿಕ ಐಕ್ಯತೆ ಆಧರಿಸಿದ ಹಾಗೂ ಅಂತರ್ರಾಷ್ಟ್ರೀಯವಾಗಿ ಅಭಿವೃದ್ಧ ಬಂಡವಾಳಶಾಹಿ ದೇಶಗಳ ಕಾರ್ಮಿಕ ಚಳುವಳಿ ಮತ್ತು ವಸಾಹತುಗಳ ರಾಷ್ಟ್ರೀಯ ವಿಮೋಚನಾ ಹೋರಾಟಗಳ ಸಖ್ಯತೆಯ ಅಗತ್ಯವನ್ನು ಸೈದ್ಧಾಂತಿಕವಾಗಿ ತೋರಿಸಿ, ಅದನ್ನು ಜಾರಿಗೊಳಿಸಲು ಪ್ರಾಯೋಗಿಕ ಕ್ರಮಗಳನ್ನು ಕೈಗೊಂಡದ್ದು. ಇವುಗಳಿಗಾಗಿ ಲೆನಿನ್ ಅನ್ನು ಜಗತ್ತಿನ ದುಡಿಯುವ ಜನ ಅನುದಿನವೂ ನೆನೆಯುತ್ತಾರೆ. ಲೆನಿನ್ ಅವರ ಸಾಮ್ರಾಜ್ಯಶಾಹಿ–ವಿರೋಧಿ ಮತ್ತು ಯುದ್ಧ–ವಿರೋಧಿ ಪಾತ್ರಕ್ಕಾಗಿ ಮೂರನೇ ಜಗತ್ತಿನ ಎಲ್ಲಾ ಪ್ರಜಾಪ್ರಭುತ್ವವಾದಿಗಳು ಮೆಚ್ಚುತ್ತಾರೆ.

ಲೆನಿನ್, ನಿನ್ನ ಹೆಸರದು ಸಿಡಿಲ್ ಸದ್ದು
ದೊರೆಗಿವಿಗೆ! ನಿನ್ನ ಸಮತಾಬೋಧೆ ಸಿಡಿಮದ್ದು

ಅಂದರೆ ಗುಹಾ ಅವರದು ದೊರೆಗಿವಿಯೇ? ದೇಶಿ–ವಿದೇಶಿ ದೊರೆಗಳ ಪರವಾದ ಧೋರಣೆಯೇ?

ನಮ್ಮ ದೇಶದ ಎಲ್ಲಾ ಪ್ರಜಾಪ್ರಭುತ್ವವಾದಿಗಳೂ, ದೇಶಪ್ರೇಮಿಗಳು (ಗುಹಾ ಅವರೂ) ಗೌರವಿಸುವ ಒಪ್ಪುವ ಇಬ್ಬರು – ನೆಹರೂ ಮತ್ತು ರವೀಂದ್ರನಾಥ್ ಟ್ಯಾಗೋರ್ – ಲೆನಿನ್ ಮತ್ತು ಅವರು ಸ್ಥಾಪಿಸಿದ ಸೋವಿಯೆಟ್ ಒಕ್ಕೂಟದ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸಾಮ್ರಾಜ್ಯಶಾಹಿ ಬಗ್ಗೆ ಲೆನಿನ್ ಪುಸ್ತಕ ತಮ್ಮನ್ನು ಆಳವಾಗಿ ಕಲಕಿದ್ದರ ಬಗ್ಗೆ ನೆಹರೂ ಬರೆದಿದ್ದಾರೆ. "ಮಹಾನ್ ವ್ಯಕ್ತಿ ಲೆನಿನ್ ನಾಯಕತ್ವದಲ್ಲಿ ನಡೆದ ಅಕ್ಟೋಬರ್ ಕ್ರಾಂತಿಯ ಸಮಯದಲ್ಲೇ ನಮ್ಮ ಸ್ವಾತಂತ್ರ್ಯ ಹೋರಾಟದಲ್ಲೂ ನಾವು ಒಂದು ಹೊಸ ಘಟ್ಟ ಆರಂಭಿಸಿದೆವು. ಲೆನಿನ ಅವರ ಉದಾಹರಣೆ ನಮಗೆ ಭಾರೀ ಸ್ಫೂರ್ತಿ ತುಂಬಿತ್ತು" ಎಂದು ಇನ್ನೊಂದು ಕಡೆ ನೆಹರೂ ಬರೆಯುತ್ತಾರೆ. ನೆಹರೂ ಬರೆದ "ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರಿ" ಯಲ್ಲಿ ಅವರು ಲೆನಿನ್ ಮತ್ತು ಸೋವಿಯೆಟ್ ಒಕ್ಕೂಟದ ಬಗ್ಗೆ ಅತೀವ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 1955ರಲ್ಲಿ ಅವರ ಸೋವಿಯೆಟ್ ಭೇಟಿಯ ನಂತರವೂ ಮುಖ್ಯಮಂತ್ರಿಗಳಿಗೆ ಪತ್ರದಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸೋವಿಯೆಟ್ ಒಕ್ಕೂಟಕ್ಕೆ 1930ರಲ್ಲಿ ಭೇಟಿ ನೀಡಿದ ಟ್ಯಾಗೋರ್ ಶಿಕ್ಷಣ ಮತ್ತು ಯುದ್ಧ–ವಿರೋಧದ ಬಗ್ಗೆ ಸೋವಿಯೆಟ್ ನೀತಿಯನ್ನು ಬಹುವಾಗಿ ಮೆಚ್ಚಿಕೊಂಡಿದ್ದರು.

"ಆತ ಮೊದಲಿಗೆ ದೇಶವನ್ನು ತನ್ನ ಪಕ್ಷಕ್ಕೆ ಶರಣಾಗಿಸಿದ; ಬಳಿಕ ಪಕ್ಷವನ್ನು ತನಗೆ ಶರಣಾಗಿಸಿದ. ಶತ್ರುಗಳು ಮತ್ತು ಪ್ರತಿಸ್ಪರ್ಧಿಗಳನ್ನು ಆತ ಕೊಂದ, ಬೌದ್ಧಿಕ ಮತ್ತು ಕಲಾತ್ಮಕ ಅಭಿವ್ಯಕ್ತಿಯ ಮೇಲೆ ನಿರ್ಬಂಧ ಹೇರಿದ ಮತ್ತು ಇನ್ನೂ ಹೆಚ್ಚು ಕ್ರೂರವಾದ ಸ್ಟಾಲಿನ್ನ ನಿರಂಕುಶ ಆಡಳಿತಕ್ಕೆ ದಾರಿ ಮಾಡಿಕೊಟ್ಟ."

ಎಂದು ಗುಹಾ ಲೆನಿನ್ ಬಗ್ಗೆ ಹೇಳುತ್ತಾರೆ. ಜಗತ್ತಿನ ಯಾವುದೇ ಪ್ರಜಾಪ್ರಭುತ್ವವಾದಿ ಬುದ್ಧಿಜೀವಿ ಲೆನಿನ್ ನ್ನು ಇಷ್ಟು ಅಚಾರಿತ್ರಿಕವಾಗಿ ಯಾವುದೇ ವಸ್ತುನಿಷ್ಠತೆ ಇಲ್ಲದ ರೀತಿಯಲ್ಲಿ ಜರೆದದ್ದು ನನಗಂತೂ ಗೊತ್ತಿಲ್ಲ. ಸಾಮ್ರಾಜ್ಯಶಾಹಿಯ ಕಟು ಸಮರ್ಥಕರು, ಪ್ರಜಾಪ್ರಭುತ್ವ–ವಿರೋಧಿ ಬಲಪಂಥೀಯರು ಇವರುಗಳು ಮಾತ್ರ ಲೆನಿನ್ ಅನ್ನು ಈ ರೀತಿ ಜರೆಯುತ್ತಾರೆ. ಫ್ಯಾಸಿಸಂ ಸೋಲಿಸಿ ಜಗತ್ತನ್ನು ರಕ್ಷಿಸಿದ ವಿಶ್ವ ದುಡಿಯುವ ಜನತೆಯ ಹೋರಾಟದ ನಾಯಕತ್ವ ವಹಿಸಿದ ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಗೆ ಸಡ್ಡು ಹೊಡೆಯುವಂತೆ ಸೋವಿಯೆಟ್ ಒಕ್ಕೂಟವನ್ನು ಬೆಳೆಸಿದ ಸ್ಟಾಲಿನ್ ನ್ನು ಸಹ ಗುಹಾ ಅದೇ ರೀತಿಯ ಅಚಾರಿತ್ರಿಕ ವಸ್ತುನಿಷ್ಠತೆ ಇಲ್ಲದ ರೀತಿಯಲ್ಲಿ ಜರೆಯುತ್ತಾರೆ.



ನಮ್ಮ ದೇಶದ ಎಲ್ಲಾ ಪ್ರಜಾಪ್ರಭುತ್ವವಾದಿಗಳೂ, ದೇಶಪ್ರೇಮಿಗಳು (ಗುಹಾ ಅವರೂ) ಗೌರವಿಸುವ ಒಪ್ಪುವ ಇಬ್ಬರು – ನೆಹರೂ ಮತ್ತು ರವೀಂದ್ರನಾಥ್ ಟ್ಯಾಗೋರ್ – ಲೆನಿನ್ ಮತ್ತು ಅವರು ಸ್ಥಾಪಿಸಿದ ಸೋವಿಯೆಟ್ ಒಕ್ಕೂಟದ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

"ಬರ್ನ್‌ಸ್ಟೈನ್ ನಂತಹವರು" ಭಾರತದ ಕಮ್ಯುನಿಸ್ಟರಿಗೆ "ಹೆಚ್ಚು ಉತ್ತಮವಾದ ಆದರ್ಶ ಆಗಬೇಕಿತ್ತು. ಪಶ್ಚಿಮ ಯುರೋಪ್ನ ಪ್ರಜಾಪ್ರಭುತ್ವ ದೇಶಗಳಲ್ಲಿ ಸುಧಾರಣಾಪರ ಸಮಾಜವಾದಿಗಳು ಜನರ ಅಭಿವೃದ್ಧಿಯ ಮಾದರಿಗಳನ್ನು ಕಟ್ಟಿ ನಿಲ್ಲಿಸಿದರು." ಎಂದು ಗುಹಾ ಹೇಳುತ್ತಾರೆ. ಎರಡು ಮಹಾಯುದ್ಧಗಳಿಗೆ ಮತ್ತು ಪಶ್ಚಿಮ ಯುರೋಪಿನ ಕಾರ್ಮಿಕ ಕ್ರಾಂತಿಗಳ ಸೋಲಿಗೆ ಕಾರಣವಾಗಿದ್ದು "ಬರ್ನ್‌ಸ್ಟೈನ್ ನಂತಹವರ" ಸಾಮ್ರಾಜ್ಯಶಾಹಿ ಜತೆ ವರ್ಗಶಾಮೀಲು ಮತ್ತು ಶರಣಾಗತಿಯ ನೀತಿ. ಅದನ್ನು ಲೆನಿನ್ ಬಲವಾಗಿ ಟೀಕಿಸಿದ್ದರು. ಪಶ್ಚಿಮ ಯುರೋಪಿನ ಪ್ರಜಾಪ್ರಭುತ್ವ ದೇಶಗಳಲ್ಲಿ ಕಾರ್ಮಿಕರ ಜನಸಾಮಾನ್ಯರ ಜೀವನ ಮಟ್ಟ ಏರಿದ್ದು, ಕಲ್ಯಾಣ–ಪ್ರಭುತ್ವ ಜಾರಿಗೆ ಬಂದಿದ್ದು ಸೋವಿಯೆಟ್ ಒಕ್ಕೂಟದ ಮತ್ತು ಪೂರ್ವ ಯುರೋಪಿನ ಸಮಾಜವಾದಿ ವ್ಯವಸ್ಥೆಯ "ಬೆದರಿಕೆ"ಯಿಂದ. ಸೋವಿಯೆಟ್ ಒಕ್ಕೂಟದ ಮತ್ತು ಪೂರ್ವ ಯುರೋಪಿನ ಸಮಾಜವಾದಿ ವ್ಯವಸ್ಥೆ ಕಳಚಿ ಬಿದ್ದ ಕೂಡಲೇ ಕಲ್ಯಾಣ–ಪ್ರಭುತ್ವ ಸಹ ಕಳಚಿ ಬೀಳುತ್ತಿದೆ – ಎಂಬುದು 'ಅಚಾರಿತ್ರಿಕ' ಗುಹಾ ಗೆ ಬೇಕಿಲ್ಲ. ಸಾಮ್ರಾಜ್ಯಶಾಹಿಯ ಸಮರ್ಥಕರಿಗೆ ಅದು ಅಪಥ್ಯ ಸಹ.

ಗುಹಾಗೆ ಯಾಕೆ ಹೀಗಾಡುತ್ತಿದ್ದಾರೆ?

ತಮ್ಮ ಲೇಖನದಲ್ಲಿ ಸಂಘಪರಿವಾರದ ಪ್ರತಿಮೆ–ಧ್ವಂಸದ ರಾಜಕಾರಣವನ್ನು ಸಮರ್ಥಿಸುವ, ಸಾಮ್ರಾಜ್ಯಶಾಹಿ–ಸಮರ್ಥಕರು ಹಾಗೂ ಪ್ರಜಾಪ್ರಭುತ್ವ–ವಿರೋಧಿ ಬಲಪಂಥೀಯರ ಪರಿಭಾಷೆಯಲ್ಲಿ ಲೆನಿನ್ ಮತ್ತು ಭಾರತೀಯ ಕಮ್ಯುನಿಸ್ಟ್ ಚಳುವಳಿಯನ್ನು ಜರೆಯುವ, ಗುಹಾ ಅವರಿಂದ ಸಿಪಿಐ(ಎಂ) ಗೆ ಬಿಟ್ಟಿ ಉಪದೇಶ ಬೇಕಿಲ್ಲ ಎಂದು ಪಕ್ಷದ ಪರವಾಗಿ ನಾನು ಹೇಳಬಯಸುತ್ತೇನೆ. ಭಾರತದ ವಿವಿಧ ಪಕ್ಷಗಳ ಸ್ವರೂಪದ ಬಗ್ಗೆ, ಅವುಗಳ ಜತೆ ಮೈತ್ರಿಕೂಟ ಮತ್ತು ಸಮ್ಮಿಶ್ರ ಸರಕಾರದಲ್ಲಿ ಭಾಗವಹಿಸುವಿಕೆಯ ಬಗ್ಗೆ, ಭಾರತದಲ್ಲಿ ನಿಜವಾದ ಜನತಾ ಪ್ರಜಾಪ್ರಭುತ್ವ ಸ್ಥಾಪಿಸುವ ವ್ಯೂಹ–ತಂತ್ರಗಳ ಬಗ್ಗೆ ಸಿಪಿಐ(ಎಂ) ಧೋರಣೆಗಳ ಬಗ್ಗೆ ಗುಹಾ ಅವರ ತಕರಾರುಗಳಿಗೆ ಉತ್ತರಿಸಲು ಇನ್ನೊಂದು ಲೇಖನವೇ ಬೇಕು. ಆದ್ದರಿಂದ ಅದನ್ನು ಇಲ್ಲಿ ಚರ್ಚಿಸಹೋಗುವುದಿಲ್ಲ.

ಆದರೆ ನಾವೆಲ್ಲ ಅಂದುಕೊಂಡಂತೆ ಸೆಕ್ಯುಲರ್ ಪ್ರಜಾಪ್ರಭುತ್ವವಾದಿಯಾಗಿದ್ದ, ಆಧುನಿಕ ಭಾರತದ ಪ್ರಾಜ್ಞ ಇತಿಹಾಸಕಾರನಾಗಿದ್ದ ಗುಹಾ "ಪ್ರತಿಮೆ–ವಿಧ್ವಂಸಕ" ರಾಜಕಾರಣವನ್ನು ವಿತಂಡವಾದ ಮಾಡಿ ಏಕೆ ಸಮರ್ಥಿಸುತ್ತಾರೆ? ಈ ಲೇಖನದಲ್ಲಿ ಗುಹಾ ಅವರು ಮಾಡಿರುವ "ಚಾರಿತ್ರಿಕ" ತಪ್ಪುಗಳು ಅಜ್ಞಾನದಿಂದ ಮಾಡಿದ್ದೇ ಅಥವಾ ಪ್ರಜ್ಞಾಪೂರ್ವಕವಾಗಿ ಮಾಡಿದ ತಪ್ಪುಗಳೇ? ಲೆನಿನ್ ಮತ್ತು ಭಾರತದ ಕಮ್ಯುನಿಸ್ಟರನ್ನು ಸಾಮ್ರಾಜ್ಯಶಾಹಿಯ ಕಟು ಸಮರ್ಥಕರು, ಪ್ರಜಾಪ್ರಭುತ್ವ–ವಿರೋಧಿ ಬಲಪಂಥೀಯರ ಮಾದರಿಯಲ್ಲಿ ಏಕೆ ಜರೆಯುತ್ತಾರೆ?

ಈ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಲು ಭಾರತದ ಇಂದಿನ ಸ್ಥಿತಿಯನ್ನು ಸ್ಥೂಲವಾಗಿ ಅವಲೋಕಿಸಬೇಕು. ಇಂದು ಆಳುವ ವರ್ಗಗಳು ಕೋಮುವಾದಿ–ಫ್ಯಾಸಿಸ್ಟ್ ಮಾದರಿಯ ಉಗ್ರ ಬಲಪಂಥೀಯ ಶಕ್ತಿಗಳನ್ನು ಬಳಸಿ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕೆಡವಲು ಹೊರಟಿವೆ. ಇದನ್ನು ಎದುರಿಸುವುದು ಹಿಮ್ಮೆಟ್ಟಿಸುವುದು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ವಿಶಾಲ ರಂಗದ ಸತತ ರಾಜಿಯಿಲ್ಲದ ಹೋರಾಟದಿಂದ ಮಾತ್ರ ಸಾಧ್ಯ. ಅಂತಹ ವಿಶಾಲ ರಂಗ ಕಟ್ಟುವ ಸೈದ್ಧಾಂತಿಕ ಬದ್ಧತೆ ಮತ್ತು ಸಂಘಟನಾ ಸಾಮರ್ಥ್ಯ ಇರುವುದು ಕಮ್ಯುನಿಸ್ಟರಿಗೆ ಮಾತ್ರ. ಕಮ್ಯುನಿಸ್ಟರು ಇಂತಹ ವಿಶಾಲ ರಂಗದ ನಾಯಕತ್ವವನ್ನು ಸ್ವಾಭಾವಿಕವಾಗಿ ವಹಿಸುತ್ತಾರೆ. ಇದು ಆಳುವ ವರ್ಗದಲ್ಲಿ ಮಾತ್ರವಲ್ಲ ನವ–ಉದಾರವಾದದ ಫಲಾನುಭವಿ ಕುರುಡು ಕಮ್ಯುನಿಸ್ಟ್–ವಿರೋಧಿ "ನಡುಪಂಥೀಯ" "ಉದಾರವಾದಿ" ಬುದ್ಧಿಜೀವಿಗಳಲ್ಲೂ ನಡುಕ ಹುಟ್ಟಿಸಿದೆ.

ಇತಿಹಾಸ ಬಲ್ಲ ಗುಹಾರಂಥವರಿಗೆ ಇದು ಹೆಚ್ಚು ಬೇಗ ಅರ್ಥವಾಗುತ್ತದೆ. ಆದ್ದರಿಂದ ಎಡಪಂಥೀಯರು ಕಮ್ಯುನಿಸ್ಟರು ಅದರಲ್ಲೂ ಅದರ ದೊಡ್ಡ ವಿಭಾಗವಾದ ಸಿಪಿಐ(ಎಂ) ಮೇಲೆ ಮಾಡಲಾಗುತ್ತಿರುವ ಎಲ್ಲಾ ರೀತಿಯ ದಾಳಿಗಳಲ್ಲಿ ಗುಹಾ ಸೇರಿಕೊಂಡಿದ್ದಾರೆ. ಸಿಪಿಐ(ಎಂ) ಮತ್ತು ಎಡಪಂಥೀಯರ ಬಗ್ಗೆ ಜನಸಾಮಾನ್ಯರಲ್ಲಿ ದ್ವೇಷ ಹುಟ್ಟಿಸಲು, ಬೂರ್ಜ್ವಾ ಪಕ್ಷಗಳ ಯಜಮಾನಿಕೆಯಲ್ಲಿರಲು ಸಿಪಿಐ(ಎಂ) ಮತ್ತು ಎಡಪಕ್ಷಗಳ ಸದಸ್ಯರು ನಾಯಕತ್ವಗಳ ಮೇಲೆ ಒತ್ತಡ ಹಾಕಲು ಅವರಿಗೆ ಸಿಗುವ ಸಿದ್ಧೌಷಧ, ಸಂಘಪರಿವಾರ ಕಮ್ಯುನಿಸ್ಟರ ವಿರುದ್ಧ ಬಳಸಿದ ಬಳಸುತ್ತಿರುವ ಪ್ರಚಾರ ತಂತ್ರ. ಎಲ್ಲಾ ಪ್ರಜಾಪ್ರಭುತ್ವವಾದಿಗಳಿಗೆ ಆತಂಕಕಾರಿಯಾದ ಗುಹಾ ಅವರ ಈ ಲೇಖನವನ್ನು ಇನ್ಯಾವ ರೀತಿಯಲ್ಲೂ ಅರ್ಥ ಮಾಡಿಕೊಳ್ಳುವುದು ಸಾಧ್ಯವಿಲ್ಲ. ■

ಟ್ರಂಪ್ ಕರೆ ಮತ್ತು ಹಾರ್ಲೆ–ಡೇವಿಡ್‌ಸನ್ ಬೈಕ್ ಮಂದಿಗೆ ಅಚ್ಛೇ ದಿನ್ ಉಡುಗೊರೆ


ಈ ವರ್ಷದ ಬಜೆಟ್ ಭಾರತದ ಶ್ರೀಮಂತ ವಿಭಾಗದ ಖಯಾಲಿಯ ವಿದೇಶಗಳಿಂದ ಸಿದ್ಧರೂಪದಲ್ಲೇ ಬರುವ ಅಂದರೆ ಅಸೆಂಬಲ್ಡ್ ಐಷಾರಾಮಿ ಮೋಟಾರು ಬೈಕುಗಳ ಮೇಲಿನ ಸುಂಕಗಳನ್ನು 30%ದಿಂದ 25%ಕ್ಕೆ ಇಳಿಸಿತು. ಇದು ಮುಖ್ಯವಾಗಿ 5ಲಕ್ಷ ರೂ.ಗಳಿಂದ 55ಲಕ್ಷ ರೂ.ಗಳ ವರೆಗಿನ ಬೆಲೆಯಿರುವ ಅಮೆರಿಕಾದ ಹಾರ್ಲೆ–ಡೇವಿಡ್‌ಸನ್ ಬೈಕುಗಳಿಗೆ ಅನ್ವಯವಾಗುವ ಕ್ರಮ. ಈ ಬಗ್ಗೆ ಅಮೆರಿಕಾದ ಅಧ್ಯಕ್ಷ ಟ್ರಂಪ್ ಭಾರೀ ಮುತುವರ್ಜಿ ವಹಿಸಿದ್ದರು ಎನ್ನಲಾಗಿದೆ. ಕಳೆದ ಒಂದು ವರ್ಷದಲ್ಲಿ ಕನಿಷ್ಟ ಆರು ಬಾರಿ ಈ ಬಗ್ಗೆ ಅವರು ಮಾತಾಡಿರುವುದು ವರದಿಯಾಗಿದೆ. ಎರಡು ಬಾರಿ ನೇರವಾಗಿ ನಮ್ಮ ಪ್ರಧಾನ ಮಂತ್ರಿಗಳೊಡನೆಯೇ ಮಾತಾಡಿದ್ದಾರಂತೆ(ದಿ ಹಿಂದು, ಮಾರ್ಚ್ 18). ಅದೇನೇ ಇರಲಿ, ದೇಶದ ಐಷಾರಾಮಿ ಮಂದಿಗೆ ಈ ನಾಲ್ಕನೇ ಅಚ್ಛೇ ದಿನ್ ಬಜೆಟಿನಲ್ಲಿ ಈ 'ಅಲ್ಪ' ಕೊಡುಗೆ ಸಿಕ್ಕಿರುವುದಂತೂ ನಿಜ.

ಆದರೆ ವಿಷಯ ಅಷ್ಟೇ ಅಲ್ಲ. ರೆವಿನ್ಯೂ ಬೇಹುಗಾರಿಕೆ ನಿರ್ದೇಶನಾಲಯ(ಡಿಆರ್‌ಐ) ಈ ಅಮೆರಿಕನ್ ಕಂಪನಿ ವಾಸ್ತವವಾಗಿ 30% ಆಮದು ಸುಂಕದ ಬದಲು 10% ಸುಂಕ ಮಾತ್ರ ತೆರುತ್ತಿದೆ ಎಂಬ ಸುದ್ದಿ ಪಡೆದು ಆ ಬಗ್ಗೆ ಕಳೆದ ವರ್ಷ ತನಿಖೆ ಆರಂಭಿಸಿತ್ತು. ಆ ತನಿಖೆಯನ್ನು ಬಜೆಟ್ ಕೊಡುಗೆಯ ನಂತರ ಫೆಬ್ರುವರಿ ಮೊದಲ ವಾರದಲ್ಲಿ ಮುಚ್ಚಲಾಗಿದೆ ಎಂಬುದು ಮತ್ತೊಂದು ವರದಿ.

ಆ ಕಂಪನಿ ಆ ರೀತಿ ಸುಂಕ ತಪ್ಪಿಸಿಕೊಳ್ಳುತ್ತಿಲ್ಲ ಎಂದೇನೂ ಈ ತನಿಖೆಯಲ್ಲಿ ಕಂಡು ಬರಲಿಲ್ಲ. ಆದರೆ ಕ್ರಮ ಕೈಗೊಳ್ಳಲು ಪುರಾವೆಗಳು ಸಿಕ್ಕಿಲ್ಲ ಎಂಬುದರಿಂದಾಗಿ ತನಿಖೆಯನ್ನು ಮುಚ್ಚಲಾಯಿತಂತೆ. ಈ ಸಮಗ್ರ ಬೈಕ್‌ಗಳಲ್ಲಿ ಗಿಯರ್‌ಪೆಟ್ಟಿಗೆ ಮತ್ತು ಸಂಚಲನ ವ್ಯವಸ್ಥೆ ಪೂರ್ಣವಾಗಿ ಅಸೆಂಬಲ್ಡ್ ಆಗಿದೆಯೇ ಇಲ್ಲವೇ ಎಂದು ತೋರಿಸಲು ಡಿಆರ್‌ಐಗೆ ಆಗಲಿಲ್ಲ ಎಂದು ಹಣಕಾಸು ಇಲಾಖೆಯ ಒಂದು ಆಂತರಿಕ ಟಿಪ್ಪಣಿಯಲ್ಲಿ ಹೇಳಲಾಗಿದೆ ಎಂದು ಈ ಪ್ರತಿಕೆ ವರದಿ ಮಾಡಿದೆ.

ಅದೇನೇ ಇರಲಿ, ಈ ತನಿಖೆಯ ಮುಚ್ಚಿಕೆ ಆಗಿರುವ ಸಂದರ್ಭ ಮಾತ್ರ ಕುತೂಹಲಕಾರಿ. ಅದನ್ನು ಮುಚ್ಚಿದ ಮರುದಿನ, ಅಂದರೆ ಫೆಬ್ರುವರಿ 8ರಂದು ಭಾರತದ ಪ್ರಧಾನಿಗಳು ಮತ್ತು ಅಮೆರಿಕಾದ ಅಧ್ಯಕ್ಷರು ಪರಸ್ಪರ ಮಾತಾಡಿದರು ಎಂದು ಅಮೆರಿಕಾದ ಶ್ವೇತ ಭವನದ ಪತ್ರಿಕಾ ಹೇಳಿಕೆ ತಿಳಿಸಿತು. ನಾಲ್ಕು ದಿನಗಳ ನಂತರ ಇಂತಹ ಬೈಕುಗಳಿಗೆ ಸುಂಕಗಳನ್ನು ಇಳಿಸಿದ್ದರ ಅಧಿಸೂಚನೆಯೂ ಪ್ರಕಟವಾಯಿತು. ವಿದೇಶಾಂಗ ಇಲಾಖೆ ಟ್ರಂಪ್–ಮೋದಿ ಸಂವಾದದ ಬಗ್ಗೆ ಟಿಪ್ಪಣಿ ಮಾಡಲು ನಿರಾಕರಿಸಿತು. ಆದರೆ ಅಮೆರಿಕಾದ ಆಡಳಿತದ ವಕ್ತಾರರು ಈ ಸುಂಕ ದರಗಳು 'ರಿಕ್ಕಾಟದ ಅಂಶಗಳು' ಎಂದು 'ಎಚ್ಚರಿಸಿ'ದರಂತೆ! ಸುಂಕ ದರಗಳು ಇನ್ನಷ್ಟು ಕಡಿಮೆಯಾಗಬೇಕಿತ್ತು, ಸೊನ್ನೆಗೆ ಇಳಿಯಬೇಕು ಎಂಬುದು ಅಮೆರಿಕನ್ ಆಳರಸರ ಬಯಕೆಯಂತೆ.

ಆಮದು ಸುಂಕ ತಪ್ಪಿಸಿಕೊಳ್ಳುವ ಕೇಸಿನ ತನಿಖೆ ಮುಚ್ಚಲು ಅಮೆರಿಕನ್ ಒತ್ತಡ ಕಾರಣವೇ ಎಂಬ ಪ್ರಶ್ನೆಯನ್ನು ಹಲವರು ಕೇಳುತ್ತಿದ್ದಾರೆ.



ಮೂರು ವರ್ಷಗಳಲ್ಲಿ 26,400 ವಿದ್ಯಾರ್ಥಿಗಳ ಆತ್ಮಹತ್ಯೆ

2014ರಿಂದ 2016ರ ನಡುವೆ ದೇಶದಲ್ಲಿ 26,500 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರಾಜ್ಯಸಭೆಯಲ್ಲಿ ಸದಸ್ಯರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತ ಗೃಹರಾಜ್ಯಮಂತ್ರಿಗಳು ಈ ಮಾಹಿತಿ ನೀಡಿದ್ದಾರೆ. ನಿಜ, ಇದೇನು ಅಚ್ಛೇ ದಿನ್‌ಗಳ ವಿಶಿಷ್ಟತೆಯೇನಲ್ಲ. ಆದರೆ 'ಅಚ್ಛೇ ದಿನ್'ಗಳಲ್ಲಿ ಈ ದರ ಕಡಿಮೆಯಾಗುವ ಬದಲು ಕಳೆದ 'ಮೂರು ವರ್ಷಗಳಲ್ಲಿ ಹೆಚ್ಚುತ್ತಲೇ ಬಂದಿದೆ. 2014ರಲ್ಲಿ 8068, 2015ರಲ್ಲಿ 8934 ಮತ್ತು 2016ರಲ್ಲಿ 9704. 2017ರ ಮಾಹಿತಿ ಇನ್ನೂ ಸಿಕ್ಕಿಲ್ಲ.

ಖಿನ್ನತೆ, ಶೈಕ್ಷಣಿಕ ಒತ್ತಡ, ಕುಟುಂಬದ ನಿರೀಕ್ಷೆಗಳು, ಒತ್ತಡ ತಾಳಿಕೊಳ್ಳಲಾಗದಿರುವುದು, ಸಾಮಾಜಿಕ ಏಕಾಂಗಿತನ ಮತ್ತು ಮಾದಕವಸ್ತುಗಳ ವ್ಯಸನ, ಜತೆಗೆ ಆರ್ಥಿಕ ಸಮಸ್ಯೆಗಳು ಹಾಗೂ ಜಾತಿ ಪಕ್ಷಪಾತಗಳು ಉಂಟು ಮಾಡುವ ಆಶಾಹೀನತೆ ಮತ್ತು ಉಪೇಕ್ಷೆ ವಿದ್ಯಾರ್ಥಿಗಳಲ್ಲಿ ಆತ್ಮಹತ್ಯೆಗಳಿಗೆ ಕಾರಣ ಎಂದು ಕಂಡು ಬಂದಿದೆ. ಐಐಟಿಗಳಂತಹ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆಗಳು ಹೆಚ್ಚುತ್ತಿರುವುದು ಇದನ್ನು ಸಾಬೀತು ಮಾಡುತ್ತಿದೆ

ಭಾರತದ ವೈಜ್ಞಾನಿಕ ಸಾಧನೆಗಳನ್ನು ಗುರುತಿಸಲೂ ಹುಸಿ ದಾಖಲೆಗಳಿಗೇ ಶರಣು!

ದೇಶದ ವಿಜ್ಞಾನ ಮಂತ್ರಿಗಳು ದೇಶದ ವಿಜ್ಞಾನ ಸಮ್ಮೇಳನದಲ್ಲಿಯೇ 'ಫೇಕ್' ದಾವೆ ಹೂಡಿ ಈ ವಾರ ಜಗತ್ತಿನಲ್ಲಿ ಭಾರತ ಮುಜುಗರ ಪಡುವಂತೆ ಮಾಡಿದ್ದಾರೆ.

ಮಾರ್ಚ್ 16ರಂದು 105ನೇ ಭಾರತೀಯ ವಿಜ್ಞಾನ ಸಮ್ಮೇಳನದ ಉದ್ಘಾಟನಾ ಅಧಿವೇಶನದಲ್ಲಿ ಮಾತಾಡುತ್ತ ಈ ಅಚ್ಛೇ ದಿನ್ ಮಂತ್ರಿವರ್ಯರು "ಹಿಂದೂಗಳಲ್ಲಿ ಪ್ರತಿಯೊಂದೂ ಆಚರಣೆ ಮತ್ತು ವಾಡಿಕೆ ವಿಜ್ಞಾನದಿಂದ ಓತಪ್ರೋತವಾಗಿದೆ ಮತ್ತು ಪ್ರತಿಯೊಂದು ಆಧುನಿಕ ಭಾರತೀಯ ಸಾಧನೆ ವಾಸ್ತವವಾಗಿ ನಮ್ಮ ಪ್ರಾಚೀನ ವೈಜ್ಞಾನಿಕ ಸಾಧನೆಗಳ ಮುಂದುವರಿಕೆಯಾಗಿದೆ. ನಾವು ಇತ್ತೀಚೆಗೆ ಕಳಕೊಂಡ ಪ್ರಸಿದ್ಧ ವಿಜ್ಞಾನಿ ಸ್ಟಿಫನ್ ಹಾಕಿಂಗ್ ಕೂಡ ವೇದಗಳು ಐನ್‌ಸ್ಟೈನ್ ಸಿದ್ಧಾಂತಕ್ಕಿಂತ ಮೇಲಿನ ಸ್ತರದ ಒಂದು ಸಿದ್ಧಾಂತವನ್ನು ಹೊಂದಿರಬಹುದು ಎಂದು ಖಡಾಖಂಡಿತವಾಗಿ ಹೇಳಿದ್ದಾರೆ" ಎಂದರು.

ತಮ್ಮ ಈ ದಾವೆಗೆ ಪುರಾವೆಯನ್ನು ಕೇಳಿದಾಗ ಮಂತ್ರಿಗಳು ನೀವೇ ಹುಡುಕಿಕೊಳ್ಳಿ ಎಂದರಂತೆ– ಅದೇಕೋ 'ಇದು ನಂಬಿಕೆಯ ವಿಷಯ' ಎಂದು ಹೇಳಲಿಲ್ಲ! ಇದು ಹೊಸ ದಾವೆಯೇನೂ ಆಗಿರದೆ ಮತ್ತೊಂದು ಫೇಕ್ ವೆಬ್‌ತಾಣದ ಮತ್ತೊಂದು ಫೇಕ್‌ಸುದ್ದಿ ಎಂದು ನಂತರ ಬಯಲಾಗಿದೆ.

ವಿಜ್ಞಾನಿಗಳು, ವಿಶೇಷವಾಗಿ ಸ್ಟಿಫೆನ್ ಹಾಕಿಂಗ್ ಫೌಂಡೇಶನ್‌ನ ಟ್ರಸ್ಟಿ ಮತ್ತು ಅವರು ಬೋಧಿಸುತ್ತಿದ್ದ ಸಂಸ್ಥೆಯಲ್ಲೇ ಸೈದ್ಧಾಂತಿಕ ಭೌತಶಾಸ್ತ್ರದ ಪ್ರಾಧ್ಯಾಪಕರಾಗಿರುವ ಮಾಲ್ಕೊಮ್ ಪೆರಿ ನಮ್ಮ ಮಂತ್ರಿವರ್ಯರ ದಾವೆಯನ್ನು ಸಾರಾಸಗಟು ತಿರಸ್ಕರಿಸಿದ್ದಾರೆ. "ವಿಶ್ವದ ಮೂಲದ ಬಗ್ಗೆ ಈಗ ನಮಗೆ ತಿಳಿದಿರುವ ಜ್ಞಾನದ ಬಗ್ಗೆ ಮಾತಾಡುತ್ತ ಬೈಬಲ್ ಅಥವ ವೇದಗಳಲ್ಲಿ ಸೃಷ್ಟಿಯ ಪುರಾಣಗಳನ್ನು ಲೇವಡಿ ಮಾಡುತ್ತ ಅವರು ಹೀಗೆ ಹೇಳಿರಬಹುದೇ ವಿನಹ ನಿಮ್ಮ ಮಂತ್ರಿಗಳು ಹೇಳಿದಂತೆ ಖಂಡಿತ ಹೇಳಿಲ್ಲ" ಎಂದು ಅವರು ಹೇಳಿದ್ದಾರೆ.

ಇರಬಹುದು ಅಚ್ಛೇ ದಿನ್‌ಗಳ ಬಹಳಷ್ಟು ಮಂದಿಗೆ ಲೇವಡಿ ಮತ್ತು ಸತ್ಯದ ನಡುವೆ ವ್ಯತ್ಯಾಸವೇ ಕಾಣುತ್ತಿಲ್ಲ ಎಂಬುದನ್ನು ನಾವು ಕಳೆದ ನಾಲ್ಕು ವರ್ಷಗಳಲ್ಲಿ ಹಲವು ಬಾರಿ ಕಂಡಿದ್ದೇವೆ ಎಂದು ವಿಶ್ಲೇಷಕರೊಬ್ಬರು ಟಿಪ್ಪಣಿ ಮಾಡಿದ್ದಾರೆ.

ಅಂತೂ ಅಚ್ಛೇದಿನಗಳ ಹಾಸ್ಯಾಸ್ಪದ ಉವಾಚಗಳ ದೊಡ್ಡ ಪಟ್ಟಿಯಲ್ಲಿ ಇನ್ನೊಂದು ಸೇರ್ಪಡೆಯಾಗಿ ದೇಶಾದ್ಯಂತ ಹೊಸ ಜೋಕುಗಳಿಗೆ ಆಹಾರ ದೊರೆತಿದೆ.

ಕೆಲ ದಿನಗಳ ಹಿಂದೆ ಇನ್ನೊಬ್ಬ ಘನತೆವೆತ್ತ ಮಂತ್ರಿಗಳು ಮಂಗ ಮಾನವನಾಗಿ ಬದಲಾಗುತ್ತಿರುವುದನ್ನು ಯಾರೂ ನೋಡಿಲ್ಲ, ನಮ್ಮ ವೇದ–ಪುರಾಣಗಳಲ್ಲೂ ಅದರ ಪ್ರಸ್ತಾಪವಿಲ್ಲ, ಆದ್ದರಿಂದ ಡಾರ್ವಿನ್‌ವಾದ ಸುಳ್ಳು ಎಂದು ಹೇಳಿ ನಗೆಪಾಟಲಾಗಿದ್ದರು.

ಇದಕ್ಕೆ ಮೊದಲು ನಮ್ಮ ಪೂರ್ವಜರಿಗೆ ವಿಮಾನವಿದ್ಯೆ ತಿಳಿದಿತ್ತು ಎಂಬ ದಾವೆ ಹೂಡಲಾಗಿತ್ತು.

ಹಾಗೆ ನೊಡಿದರೆ, ಸ್ವತಃ ಅಚ್ಛೇದಿನ್ ಮಂತ್ರದ ಸೃಷ್ಟಿಕರ್ತರೇ ಗಣೇಶ ಮತ್ತು ಪ್ಲಾಸ್ಟಿಕ್ ಸರ್ಜರಿ ಬಗ್ಗೆ ಮಾತಾಡಿ ಇವೆಲ್ಲಕ್ಕೆ ನಾಂದಿ ಹಾಕಿದ್ದರು ಎಂಬುದನ್ನು ಮರೆಯಲು ಸಾಧ್ಯವೇ? ವಿಜ್ಞಾನ ಮಂತ್ರಿಗಳು ಈ ಹೊಸ ಫೇಕ್ ದಾವೆಯನ್ನು ಅವರ ಸಮ್ಮುಖದಲ್ಲೇ ಮಂಡಿಸಿದ್ದರು.

ಈ ಸಮ್ಮೇಳನ ಇಂಫಾಲ್‌ನಲ್ಲಿ ನಡೆದಿದೆ. ವಾಸ್ತವವಾಗಿ ಕಳೆದ ಡಿಸೆಂಬರ್‌ನಲ್ಲಿ ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದಲ್ಲಿ ಇದು ನಡೆಯಬೇಕಾಗಿತ್ತು. ಅಲ್ಲಿ ವಿದ್ಯಾರ್ಥಿಗಳ ಚಳುವಳಿಗೆ ಹೆದರಿ ಭಾರತೀಯ ವಿಜ್ಞಾನ ಸಮ್ಮೇಳನದ 105 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ಅದನ್ನು ಅನಿರ್ದಿಷ್ಟವಾಗಿ ಮುಂದೂಡಲಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಇರಾಕ್‌ನ ಮೊಸೂಲ್‌ನಲ್ಲಿ ಐಸಿಸ್ ಭಯೋತ್ಪಾದಕರ ದಾಳಿ ನಡೆದಾಗ ಅಲ್ಲಿ ಒಂದು ನಿರ್ಮಾಣ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ 39 ಭಾರತೀಯರು ಬದುಕಿದ್ದಾರೆ ಎಂದು ಸರಕಾರ ಕಳೆದ ಮೂರು ವರ್ಷಗಳಿಂದಲೂ ಅವರ ಕುಟುಂಬಗಳಿಗೆ ಹೇಳುತ್ತ ಬಂದಿತ್ತು. ಆದರೆ ಈಗ ಅವರು ಬದುಕಿಲ್ಲ ಎಂದು ಆ ಕುಟುಂಬಗಳಿಗೆ ತಿಳಿಸದೆ ವಿದೇಶಾಂಗ ಮಂತ್ರಿಗಳು ಸಂಸತ್ತಿಗೆ ತಿಳಿಸಿರುವುದು ವಿವಾದವನ್ನು ಉಂಟು ಮಾಡಿದೆ. ಸತ್ತಿದ್ದಾರೆ ಎಂಬ ಗಟ್ಟಿ ಪುರಾವೆಯಿಲ್ಲದೆ ಈ ಮೊದಲು ಹಾಗೆ ಹೇಳಲು ಸಾಧ್ಯವಿರಲಿಲ್ಲ ಎಂಬ ಸರಕಾರದ ಸಮರ್ಥನೆ ಹಲವು ಸಂಗತಿಗಳನ್ನು ಮರೆಮಾಚುತ್ತಿದೆ, ದೇಶವನ್ನು ದಾರಿ ತಪ್ಪಿಸುತ್ತಿದೆ ಎಂಬ ಟೀಕೆಗೆ ಒಳಗಾಗಿದೆ.– ಸುದ್ದಿ



ವ್ಯಂಗ್ಯಚಿತ್ರ: ಮಂಜುಲ್, ಫಸ್ಟ್‌ಪೋಸ್ಟ್

ಇನ್ನೊಂದು ಪತ್ರಿಕೆಯ ಇನ್ನೊಬ್ಬ ಹಿರಿಯ ಸಂಪಾದಕರಿಗೆ ಖೊಕ್

ಚಂಡೀಗಡದ ದೈನಿಕ 'ದಿ ಟ್ರಿಬ್ಯೂನ್' ಇತ್ತೀಚೆಗೆ ದೇಶಾದ್ಯಂತ ಸುದ್ದಿಯಲ್ಲಿತ್ತು ಆಧಾರ್ ಮಾಹಿತಿ ನೆಲೆಯನ್ನು ಹೇಗೆ ಕೇವಲ 500 ರೂ.ಗೆ ಖರೀದಿಸಬಹುದು ಎಂಬುದನ್ನು ಬಯಲು ಮಾಡಿದ ಒಂದು ತನಿಖಾ ಲೇಖನ ಇದಕ್ಕೆ ಕಾರಣ. ನಮ್ಮ ಅಚ್ಛೇದಿನ್ ಆಳರಸರಿಗೆ ಮುಜುಗರ ಉಂಟು ಮಾಡಿದ ಆ ತನಿಖಾ ವರದಿಯೇ ಈಗ ಆ ಪತ್ರಿಕೆಯ ಸಂಪಾದಕರಾದ ಹಾಗೂ ದೇಶದ ಒಬ್ಬ ಗೌರವಾನ್ವಿತ ಪತ್ರಕರ್ತರಾದ ಹರೀಶ್ ಖರೆಯವರ ರಾಜೀನಾಮೆಗೆ ಕಾರಣವಾಗುತ್ತಿದೆ ಎಂದು ವರದಿಯಾಗಿದೆ. ಜೂನ್2015ರಲ್ಲಿ ಮೂರು ವರ್ಷಗಳ ಅವಧಿಗೆ ಸಂಪಾದಕರಾಗಿ ಕಾರ್ಯ ವಹಿಸಿಕೊಂಡ ಖರೆಯವರಿಗೆ ಇನ್ನೂ ಮೂರು ತಿಂಗಳ ಅವಧಿ ಇತ್ತು. ಆದರೆ ಪತ್ರಿಕೆಯ ಟ್ರಸ್ಟಿಗಳ ಮೇಲೆ ಸರಕಾರದ ಒತ್ತಡ ತಂತ್ರಗಳಿಂದಾಗಿ ಅವರು ಮೊದಲೇ ರಾಜೀನಾಮೆ ಕೊಡುತ್ತಿದ್ದಾರೆ ಎಂದು ಹೇಳಲಾಗಿದೆ.

ಕೆಲವು ದಿನಗಳ ಹಿಂದೆ ಇಪಿಡಬ್ಲ್ಯು ವಾರಪತ್ರಿಕೆಯ ಸಂಪಾದಕರು ಅದಾನಿ ಗುಂಪಿನ ಹಗರಣಗಳ ಬಗ್ಗೆ ಬರೆದಕ್ಕಾಗಿ ರಾಜೀನಾಮೆ ಕೊಡುವಂತೆ ಆ ಪತ್ರಿಕೆ ನಡೆಸುವ ಟ್ರಸ್ಟಿನ ಮೇಲೆ 'ಯಶಸ್ವಿ' ಒತ್ತಡ ತರಲಾಗಿತ್ತು. ಅದಕ್ಕೆ ಮೊದಲು 'ಇಂಡಿಯನ್ ಎಕ್ಸ್‌ಪ್ರೆಸ್‌ನ ಇನ್ನೊಬ್ಬ ಗೌರವಾನ್ವಿತ ಪತ್ರಕರ್ತರಾದ ಪ್ರವೀಣ ಸ್ವಾಮಿ, ಹಿಂದುಸ್ತಾನ್ ಟೈಮ್ಸ್ ಪತ್ರಿಕೆಯ ಸಂಪಾದಕರು, ಫಸ್ಟ್‌ಪೋಸ್ಟ್‌ನ ಒಬ್ಬ ಪತ್ರಕರ್ತ, ಔಟ್‌ಲುಕ್ ಪತ್ರಿಕೆಯ ಪತ್ರಕರ್ತ ಹೀಗೆ ಆಳರಸರ ಒತ್ತಡ ಎದುರಿಸಬೇಕಾಗಿ ಬಂದ ಪತ್ರಕರ್ತರ ದೊಡ್ಡ ಪಟ್ಟಿಯೇ ಇದೆ. ಆ ಪಟ್ಟಿ ಬೆಳೆಯುತ್ತಲೇ ಇದೆ.

ಲಂಡನ್‌ನಲ್ಲಿ ಕೆಂಬ್ರಿಜ್ ಅನಲಿಟಿಕ ಎಂಬ ಕಂಪನಿ ಸುಮರು 5 ಕೋಟಿ ಫೇಸ್‌ಬುಕ್ ಮಾಹಿತಿಗಳನ್ನು ದುರುಪಯೋಗಪಡಿಸಿಕೊಂಡು ಅಮೆರಿಕಾದಲ್ಲಿ ಟ್ರಂಪ್ ಗೆಲುವಿಗೆ ನೆರವಾಗಿದೆ ಎಂಬುದು ಬಯಲಾಗಿ ಈಗ ಬಹಳ ಚರ್ಚೆಯಲ್ಲಿದೆ. ದಿನ ಬೆಳಗಾದರೆ, ಮುಖ್ಯವಾಗಿ ಅಳುವ ಮಂದಿಯ ಫೇಕ್ ನ್ಯೂಸ್‌ಗಳನ್ನು ಕೇಳುತ್ತಿರುವ ಭಾರತದಲ್ಲೂ ಇದರ ಬಿಸಿ ಹತ್ತಿದೆ. ಈ ಬಗ್ಗೆ ಕಾಂಗ್ರೆಸ್–ಬಿಜೆಪಿ ನಡುವೆ ಜಟಾಪಟಿ ನಡೆಯುತ್ತಿದೆ. ಇತ್ತೀಚೆಗೆ ತ್ರಿಪುರಾದ ಚುನಾವಣೆಗಳಲ್ಲಿ ಬಿಜೆಪಿ ಕಲೆ ಹಾಕಿದ ಮತದಾರರ ಬೃಹತ್ ಮತಗಟ್ಟೆವಾರು ಮಾಹಿತಿ ಹಾಗೂ ಪ್ರತಿ ಮತದಾರರಿಗೆ ಅವರಿಗೆ ತಕ್ಕಂತಹ ಸಂದೇಶಗಳು ಫೇಸ್‌ಬುಕ್ ದುರುಪಯೋಗಪಡಿಸಿಕೊಂಡ ಟ್ರಂಪ್ ಚುನಾವಣಾ ಪ್ರಚಾರ ಮಾದರಿಯಂತವೇ ಎಂದು ಹೇಳಲಾಗಿದೆ.

ಈ ರೀತಿ ಖಾಸಗಿ ಮಾಹಿತಿಗಳ ದುರುಪಯೋಗದ ಬಗ್ಗೆ ಚರ್ಚೆ ನಡೆಯುತ್ತಿರುವಾಗಲೇ ನಮ್ಮ ದೇಶದ ಪ್ರಧಾನಿಗಳು 9ಲಕ್ಷ ಎನ್‌ಸಿಸಿ ಕೆಡೆಟ್‌ಗಳ ಮಾಹಿತಿಗಳನ್ನು ಕೇಳಿದ್ದಾರೆ!– ಸುದ್ದಿ



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಡೈಲಿ ಮೇಲ್

ವಿಶ್ವ ಆನಂದ ಸೂಚ್ಯಂಕದಲ್ಲಿ ಭಾರತ ಇನ್ನೂ 11 ಸ್ಥಾನ ಕೆಳಕ್ಕೆ

ವಿಶ್ವ ಸಂಸ್ಥೆಯ 'ತಾಳಿಕೆಯ ಅಭಿವೃದ್ಧಿ ಪರಿಹಾರಗಳ ಜಾಲ' (ಎಸ್‌ಡಿಎಸ್‌ಎನ್) 2012ರಿಂದ ಪ್ರತಿವರ್ಷ ಲೆಕ್ಕ ಹಾಕುತ್ತಿರುವ 'ವಿಶ್ವ ಆನಂದ ಸೂಚ್ಯಂಕ'(ಹ್ಯಾಪಿನೆಸ್ ಇಂಡೆಕ್ಸ್)ದಲ್ಲಿ ಭಾರತದ ಸ್ಥಾನ 156 ದೇಶಗಳಲ್ಲಿ 133 ನೇಯದ್ದು, ಕಳೆದ ವರ್ಷ 122 ನೇಯದಿತ್ತು. ಅಂದರೆ 11 ಸ್ಥಾನಗಳಷ್ಟು ಕೆಳಕ್ಕೆ ಜಾರಿದೆ.

ಎಸ್‌ಡಿಎಸ್‌ಎನ್ ಸಂಸ್ಥೆ ಜಿಡಿಪಿ,, ತಲಾ ಆದಾಯ, ಸಾಮಾಜಿಕ ಬೆಂಬಲ, ಆರೋಗ್ಯಕರ ಜೀವನ, ಸಾಮಾಜಿಕ ಸ್ವಾತಂತ್ರ್ಯ, ಉದಾರತೆ ಮತ್ತು ಭ್ರಷ್ಟಾಚಾರರಾಹಿತ್ಯತೆಯ ಪ್ರಮಾಣ ಇವುಗಳ ಆಧಾರದಲ್ಲಿ ಈ ಸೂಚ್ಯಂಕವನ್ನು ತಯಾರಿಸುತ್ತದೆ.

'ಹ್ಯಾಪಿ' ಜನಗಳೆಲ್ಲ ದೇಶ ಬಿಟ್ಟು ಹೋಗುತ್ತಿರುವಾಗ ಇನ್ನೇನಾಗಲು ಸಾಧ್ಯ ಎಂದು ಒಬ್ಬ ವ್ಯಂಗ್ಯಚಿತ್ರಕಾರರು ಈ ಸುದ್ದಿಗೆ ಪ್ರತಿಕ್ರಿಯಿಸುತ್ತ ಹೇಳಿದ್ದಾರೆ.



ಎಡಶಕ್ತಿಗಳು ನವ-ಉದಾರವಾದದ ಸೈದ್ಧಾಂತಿಕ ಬೇಲಿಯನ್ನು ಮುರಿಯಬೇಕು

ಭಾರತದಲ್ಲಿ, ಪ್ರಜಾಪ್ರಭುತ್ವದ ಎಪ್ಪತ್ತು ವರ್ಷಗಳ ನಂತರ, ಪ್ರಜಾಪ್ರಭುತ್ವದ ಫಲಿತಾಂಶಗಳನ್ನು ಹೊಡೆದು ಹಾಕುವ ಒಂದು ಪ್ರತಿಕ್ರಾಂತಿಯನ್ನು ಹರಿ ಬಿಡಲಾಗಿದೆ. ಈ ಪರಿಸ್ಥಿತಿಯಲ್ಲಿ, ಎಡ ಶಕ್ತಿಗಳು ಸಮರ್ಪಕವಾಗಿ ಮಧ್ಯೆ ಪ್ರವೇಶಿಸದಿದ್ದರೆ ದೇಶ ಒಳಗಿಂದಲೇ ಸ್ಫೋಟಗೊಳ್ಳುತ್ತದೆ. ಎಡಶಕ್ತಿಗಳು ಕಿರು ಉತ್ಪಾದಕರ ರಕ್ಷಣೆಗೆ ಧಾವಿಸಬೇಕು. ಆಹಾರದ ಹಕ್ಕು, ಸಾರ್ವಜನಿಕ ಶಿಕ್ಷಣ, ಸಾರ್ವಜನಿಕ ಆರೋಗ್ಯ, ಸಹಕಾರೀಕರಣ ಮುಂತಾದ ಪ್ರಶ್ನೆಗಳ ಮೇಲೆ ಮಧ್ಯಮ ವರ್ಗಗಳೂ ಸೇರಿದಂತೆ ವಿವಿಧ ಜನವಿಭಾಗಗಳನ್ನು ಅಣಿನೆರೆಸಬೇಕು ಇದು ನವ-ಉದಾರವಾದ ಹಾಕಿರುವ ಸೈದ್ಧಾಂತಿಕ ಮುಳ್ಳು ಬೇಲಿಯನ್ನು ಮುರಿದು ಹೊರಬಂದರೆ ಮಾತ್ರವೇ ಸಾಧ್ಯ. ಇದೀಗ ಎಡಶಕ್ತಿಗಳ ಮುಂದಿರುವ ಕರ್ತವ್ಯ ಎನ್ನುತ್ತಾರೆ ಖ್ಯಾತ ಅರ್ಥಶಾಸ್ತ್ರಜ್ಞ **ಪ್ರೊ. ಪ್ರಭಾತ್ ಪಟ್ನಾಯಕ್**. ಅವರು ಬೆಂಗಳೂರಿನ ಇಎಂಎಸ್ ಅಧ್ಯಯನ ಕೇಂದ್ರವು ಮಾರ್ಚ್ 18 ರಂದು ಆಯೋಜಿಸಿದ್ದ ಒಂದು ಉಪನ್ಯಾಸ ಕಾರ್ಯಕ್ರಮದಲ್ಲಿ **"ಸ್ವಾತಂತ್ರ್ಯದ 70 ವರ್ಷಗಳು : ಎಡ ಚಳವಳಿಯ ಮುಂದಿರುವ ಸವಾಲುಗಳು"** ಎಂಬ ವಿಷಯ ಕುರಿತು ಮಾತನಾಡಿದರು. ಇದು, ಅವರ ಮಾತುಗಳ ಸಾರಾಂಶ ಇಲ್ಲಿದೆ: **ಸಂಗ್ರಹ: ಕೆ.ಎಂ.ನಾಗರಾಜ್**

ಕೆಲವು ಚರಿತ್ರಕಾರರು ಸ್ವತಂತ್ರ ಭಾರತದ ಚರಿತ್ರೆಯು ಬಹಳ ಹಿಂದಿನಿಂದಲೂ ಸಾಗಿದ ಚರಿತ್ರೆಯ ಮುಂದುವರಿಕೆಯೇ ಎಂದು ಭಾವಿಸುತ್ತಾರೆ. ಈ ಅಭಿಪ್ರಾಯ ಸರಿಯಲ್ಲ. ಏಕೆಂದರೆ, ಕಳೆದೆರಡು ಶತಮಾನಗಳ ಕಾಲದಲ್ಲಿ, ಸಾವಿರಾರು ವರ್ಷಗಳ ಕಾಲ ಅಮಾನುಷ ಜಾತಿ ದಬ್ಬಾಳಿಕೆಗಳಿಂದ ಕೂಡಿದ್ದ ಮತ್ತು ಅಸಮಾನತೆಯೇ ಹಾಸು ಹೊಕ್ಕಾಗಿದ್ದ ಸಾಮಾಜಿಕ ವ್ಯವಸ್ಥೆಯ ವಿರುದ್ಧವಾಗಿ, ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ಒಂದು ಹೊಸ ಸಮಾಜ ನಿರ್ಮಾಣದ ಆಶಯಗಳುಳ್ಳ ಹೋರಾಟದ ಆರಂಭದಿಂದ, ದೇಶದ ಚರಿತ್ರೆ ಒಂದು ಭಿನ್ನ ಜಾಡು ಹಿಡಿಯಿತು.

ಎರಡು ಚಳುವಳಿಗಳ ವಾರಸುದಾರ ಎಡಪಂಥ

ಈ ರೀತಿ ಆಧುನಿಕ ಭಾರತವೊಂದು ಮೂಡಿ ಬರುವ ಒಂದು ಐತಿಹಾಸಿಕ ಸನ್ನಿವೇಶ ಸಾಧ್ಯವಾದದ್ದು ಎರಡು ಚಳುವಳಿಗಳಿಂದ–ಒಂದು, ವಾಹತುಶಾಹಿ–ವಿರೋಧಿ ಚಳುವಳಿ ಮತ್ತು ಎರಡು, ಸಾಮಾಜಿಕ ವಿಮೋಚನೆಯ ಚಳುವಳಿ. ಮೇಲ್ನೋಟಕ್ಕೆ ಇವೆರಡು ಚಳವಳಿಗಳು ಒಂದಕ್ಕೊಂದು ವಿರೋಧವಾಗಿರುವಂತೆ ಕಾಣುತ್ತವೆ. ಆ ಚಳವಳಿಯ ನಾಯಕರುಗಳೂ ಹಾಗೆಯೇ ಭಾವಿಸಿದ್ದರು. ಆದರೆ ತಳಮಟ್ಟದಲ್ಲಿ ಈ ಎರಡು ಚಳುವಳಿಗಳು ಒಂದಕ್ಕೊಂದು ಪೂರಕವಾಗಿದ್ದವು. ಸಮಾನ ನಾಗರಿಕತ್ವದ ಪರಿಕಲ್ಪನೆಯೊಂದಿಗೆ ಜಾತಿ ವಿನಾಶ ಚಳವಳಿಯಲ್ಲಿ ತೊಡಗಿದ್ದ ತಳ ಮಟ್ಟದ ಜಾತಿ ವಿನಾಶ ಹೋರಾಟಗಾರರಿಗೆ ಸ್ವಾತಂತ್ರ್ಯ ಚಳುವಳಿಯು ಮೂಡಿಸಿದ ಜಾಗೃತಿ ಸ್ವಾತಂತ್ರ್ಯದ ಹಂಬಲ ತಂದರೆ, ಸ್ವಾತಂತ್ರ್ಯ ಹೋರಾಟಗಾರರು ಸಾಮಾಜಿಕ ವಿಮೋಚನಾ ಹೋರಾಟಗಳಲ್ಲಿ ಅಡಕವಾಗಿದ್ದ ಸತ್ಯವನ್ನು ಮನಗಂಡು ಜಾತಿ ವಿನಾಶ ಹೋರಾಟಗಳಿಗೆ ಬೆಂಬಲ ಕೊಟ್ಟರು. ಈ ಎರಡೂ ಚಳವಳಿಗಳ ಆಶಯಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಹೋರಾಟ ಮುಂದುವರೆಸಿದ ಎಡ ಪಂಥೀಯರು ಈ ಎರಡೂ ಚಳವಳಿಗಳಿಗೂ ವಾರಸುದಾರರು.

ಕರಾಚಿ ನಿರ್ಣಯ–ಭಾರತದ ಸ್ವಾತಂತ್ರ್ಯ ಸನ್ನದ್ದು

1931ರಲ್ಲಿ, ಕರಾಚಿಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ, ಅಂಗೀಕರಿಸಿದ ನಿರ್ಣಯವು ಆಧುನಿಕ ಭಾರತದ ಸ್ವಾತಂತ್ರ್ಯದ ಸನ್ನದ್ದು ಎನ್ನಬಹುದು. ಅದು, ಆಧುನಿಕ ಭಾರತ ಹೇಗಿರಬೇಕು ಎಂಬುದರ ಒಂದು ರೂಪುರೇಷೆ ಒದಗಿಸಿತು. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು, ಶಾಸಕಾಂಗಗಳ ಆಯ್ಕೆ ಸಾರ್ವತ್ರಿಕ ವಯಸ್ಕ ಮತದಾನದ ಮೂಲಕ ನಡೆಯಬೇಕು, ಮೂಲಭೂತ ಹಕ್ಕುಗಳು, ಉಚಿತ ಮತ್ತು ಕಡ್ಡಾಯ ಶಿಕ್ಷಣ(ಈ ಹೊತ್ತಿನವರೆಗೂ ಇದು ಸಾಧನೆಯಾಗಿಲ್ಲ), ಮರಣದಂಡನೆ ಶಿಕ್ಷೆಯ ರದ್ದತಿದಿದು ಸಾಧಿತವಾಗಿದ್ದರೆ, ಅಫ್ಜಲ್ ಗುರು ಎಂಬ ಒಬ್ಬ ಕಾಶ್ಮೀರ ಮೂಲದ ವ್ಯಕ್ತಿಗೆ ವಿಧಿಸಿದ್ದ ಮರಣದಂಡನೆಯ ಶಿಕ್ಷೆ ರದ್ದಾಗಬೇಕೆಂದು ಕೋರಿದ ಜೆಎನ್‌ಯು ವಿದ್ಯಾರ್ಥಿಗಳ ಪ್ರತಿಭಟನೆಯನ್ನು ರಾಷ್ಟ್ರ ವಿರೋಧಿ ಎನ್ನಲು ಸಆಧ್ಯವಾಗುತ್ತಿತ್ತೇ?). ಆಧುನಿಕ ಭಾರತದ ಈ ಸಾಮಾಜಿಕ ಒಡಂಬಡಿಕೆಯ ಆಶಯಗಳ ಮುಂದುವರಿಕೆಯನ್ನು ಭಾರತದ ಸಂವಿಧಾನದಲ್ಲಿ ಕಾಣಬಹುದು.

ವಸಾಹತು ಆಳ್ವಿಕೆಯಲ್ಲಿ ದೇಶದ ಸಂಪನ್ಮೂಲ ಸಂಪತ್ತನ್ನು ಕೊಳ್ಳೆಹೊಡೆಯಲಾಗಿತ್ತು. ಮಹಾಕುಸಿತದ ಪರಿಣಾಮವಾಗಿ ಬಡವರು ಅನೇಕ ವರ್ಷಗಳ ಕಾಲ ಅಪಾರ ಕಷ್ಟ–ನಷ್ಟ ಅನುಭವಿಸಿದರು. ಜತೆಗೆ ಸಾವಿರಾರು ವರ್ಷಗಳ ಸಾಮಾಜಿಕ ಅಸಮಾನತೆಗಳು. ಇಂತಹ ಪರಿಸ್ಥಿತಿಯ ಹಿನ್ನೆಲೆಯಲ್ಲಿ, ಒಂದೆಡೆಯಲ್ಲಿ ಸಂವಿಧಾನ ನೀಡಿರುವ ರಾಜಕೀಯವಾಗಿ ಸಮಾನತೆ, ಇನ್ನೊಂದೆಡೆಯಲ್ಲಿ ಸಮಾಜದಲ್ಲಿ ಬೇರು ಬಿಟ್ಟಿರುವ ಆರ್ಥಿಕ–ಸಾಮಾಜಿಕ ಅಸಮಾನತೆಗಳು– ಈ ವೈರುಧ್ಯದ ಸನ್ನಿವೇಶವನ್ನು ದೇಶ ಪ್ರವೇಶಿಸುತ್ತಿದೆ ಎಂದರು ಡಾ। ಅಂಬೆ?ಡ್ಕರ್ ಅವರು ಸಂವಿಧಾನ ರಚನಾ ಸಭೆಯಲ್ಲಿ. ವಿವರಿಸಿದ್ದರು. ಎಡಪಂಥೀಯರದ್ದು ಈ ರಾಜಕೀಯ ಸಮಾನತೆ –ಆರ್ತಿಕ–ಸಾಮಾಜಿಕ ವಿಷಮತೆಯ ಬಗ್ಗೆ ತುಸು ಭಿನ್ನ ಕಣ್ಣೋಟ.

ಅಪೂರ್ಣ ಪ್ರಜಾಪ್ರಭುತ್ವ ಕ್ರಾಂತಿ

ಸಂವಿಧಾನದ ಆಶಯಗಳಿಗೆ ಬೆದರಿಕೆ ಬಂದದ್ದು ಸ್ವಾತಂತ್ರ್ಯಾನಂತರ, ದೇಶವು ಅನುಸರಿಸಿದ ಬಂಡವಾಳಶಾಹಿ ಅಭಿವೃದ್ಧಿ ಹಾದಿಯಲ್ಲೇ. ಬಂಡವಾಳಶಾಹಿಯಲ್ಲಿ ಅಂತರ್ಗತವಾಗಿರುವ ಕೆಲವು ಪ್ರವೃತ್ತಿಗಳು (ಅಂದರೆ, ಬಂಡವಾಳದ ಕೇಂದ್ರೀಕರಣ, ಪ್ರತಿಯೊಂದನ್ನೂ ಗರಿಷ್ಟ ಲಾಭ ಗಳಿಸುವ ಒಂದು ಸರಕಿನಂತೆ ನೋಡುವುದು, ಕಿರು ಉತ್ಪಾದಕರ ಹುಟ್ಟಡಗಿಸುವುದು ಇತ್ಯಾದಿ) ಸಾಮಾಜಿಕ ಸಂಬಂಧಗಳಿಗೆ ತೊಡಕಾದವು.

ಬಂಡವಾಳಶಾಹಿಯು, ಯುರೋಪಿನಲ್ಲಿ ಪ್ರಜಾಸತ್ತಾತ್ಮಕ ಕ್ರಾಂತಿಯ ಹರಿಕಾರನಾಗಿತ್ತು, ಅದರಿಂದಾಗಿ ಸಾಮಾನ್ಯ ಪ್ರಜೆಗಳಿಗೆ ನಾಗರಿಕ ಹಕ್ಕುಗಳು ಲಭಿಸಿದ್ದವು. ಈ ಬದಲಾವಣೆಯನ್ನೇ ಆಧುನಿಕತೆ ಎಂದು ಕರೆಯುವುದು. ಆದರೆ, ಭಾರತದಲ್ಲಿ ನಡೆದ ವಿದ್ಯಮಾನಗಳು ಇದಕ್ಕೆ ವ್ಯತಿರಿಕ್ತವಾಗಿದ್ದವು. ಈ ಪ್ರಶ್ನೆಗೆ ಉತ್ತರವನ್ನು ಲೆನಿನ್ ನೂರು ವರ್ಷಗಳ ಹಿಂದೆಯೇ ಒದಗಿದ್ದರು. ಊಳಿಗಮಾನ್ಯ ಪದ್ಧತಿಯಿಂದ ಬಂಡವಾಳಶಾಹಿಗೆ ತಡವಾಗಿ ಬಂದ ದೇಶಗಳಲ್ಲಿ (ರಷ್ಯಾ) ಬಂಡವಾಳಶಾಹಿಯು, ಯೂರೊಪಿನಲ್ಲಿ ಆಗಿದ್ದಂತೆ, ಊಳಿಗಮಾನ್ಯ ವ್ಯವಸ್ಥೆಗೆ ಮಾರಣಾಂತಿಕ ಪೆಟ್ಟು ಕೊಡಲಿಲ್ಲ. ಬಂಡವಾಳಶಾಹಿ ಪ್ರಜಾಸತ್ತಾತ್ಮಕ ಕ್ರಾಂತಿಯು ಇಂಗ್ಲೆಂಡಿನಲ್ಲಿ ರಾಜಪ್ರಭುತ್ವವನ್ನು ಕೊನೆಗೊಳಿಸಿತು. ಫ್ರಾನ್ಸಿನಲ್ಲಿ ಭೂ ಸುಧಾರಣೆಗಳನ್ನು ಜಾರಿಗೆ ತಂದಿತು ಮತ್ತು ಒಟ್ಟಾರೆಯಾಗಿ ಯೂರೊಪಿನಲ್ಲಿ ಊಳಿಗಮಾನ್ಯ ಪದ್ಧತಿಯನ್ನು ನಾಶಮಾಡಿತ್ತು.

ಇ ಎಂ ಎಸ್ ನಂಬೂದ್ರಿಪಾಡ್, ಭಾರತದಲ್ಲಿ ಊಳಿಗಮಾನ್ಯ ಪದ್ಧತಿಯು ಜಾತಿ ಪದ್ಧತಿಯ ಮೇಲೆ ನಿಂತಿದೆ ಎಂದು ವ್ಯಾಖ್ಯಾನಿಸಿದ್ದರು. ಭಾರತದ ಬಂಡವಾಳಶಾಹಿಯು, ಊಳಿಗಮಾನ್ಯ ವ್ಯವಸ್ಥೆಗೆ ಮಾರಣಾಂತಿಕ ಪೆಟ್ಟು ಕೊಡಲು ಭಯಪಟ್ಟಿತು. ಏಕೆಂದರೆ, ಆಗ ತಾನೆ ಉದಯವಾಗುತ್ತಿದ್ದ ಶ್ರಮಜೀವಿ ವರ್ಗವು ತನಗೂ ಇದೇ ರೀತಿಯ ಪೆಟ್ಟು ಕೊಟ್ಟು ತನ್ನ ಆಸ್ತಿ–ಪಾಸ್ತಿಗಳ ಸಂಬಂಧವನ್ನು ಹಾಳುಗೆಡವಬಹುದು ಎಂಬ ಭಯದ ಮೇಲೆ, ಅದು, ಊಳಿಗಮಾನ್ಯ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡಿತು. ಹಾಗಾಗಿ, ಪ್ರಜಾಸತ್ತಾತ್ಮಕ ಕ್ರಾಂತಿ ಭಾರತದಲ್ಲಿ ಪೂರ್ಣಗೊಳ್ಳಲಿಲ್ಲ. ಭೂಸುಧಾರಣೆಗಳು ಆಗಲಿಲ್ಲ. ಶೋಷಕ ಭೂಸಂಬಂಧಗಳನ್ನು ಬದಲಿಸಲಿಲ್ಲ. ಜಾತಿವ್ಯವಸ್ಥೆಗೆ ಏಟು ಕೊಡಲಿಲ್ಲ. ಬಹಳ ದೊಡ್ಡ ಜಮಿನ್ದಾರರು ಬಂಡವಾಳಶಾಹಿ ಜಮಿನ್ದಾರರಾಗಿ ಪರಿವರ್ತನೆಯಾದರು. ಆದ್ದರಿಂದ, ಬಾಕಿ ಉಳಿದಿರುವ ಊಳಿಗಮಾನ್ಯ–ವಿರೋಧಿ ಹೋರಾಟವನ್ನು (ಅಂದರೆ, ಪ್ರಜಾಸತ್ತಾತ್ಮಕ ಕ್ರಾಂತಿಯನ್ನು) ಕಾರ್ಮಿಕರು ಮತ್ತು ರೈತರು ಜೊತೆಗೂಡಿ ಮುಂದೊಯ್ಯ ಬೇಕಾಗಿತ್ತು.

ಬಂಡವಾಳದ ಮೇಲೆ ನಿಯಂತ್ರಣದ ಪ್ರಯತ್ನ

ದೇಶದ ಅಭಿವೃದ್ಧಿಗಾಗಿ ಬಂಡವಾಳಶಾಹಿ ಮಾದರಿಯನ್ನು ಅಳವಡಿಸಿಕೊಂಡಾಗ, ಬಂಡವಾಳಶಾಹಿಯಲ್ಲಿ ಅಂತರ್ಗತವಾಗಿರುವ ಕೆಲವು ಪ್ರವೃತ್ತಿಗಳು ಸಾಮಾಜಿಕ ಸಂಬಂಧಗಳಿಗೆ ಅಡ್ಡಿಯಾಗದಂತೆ ಅದನ್ನು ನಿಯಂತ್ರಿಸಬಹುದು ಎಂದು ನೆಹರೂ ಭಾವಿಸಿದ್ದರು. ರೈತರೂ ಸೇರಿದಂತೆ ಕಿರು ಉತ್ಪಾದಕರಿಗೆ ಬಂಡವಾಳಶಾಹಿಯು ಉಂಟುಮಾಡುವ ಅಪಾಯವನ್ನು ತಡೆಗಟ್ಟುವ ಸಲುವಾಗಿ ಸರ್ಕಾರವು ಹಲವಾರು ಕ್ರಮಗಳನ್ನು ಕೈಗೊಂಡಿತು– ಆಮದುಗಳಿಂದ ರಕ್ಷಣೆ, ರೈತರಿಂದ ನೇರವಾಗಿ 22 ಆಹಾರ ಧಾನ್ಯಗಳ ಖರೀದಿ, ರೈತ ಬೇಸಾಯಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಬೃಹತ್ ಅಣೆಕಟ್ಟುಗಳ ನಿರ್ಮಾಣಕ್ಕಾಗಿ ಭಾರಿ ಮೊತ್ತದ ಹಣ ಹೂಡಿಕೆ, ಸಬ್ಸಿಡಿಯ ಮೂಲಕ ಅಗ್ಗದ ಬೆಲೆಯಲ್ಲಿ ಬೀಜ; ರಸ ಗೊಬ್ಬರ; ಕಡಿಮೆ ಬಡ್ಡಿಯಲ್ಲಿ ಬ್ಯಾಂಕ್ ಸಾಲ; ಸಾಂಬಾರ ಪದಾರ್ಥಗಳು, ಕಾಫಿ, ಟೀ, ರಬ್ಬರ್, ರೇಷ್ಮೆ, ತೆಂಗು ಮುಂತಾದ ವಾಣಿಜ್ಯ ಬೆಳೆಗಳ ಮಾರಾಟಕ್ಕಾಗಿ ಪ್ರತ್ಯೇಕ ಮಂಡಳಿ(ಬೋರ್ಡ್)ಗಳ ಸ್ಥಾಪನೆ; ಕೈ ಮಗ್ಗ ಕ್ಷೇತ್ರಕ್ಕೆ ರಕ್ಷಣೆ (ಜವಳಿ ಮಿಲ್‌ಗಳ ಪೈಪೋಟಿಯಿಂದ ರಕ್ಷಣೆ); ಸರ್ಕಾರದಿಂದಲೇ ಸಂಶೋಧನಾ ಸಂಸ್ಥೆಗಳ ಸ್ಥಾಪನೆ ಮತ್ತು ಅವುಗಳ ಸೇವೆಯ ವಿಸ್ತರಣೆ – ಹೀಗೆ ಹಲವಾರು ಕ್ರಮಗಳನ್ನು ಸರ್ಕಾರ ಕೈಗೊಂಡಿತು. ಆದರೆ, ಬಂಡವಾಳಶಾಹಿ ಪ್ರವೃತ್ತಿಗಳನ್ನು ನಿಯಂತ್ರಿಸಬಹುದೆಂಬ ನಂಬಿಕೆ ಹುಸಿಯಾಗಿತ್ತು. ಅಸಮಾನತೆ ಹೆಚ್ಚುತ್ತಿರುವುದನ್ನು ಮನಗಂಡ ನೆಹರೂ, 1959ರಲ್ಲಿ ಅದರ ಕುರಿತು ಅಧ್ಯಯನ ಮಾಡಲು ಅರ್ಥಶಾಸ್ತ್ರಜ್ಞ ಮಹಲನೊಬಿಸ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದರು ಎಂಬುದನನು ಈಗ ನೆನಪಿಸಕೊಳ್ಳಬಹುದು.

ಉದಾರೀಕರಣ–ಜಾಗತೀಕರಣದ ಹಾವಳಿ

ಬಂಡವಾಳಶಾಹಿಯಲ್ಲಿ ಅಂತರ್ಗತವಾಗಿರುವ ಪ್ರವೃತ್ತಿಗಳು ನವ–ಉದಾರಿ ಜಮಾನದಲ್ಲಿ ಹೆಚ್ಚು ಪ್ರಖರವಾಗಿ ವ್ಯಕ್ತಗೊಳ್ಳುತ್ತಾ ಹೋದವು. ಯಾವುದೇ ಅಡೆ ತಡೆಗಳಿಲ್ಲದೆ ದೇಶ ದೇಶಗಳ ನಡುವೆ ಬಂಡವಾಳ ಮುಕ್ತವಾಗಿ ಹರಿಯುತೊಡಗಿತು. ಅಂದರೆ, ಬಂಡವಾಳದ ಮೇಲೆ ಪ್ರಭುತ್ವದ ಹಿಡಿತ ಇಲ್ಲದಂತಾಯಿತು. ಏಕೆಂದರೆ, ಪ್ರಭುತ್ವದ ಅಧಿಕಾರ ತನ್ನ ಗಡಿಗಳಿಗೆ ಸೀಮಿತವಾಗಿರುತ್ತದೆ.ಆದರೆ ಹಣಕಾಸು ಬಂಡವಾಳ ರಾಷ್ಟ್ರೀಯ ಗಡಿಗಳ ಹಂಗಿಗೊಳಪಡದ ಅಂತರ್ರಾಷ್ಟ್ರೀಯ ಸ್ವರೂಪ ಪಡೆದಿದೆ. ಹಾಗಾಗಿ, ರಾಷ್ಟ್ರೀಯ ಪ್ರಭುತ್ವವು ಬಂಡವಾಳದ ಮೇಲೆ ನಿಯಂತ್ರಣ ಮುಂದುವರೆಸುವುದು ಸಾಧ್ಯವಿರಲಿಲ್ಲ. ಜಾಗತೀಕರಣದ ಮಹಿಮೆ ಅಂದರೆ ಇದೇ. ಜಾಗತೀಕರಣದ ಆಳ್ವಿಕೆಯಲ್ಲಿ, ಬಂಡವಾಳದ ಒತ್ತಡಕ್ಕೆ ಮಣಿದ ಪ್ರಭುತ್ವವು ಕಿರು ಉತ್ಪಾದಕರಿಗೆ ಒದಗಿಸಿದ್ದ ಎಲ್ಲಾ ಸೌಲಭ್ಯ ಕ್ರಮಗಳನ್ನು ಕಡಿಮೆ ಕಡಿಮೆ ಮಾಡುತ್ತಾ ಹೋಯಿತು – ಆಮದುಗಳು ಹೆಚ್ಚಿದವು, ರೈತರಿಂದ ಧಾನ್ಯಗಳ ನೇರ ಖರೀದಿಯು ಘೋಷಣೆಗಷ್ಟೇ ಸೀಮಿತಗೊಂಡಿತು, ನೀರಾವರಿ ಅಂದರೆ ಮಾತಿನಲ್ಲೇ ನದಿಗಳ ಜೋಡಣೆ, ದುಬಾರಿ ಬೆಲೆಗಳಲ್ಲಿ ಕಳಪೆ ಬೀಜ,, ರಸಗೊಬ್ಬರ ಕೊಳ್ಳಲಾರದಷ್ಟು ದುಬಾರಿಯಾಯಿತು, ರೈತರಿಗೆಂದಿದ್ದ ಆದ್ಯತೆಯ ಬ್ಯಾಂಕ್ ಸಾಲವು ಕೃಷಿ ಸಂಬಂಧಿತ ಕಂಪನಿಗಳ ಪಾಲಾಯಿತು, ವಾಣಿಜ್ಯ ಬೆಳೆಗಳ ಮಾರಾಟಕ್ಕಾಗಿಯೇ ಸ್ಥಾಪನೆಯಾಗಿದ್ದ ಬೋರ್ಡ್‌ಗಳು ನಾಮಕಾವಾಸ್ಥೆಯಾದವು. ಮಾರುಕಟ್ಟೆಯ ಹೊಡೆತಕ್ಕೆ ಕೈ ಮಗ್ಗಗಳು ತತ್ತರಿಸಿದವು, ಕೃಷಿ ಸಂಶೋಧನೆಯು ಮೊನ್ಸಾಂಟೊ ದಂತಹ ದೈತ್ಯ ಎಂಎನ್ಸಿಗಳ ವ್ಯವಹಾರವಾಯಿತು ಮತ್ತು ಅವುಗಳ ಕಾರ್ಯಾಚರಣೆ ವಿಸ್ತರಣೆಯಾಯಿತು. ಈ ಎಲ್ಲಾ ಬದಲಾವಣೆಗಳ ನೇರ ಪರಿಣಾಮವಾಗಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಜಾಗತೀಕರಣ ನೀತಿಗಳಿಂದಾಗಿ, ಕಳೆದ ಮೂವತ್ತು ವರ್ಷಗಳಲ್ಲಿ ಮೂರು ಲಕ್ಷಕ್ಕೂ ಅಧಿಕ ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆದಿಮ ಬಂಡವಾಳ ಶೇಖರಣೆ ಮತ್ತು ರೈತರ ಆತ್ಮಹತ್ಯೆ

ಜಾಗತೀಕರಣದ ಆಳ್ವಿಕೆಯಲ್ಲಿ, ಕಿರು ಉತ್ಪಾದಕರನ್ನು ವಿನಾಶದ ಅಂಚಿಗೆ ತಳ್ಳಿ ತನ್ನ ಗಾತ್ರ ಮತ್ತು ಪ್ರಭಾವವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ತೊಡಗುವ ಬಂಡವಾಳ ಶೇಖರಣೆಗೆ (ಬಂಡವಾಳದ ಆದಿಮ ಸಂಚಯ) ಎರಡು ಆಯಾಮಗಳಿವೆ. ಒಂದು, ಹರಿವಿನ ಆಯಾಮ – ರೈತರು, ಕೈಮಗ್ಗ ನೇಕಾರರು, ಕುಶಲ ಕರ್ಮಿಗಳು ಮತ್ತು ಮೀನುಗಾರರು ಮುಂತಾದ ಕಿರು ಉತ್ಪಾದಕರ ವರಮಾನಗಳನ್ನು ಕುಗ್ಗಿಸುವದು;. ಎರಡು, ದಾಸ್ತಾನು ಆಯಾಮ – ಅಂದರೆ ಅಭಿವೃದ್ಧಿಯ ಹೆಸರಿನಲ್ಲಿ, ಅತಿ ಕಡಿಮೆ ಪರಿಹಾರ ಕೊಟ್ಟು ಕೃಷಿ–ಭೂಮಿ ವಶಪಡಿಸಿಕೊಳ್ಳುವುದು ಮತ್ತು ರೂತರಿಗೆ ಮಾತ್ರವಲ್ಲ ಇದನ್ನು ಅವಲಂಬಿಸಿರುವ ಕೃಷಿ ಕೂಲಿಕಾರರಿಗೆ ಮತ್ತು ಇತರರಿಗೆ ಈ ಕೃಷಿ–ಭೂಮಿಯ ಮೇಲಿರುವ ವಾಡಿಕೆಯ ಹಕ್ಕನ್ನು ವಂಚಿಸುವುದು.

ನಮ್ಮ ಮುಂದೆ ಒಂದು ಪ್ರಶ್ನೆ ಈಗ ಎದುರಾಗುತ್ತದೆ. ಆಧುನಿಕತೆಯ ಪರವಾಗಿರುವವರು ಈ ಬಗ್ಗೆ ಕಣ್ಣೀರು ಸುರಿಸುವುದು ಸರಿಯೆ? ಇಲ್ಲಿರುವ ಪರಿಸ್ಥಿತಿಯಲ್ಲಿ ಒಂದು ಅತಿ ಮುಖ್ಯವಾದ ವ್ಯತ್ಯಾಸವನ್ನು ಮನಗಾಣಬೇಕಾಗುತ್ತದೆ. ಪಶ್ಚಿಮದ ದೇಶಗಳಲ್ಲಿ ಭೂಮಿಯಿಂದ ಹೊರಹಾಕಲ್ಪಟ್ಟವರಿಗೆ ಕೈಗಾರಿಕೆಗಳಲ್ಲಿ ಉದ್ಯೋಗ ದೊರಕಿತ್ತು – ಇಂತಹ ಸುಮಾರು ಐದು ಕೋಟಿ ಮಂದಿ, ಅಮೆರಿಕಾ; ಕೆನಡಾ; ಆಸ್ಟೆಲಿಯಾ; ನ್ಯೂಜಿಲ್ಯಾಂಡ್ ಮುಂತಾದ ದೇಶಗಳ ಬಿಳಿಯರ ವಲಸೆಪ್ರದೇಶಗಳಲ್ಲಿ ಉದ್ಯೋಗ ಪಡೆದರು. ಆದರೆ ಇಂದಿನ ಭಾರತದಲ್ಲಿ, ಭೂಮಿಯಿಂದ ಹೊರಹಾಕಲ್ಪಟ್ಟವರಿಗೆ ಕೈಗಾರಿಕೆಗಳಲ್ಲಿ ಕೆಲಸ ಸಿಗುತ್ತದೆಂದು ಊಹಿಸಲೂ ಆಗದು. ಬಂಡವಾಳಶಾಹಿ ವ್ಯವಸ್ಥೆಯು, 1947ರಿಂದ ಇಲ್ಲಿಯವರೆಗೆ, ಹಳ್ಳಿಯಿಂದ ಪಟ್ಟಣಗಳಿಗೆ ವಲಸೆ ಹೋದ ಸುಮಾರು 40 ಕೋಟಿ ಮಂದಿಗೆ ಸರಿಯಾದ ಕೆಲಸ ಕೊಟ್ಟಿಲ್ಲ. ಅವರ ಮತ್ತು ಹಳ್ಳಿಗಳಲ್ಲೆ ಉಳಿದವರ ಪರಿಸ್ಥಿತಿ ಹೀನಾಯವಾಗಿದೆ. ಈ ಬದಲಾವಣೆಗಳ ಪರಿಣಾಮವಾಗಿ, ಬಡತನ ಹೆಚ್ಚುತ್ತಿದೆ. ಅಸಮಾನತೆಯೂ ಬೆಳೆಯುತ್ತಿದೆ.ಉದ್ಯೋಗವಿಲ್ಲದವರ ಮೀಸಲು ಪಡೆಯ ಪ್ರಮಾಣ ಹೆಚ್ಚಿರುವುದರಿಂದ ಉದ್ಯೋಗವಿದ್ದವರ ಆದಾಯಗಳ ಮೇಲೂ ದುಷ್ಪರಿಣಾಮದಿಂದಾಗಿ ಟ್ರೇಡ್ ಯೂನಿಯನ್ ಚಳವಳಿ ದುರ್ಬಲಗೊಳ್ಳುತ್ತಿದೆ.

ಆದರೆ, ಶ್ರಮ ಉತ್ಪಾದಕತೆ ಹೆಚ್ಚುತ್ತಿದೆ ಮತ್ತು ಅದರಿಂದ ಬಂಡವಾಳಿಗರ ಮಿಗುತಾಯದ ಪಾಲೂ ಹೆಚ್ಚಾಗುತ್ತಿದೆ. ಜನ ಸಂಖ್ಯೆಯ ಒಂದು ದೊಡ್ಡ ವಿಭಾಗವು ತಾತ್ಕಾಲಿಕ ಉದ್ಯೋಗ ಮತ್ತು ಅರೆ ಉದ್ಯೋಗ ಮತ್ತು ಕಿರು ಉದ್ದಿಮೆದಾರಿಕೆಯ ಹೆಸರಲ್ಲಿ ಮರೆಮಾಚಿದ ನಿರುದ್ಯೋಗ ದೊಡ್ಡ ಪ್ರಮಾಣದಲ್ಲಿ ಸಮಾಜವನ್ನು

ಪುಟ 14 ಕ್ಕೆ

ಮೊತ್ತಮೊದಲ 'ಲಿಂಚಿಂಗ್ ತೀರ್ಪು: ಬಿಜೆಪಿ ಮುಖಂಡ ಸೇರಿದಂತೆ 11 'ಗೋರಕ್ಷ'ರಿಗೆ ಜೀವಾವಧಿ ಶಿಕ್ಷೆ

ಝಾರ್ಖಂಡ್ ನ್ಯಾಯಾಲಯವೊಂದು ದೇಶದಲ್ಲಿ ಮೊತ್ತಮೊದಲ ಬಾರಿಗೆ ಸ್ವಯಂಘೋಷಿತ 'ಗೋರಕ್ಷಕ'ರಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ.

ದೇಶದಲ್ಲಿ ಕೇಂದ್ರ ಸರಕಾರ ತಂದ ಜಾನುವಾರ ವ್ಯಾಪಾರ ತಿದ್ದುಪಡಿ ಅಧಿಸೂಚನೆಯ ಹಿನ್ನೆಲೆಯಲ್ಲಿ ದೇಶಾದ್ಯಂತ ಹರಡಿದ 'ಗೋರಕ್ಷಕ'ರ ಹಾವಳಿಗಳ ವಿರುದ್ಧ ಆಕ್ರೋಶ ತೀವ್ರಗೊಂಡ ಹಿನ್ನೆಲೆಯಲ್ಲಿ ಪ್ರಧಾನಿಗಳು ತಮ್ಮ ದಿವ್ಯಮೌನ ಮುರಿದು ಗೋರಕ್ಷಣೆಯ ಹೆಸರಿನಲ್ಲಿ ಕಾನೂನು ಕೈಗೆ ತಗೊಳ್ಳುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಈ 'ಎಚ್ಚರಿಕೆ'ಯ ಕೆಲವೇ ಗಂಟೆಗಳೊಳಗೇ ಝಾರ್ಖಂಡ್‌ನ ರಾಂಗಢ್‌ನಲ್ಲಿ 'ಗೋರಕ್ಷ' ಪಡೆಯೊಂದು 55ವರ್ಷದ ಮಾಂಸದ ವ್ಯಾಪಾರಿ ಅಲಿಮುದ್ದೀನ್ ಅನ್ಸಾರಿಯನ್ನು ವ್ಯಾನನನು ತಡೆದು ನಿಲ್ಲಿಸಿ' ಹೊರಗೆಳೆದು ಚಚ್ಚಿ ಸಾಯಿಸಿತು. ವಾಹನಕ್ಕೆ ಬೆಂಕಿಯಿಟ್ಟಿತು. ಯಥಾಪ್ರಕಾರ ಆತ ಗೋಮಾಂಸ ಸಾಗಿಸುತ್ತಿದ್ದ ಎಂಬುದು ನೆಪವಾಗಿತ್ತು.

ಇಂತಹ ಹಲವು ಘಟನೆಗಳನ್ನು ಕಂಡಿದ್ದ ಈ ರಾಜ್ಯದಲ್ಲಿ ಈ ಭೀಕರ ಕುಕೃತ್ಯಕ್ಕೆ ವ್ಯಕ್ತಗೊಂಡ ಆಕ್ರೋಶದ ಹಿನ್ನೆಲೆಯಲ್ಲಿ ರಾಜ್ಯದ ಹೈಕೋರ್ಟ್ ಅಡಿಶನಲ್ ಜಿಲ್ಲಾ ನ್ಯಾಯಾಧೀಶರ ನೇತೃತ್ವದಲ್ಲಿ ಒಂದು ವಿಶೇಷ ಫಾಸ್ಟ್-ಟ್ರಾಕ್ ಕೋರ್ಟನ್ನು ನೇಮಿಸಿ ದಿನ-ದಿನ ವಿಚಾರಣೆ ಮಾಡುವಂತೆ ಹೇಳಿತು. ತ್ವರಿತಗತಿಯಲ್ಲಿ ದಕ್ಷತೆಯಿಂದ ಸಾಗಿದ ವಿಚಾರಣೆ ಇದೊಂದು ಪೂರ್ವಯೋಜಿತ ಕೊಲೆ ಎಂಬ ತೀರ್ಮಾನಕ್ಕೆ ಬಂದು 12 ಮಂದಿ ಅಪರಾಧಿಗಳೆಂದು ತೀರ್ಪು ನೀಡಿತು. ಅವರಲ್ಲಿ 11 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿತು. ಹನ್ನೆರಡನೇ ಅಪರಾಧಿ ಅಪ್ರಾಪ್ತ ವಯಸ್ಕ ನಾದ್ದರಿಂದ ಇನ್ನೂ ಶಿಕ್ಷೆಯ ಬಗ್ಗೆ ತಿಳಿಸಿಲ್ಲ.

ಜೀವಾವಧಿ ಶಿಕ್ಷೆಗೊಳಗಾದವರಲ್ಲಿ ಒಬ್ಬ ಬಿಜೆಪಿ ಜಿಲ್ಲಾ ಮಾಧ್ಯಮದ ಸೆಲ್‌ನ ಮುಖ್ಯಸ್ಥ ನಿತ್ಯಾನಂದ ಮಹತೊ ಹಾಗು ಕನಿಷ್ಟ ಮೂರು ಮಂದಿ ಸ್ಥಳೀಯ ಗೋರಕ್ಷಕ ಸಮಿತಿಯ ಸದಸ್ಯರುಗಳು.

ಅನ್ಸಾರಿಯ ಕುಟುಂಬಕ್ಕೆ ಸಾಕಷ್ಟು ಪರಿಹಾರ ಒದಗಿಸುವಂತೆ ಜಿಲ್ಲಾ ಕಾನೂನು ಅಧಿಕಾರಿಗಳಿಗೆ ನ್ಯಾಯಾಲಯ ಪ್ರತ್ಯೇಕ ನಿರ್ದೇಶನವನ್ನೂ ನೀಡಿದೆ.

ಈಗ ಅಪರಾಧಿಗಳೆಂದು ಘೋಷಿತರಾದವರ ವಕೀಲರು ನಿರೀಕ್ಷೆಯಂತೆ ಈ ತೀರ್ಪಿನ ವಿರುದ್ಧ ಹೈಕೋರ್ಟಿಗೆ ಅಪೀಲು ಹೋಗುವುದಾಗಿ ತಿಳಿಸಿದ್ದಾರೆ. ದೇಶದಲ್ಲಿ ಈಗ ಉಂಟಾಗಿರುವ ವಾತಾವರಣದಲ್ಲಿ ತೀರ್ಪು ತಮ್ಮ ಪರವಾಗಿ ಬರಬಹುದೆಂಬ ಅವರ ನಿರೀಕ್ಷೆ ಈಡೇರಿಲ್ಲ. ಆದರೆ ಹೈಕೋರ್ಟಿನಲ್ಲಿ ಈಡೇರಬಹುದು, ಅಥವ ಅದುವರೆಗೆ ಶಿಕ್ಷೆ ಜಾರಿಯಾಗದಂತೆ ಮಾಡಬಹುದು ಎಂಬ ನಿರೀಕ್ಷೆ ಅವರದ್ದು.

ಶಿಕ್ಷೆಯನ್ನು ಪ್ರಕಟಿಸುವ ವೇಳೆಗೆ ನ್ಯಾಯಾಲಯದ ಹೊರಗೆ ಅಪರಾಧಿಗಳ ಪರವಾದ ಜನಜಂಗುಳಿ 'ಭಾರತ್ ಮಾತಾಕೀ ಜೈ' ಎಂದು ಕೂಗುತ್ತಿತ್ತು.

ಕೆಲವು ದಿನಗಳ ಹಿಂದೆ ತ್ರಿಪುರಾದಲ್ಲಿ ಲೆನಿನ್ ಪ್ರತಿಮೆಯನ್ನು ಕೆಡವುತ್ತಿರುವಾಗಲೂ ಇದೇ ಘೋಷಣೆ ಕೇಳಬಂದಿತ್ತು, ಅದಕ್ಕೂ ಮೊದಲು ಜಮ್ಮುನಲ್ಲಿ 8 ವರ್ಷದ ಬಾಲಿಕೆಯ ಮೇಲೆ ಅತ್ಯಾಚಾರ ನಡೆಸಿ ಸಾಯಿಸಿ ಆರೋಪಕ್ಕೆ ಒಳಗಾಗಿರುವ ಇಬ್ಬರು ಪೋಲಿಸ್ ಸಿಬ್ಬಂದಿ ಮತ್ತು ಇತರರ ಪರವಾಗಿ ನಡೆದ ಹಿಂದುತ್ವ ಮಂದಿಗಳ ಪ್ರತಿಭಟನೆಯಲ್ಲೂ ಇದೇ ಘೋಷಣೆ ಕೇಳಬಂದಿತ್ತು ಎಂಬುದನ್ನು ನೆನಪಿಸಿಕೊಳ್ಳಬಹುದು.

ಕೋಮುಗಲಭೆಯಲ್ಲಿ ಬುಕ್ ಆದ ಮಗನ ಬಗ್ಗೆ 'ಹೆಮ್ಮೆ' ವ್ಯಕ್ತಪಡಿಸಿದ ಕೇಂದ್ರ ಮಂತ್ರಿ

ಇತ್ತೀಚೆಗೆ ಬಿಹಾರದ ಅರಾರಿಯಾ ಲೋಕಸಭಾ ಉಪಚುನಾವಣೆಯಲ್ಲಿ ಆರ್‌ಜೆಡಿ ಅಭ್ಯರ್ಥಿಯ ಗೆಲುವಿನ ಹಿನ್ನೆಲೆಯಲ್ಲಿ ಅರಾರಿಯದಲ್ಲಿ ರಾಷ್ಟ್ರ-ವಿರೋಧಿ, ಪಾಕಿಸ್ತಾನ-ಪರ ಘೋಷಣೆ ಕೂಗಿದರೆಂಬ ಗುಲ್ಲೆಬ್ಬಿಸಿ ಹಿಂಸಾಚಾರ ನಡೆಸುವ ಪ್ರಯತ್ನ ನಡೆಯಿತು. ಆದರೆ ನಾಗರಿಕರ ಮಧ್ಯಪ್ರವೇಶದಿಂದ ಅದು ಹರಡಲಿಲ್ಲ. ಆದರೆ ಪಕ್ಕದ ಭಾಗಲ್ಪುರದಲ್ಲಿ ಬಿಜೆಪಿ-ಆರೆಸ್ಸೆಸ್- ಭಜರಂಗ್ ದಳ್ ಹಿಂದೂ ಹೊಸವರ್ಷದ ಆಚರಣೆಯ ಹೆಸರಲ್ಲಿ ಮುಸ್ಲಿಂ ಬಾಹುಳ್ಯದ ಪ್ರದೇಶಗಳಲ್ಲಿ ಪೋಲೀಸ್ ಅನುಮತಿಯಿಲ್ಲದೆ ಉದ್ರೇಕಕಾರಿ ರೀತಿಯಲ್ಲಿ ನಡೆಸಿದ ಮೆರವಣಿಗೆ ತೀವ್ರ ಕಲ್ಲು ತೂರಾಟಕ್ಕೆ ಕಾರಣವಾಯಿತು. ಇದರ ನೇತೃತ್ವ ವಹಿಸಿದ್ದವರು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯಮಂತ್ರಿ ಅಶ್ವಿನಿ ಚೌಬೆಯವರ ಮಗ ಅರಿಜಿತ್ ಚೌಬೆ.

ಈಗ ಈತ ಮತ್ತು ಇತರ 20 ಮಂದಿಯ ಮೇಲೆ ಮೇಲೆ ಎರಡು ಕೇಸುಗಳನ್ನು ಹಾಕಲಾಗಿದೆ. ಒಂದು, ಅನುಮತಿಯಿಲ್ಲದೆ ಮೆರವಣಿಗೆ ನಡೆಸಿದ್ದು ಮತ್ತು ಇನ್ನೊಂದು ಕೋಮುವಾದಿ ಉದ್ರೇಕವನ್ನು ಉಂಟುಮಾಡುತ್ತ ಶಸ್ತ್ರಾಸ್ತ್ರಗಳನ್ನು ಪ್ರದರ್ಶಿಸುತ್ತ ರಸ್ತೆಯಲ್ಲಿ ಅಡ್ಡಾಡಿದ್ದು.

ಆದರೆ ಮೋದಿ ಸಂಪುಟದ ಮಂತ್ರಿಗಳು ತನ್ನ ಮಗನ ಕೃತ್ಯವನ್ನು ಸಮರ್ಥಿಸಿಕೊಂಡಿದ್ದಾರೆ. 'ಭಾರತಮಾತೆಯ ಮಾತಾಡುವುದು ತಪ್ಪೇ? ವಂದೇ ಮಾತರಂ ಹೇಳುವುದು ತಪ್ಪೇ?" ಎಂಬ ಎಂದಿನ ಮಾತುಗಳೊಂದಿಗೆ "ಅರಿಜಿತ್ ನನ್ನ ಮಗ ಎಂದು ಹೆಮ್ಮೆ ಪಡುತ್ತೇನೆ. ಎಲ್ಲ ಬಿಜೆಪಿ ಕಾರ್ಯಕರ್ತರು ನನ್ನ ಮಕ್ಕಳಿದ್ದ ಹಾಗೆ" ಎಂದಿದ್ದಾರಂತೆ.

ಈ ಗಲಭೆಗಳಲ್ಲಿ ಪೋಲೀಸ್ ಸಿಬ್ಬಂದಿ ಸೇರಿದಂತೆ ಕನಿಷ್ಟ 9 ಮಂದಿ ಗಾಯಗೊಂಡಿದ್ದಾರೆ.

ಕೇರಳದ ಎರಡು ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣ ಪ್ರಯತ್ನ ಕೈ ಬಿಡುವಂತೆ ರಾಜ್ಯ ಸರಕಾರದ ಮನವಿಗೆ ಸ್ಪಂದಿಸದ ಕೇಂದ್ರ ಸರಕಾರ

ಕೇಂದ್ರ ಸರಕಾರ ಕೇರಳದಲ್ಲಿರುವ ಎರಡು ಸಾರ್ವಜನಿಕ ವಲಯದ ಘಟಕಗಳಾದ ಹಿಂದುಸ್ತಾನ್ ಲೈಫ್‌ಕೇರ್ ಲಿಮಿಟೆಡ್(ಹೆಚ್‌ಎಲ್‌ಎಲ್) ಮತ್ತು ಹಿಂದುಸ್ತಾನ್ ನ್ಯೂಸ್‌ಪ್ರಿಂಟ್ಸ್ ಲಿಮಿಟೆಡ್(ಹೆಚ್ ಎನ್‌ಎಲ್) ಇವುಗಳ ಶೇರುಗಳನ್ನು ಮಾರಾಟ ಮಾಡಿ ಅವನ್ನು ಖಾಸಗೀಕರಿಸುವ ನಿರ್ಣಯ ಮಾಡಿತ್ತು. ಇದನ್ನು ವಿರೋಧಿಸಿ ಕೇಂದ್ರ ಹಣಕಾಸು ಮಂತ್ರಿ ಅರುಣ್ ಜೇಟ್ಲಿಗೆ ಫೆಬ್ರುವರಿ 20 ರಂದು ಪಪತ್ರ ಬೆರದಿರುಉವದಾಗಿ ಕೇರಳ ವಿಧಾನಸಭೆಯಲ್ಲಿ ರಾಜ್ಯದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಪ್ರಶ್ನೆಯೊಂದಕ್ಕೆ ಉತ್ತರ ನೀಡುತ್ತ ಹೇಳಿದ್ದಾರೆ. ಭೂಮಿ ಕೊಡುತ್ತೇವೆ, ತೆರಿಗೆ ರೋಯಾಯ್ತಿ ಕೊಡುತ್ತೇವೆ, ಅಗತ್ಯ ಬಂಡವಾಳಕ್ಕೆ ಬ್ಯಾಂಕ್ ಗ್ಯಾರಂಟಿ ಕೊಡುತ್ತೇವೆ ಎಂದು ಹೇಳಿದ್ದರೂ ಕೇಂದ್ರದಿಂದ ಅನುಕೂಲಕರ ಉತ್ತರ ಸಿಕ್ಕಿಲ್ಲ ಎಂದು ಅವರು ಹೇಳಿದರು.

ರಾಜ್ಯದ ಇನ್ನೂ ಕೆಲವು ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮಾರುವ ಸನ್ನಾಹ ನಡೆದಿದೆ. ಅವನ್ನೂ ಉಳಿಸಿಕೊಳ್ಳು ಪ್ರಯತ್ನ ನಡೆದಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು.

ಹೆಚ್‌ಎಲ್‌ಎಲ್ 1966ರಲ್ಲಿ ಹಿಂದುಸ್ತಾನ್ ಲೆಟೆಕ್ಸ್ ಲಿಮಿಟೆಡ್ ಎಂಬ ಹೆಸರಿನಲ್ಲಿ ಆರಂಭವಾಯಿತು. ರಾಜ್ಯ ಸರಕಾರದ ಈ ಉದ್ದಿಮೆಯಲ್ಲಿ ವಿವಿಧ ಸೌಕರ್ಯಗಳನ್ನು ಸ್ಥಾಪಿಸಲು 19 ಎಕ್ರೆ ಜಾಗವನ್ನು ಕೊಟ್ಟಿದೆ. ಇದನ್ನು ಮಿನಿ-ರತ್ನ ಎಂದು ಗುರುತಿಸಲಾಗಿದೆ. ಇದನ್ನು ಖಾಸಗೀಕರಿಸುವ ಯೋಚನೆಯನ್ನು ಕೈಬಿಡಿ ಎಂದು ಕಳೆದ ಜೂನ್ 16ರಂದು ಮುಖ್ಯಮಂತ್ರಿಗಳು ಪ್ರಧಾನ ಂತ್ರಿಗಳಿಗೆ ಪತ್ರ ಬರೆದಿದ್ದರು. ಆದರೆ ಕೇಂದ್ರ ಸರಕಾರ ಖಾಸಗೀಕರಣದ ತನ್ನ ಯೋಜನೆಯನ್ನು ನಿಲ್ಲಿಸುವಂತ ಕಾಣುತ್ತಿಲ್ಲ ಎಂದು ಮುಖ್ಯಮಂತ್ರಿಗಳು ರಾಜ್ಯ ವಿಧಾನ ಸಭೆಗೆ ತಿಳಿಸದರು.

ಸಾಮಾಜಿಕ ನ್ಯಾಯಕ್ಕೆ ಬಗೆವ ಅಪಚಾರ

ಪುಟ 2 ರಿಂದ

ವಾಸ್ತವವಾಗಿ, ಅಧಿಕೃತ ಅಂಕಿ-ಅಂಶಗಳ ಪ್ರಕಾರ, ಐಪಿಸಿಯ ಅಡಿಯಲ್ಲಿ 34% ಮೊಕದ್ದಮೆಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗುತ್ತಿದ್ದರೆ, ಈ ಕಾಯ್ದೆ(ಪಿಒಎ) ಅಡಿಯಲ್ಲಿ ಶಿಕ್ಷೆಯಾಗುವ ಪ್ರಮಾಣ 23% ಮಾತ್ರ. ಆಪಾದಿತರ ಬಂಧನದಲ್ಲಿ ವಿಳಂಬ ದೂರುದಾರರನ್ನು ಬೆದರಿಸಿ ದೂರುಗಳನ್ನು ಹಿಂತೆಗೆದುಕೊಳ್ಳುವಂತೆ ಮಾಡಲು ಅವಕಾಶ ಕಲ್ಪಿಸಿಕೊಡುತ್ತದೆ. ಇದಕ್ಕೆ ಕಾರಣ ಆರೋಪಿಗಳಿಗೆ ಲಭ್ಯವಿರುವ ಅಧಿಕಾರಸ್ಥರ ಬೆಂಬಲ ಮತ್ತು ಪ್ರಭಾವ, ಹಿಂಸಾಚಾರಕ್ಕೆ ಒಳಗಾದವರು ಸಾಮಾಜಿಕವಾಗಿ, ಆರ್ಥಿಕವಾಗಿ ದುರ್ಬಲರಾಗಿರುವುದರಿಂದ ಅವರಿಗೆ ಇವೆಲ್ಲ ಲಭ್ಯವಾಗಿರುವದಿಲ್ಲ ಎಂದು ಡಿಎಸ್‌ಎಂಎಂ ಅಭಿಪ್ರಾಯ ಪಟ್ಟಿದೆ.

ಇಂತಹ ಸನ್ನಿವೇಶದಲ್ಲಿ ಬಂಧನದ ಭಯ ಇಲ್ಲವಾದರೆ ಇಂತಹ ಅತ್ಯಾಚಾರಗಳು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತವೆ, ಇದು ನ್ಯಾಯಕ್ಕೆ ಬಗೆಯುವ ಅಪಚಾರವಾಗುತ್ತದೆ ಎಂದಿರುವ ಡಿಎಸ್‌ಎಂಎಂ ಹಲವು ಕೇಸುಗಳಲ್ಲಿ ಆರೋಪಿಗಳು ಸರಕಾರಿ ನೌಕರರು ಮತ್ತು ಪೋಲೀಸ್ ಇಲಾಖೆಗೆ ಸೇರಿದವರಾಗಿತ್ತಾರೆ, ಸರಕಾರೀ ಕಚೇರಿಗಳು, ಇಲಾಖೆಗಳು ಪಕ್ಷಪಾತದ ತಾಣಗಳಾಗಿವೆ ಎಂಬ ಸಂಗತಿಯತ್ತ ಗಮನ ಸೆಳೆದಿದೆ.

ಆದ್ದರಿಂದ ಕೇಂದ್ರ ಸರಕಾರ ಸುಪ್ರಿಂ ಕೋರ್ಟ್ ತರಬೇಕೆಂದಿರುವ ಬದಲಾವಣೆಗಳನ್ನು ತಡೆಯಲು ಒಂದು ಮರುವಿಮರ್ಶೆ ಅರ್ಜಿಯನ್ನು ಸಲ್ಲಿಸಬೇಕು ಎಂದು ಡಿಎಸ್‌ಎಂಎಂ ಮನವಿ ಮಾಡಿದೆ. ಕೇಂದ್ರ ಸರಕಾರ ಈ ಕಾಯ್ದೆಯ ಎಲ್ಲ ಅಂಶಗಳನ್ನು ಕಟ್ಟುನಿಟ್ಟಾಗಿ ಜ್ಯಾರಿಗೆ ತರಬೇಕು ಎಂದು ಆಗ್ರಹಿಸಿರುವ ಡಿಎಸ್‌ಎಂಎಂ ಎಲ್ಲ ಪ್ರಗತಿಪರ ಮತ್ತು ಪ್ರಜಾಪ್ರಭುತ್ವ ಮನೋಭಾವದ ಜನಗಳು, ಶಾಸಕರು, ಮತ್ತು ಬುದ್ಧಿಜೀವಿಗಳು ಈ ಕಾಯ್ದೆಯನ್ನು ದುರ್ಬಲಗೊಳಿಸುವುದನ್ನು ವಿರೋಧಿಸಬೇಕು ಎಂದು ಕೋರಿದೆ.

ಡಿಎಸ್‌ಎಂಎಂ ಮತಪ್ರದರ್ಶನ

ಪುಟ 2 ರಿಂದ

ಇದರಲ್ಲಿ ಮುಂಚೂಣಿಯಲ್ಲಿದೆ. ರಾಜಸ್ತಾನದಲ್ಲಿ ಅರ್ಧದಷ್ಟು ಅಪರಾಧಗಳು ದಲಿತರ ವಿರುದ್ಧ ನಡೆಯುತ್ತಿವೆ. ಬಿಹಾರದಲ್ಲಿ ಪ್ರತಿ 5 ಅಪರಾಧಗಳಲ್ಲಿ 2 ದಲಿತರ ವಿರುದ್ಧವೇ ಆಗಿರುತ್ತವೆ ಎಂದು ಅವರು ಹೇಳಿದರು.

ಜಾತಿಪದ್ಧತಿಯಿಂದಾಗಿ ಸಮಾಜದಲ್ಲಿ ಬೇರು ಬಿಟ್ಟಿರುವ ಪಕ್ಷಪಾತದ, ಅಮಾನುಷತೆಯ ಮನೋಭಾವ, ಮೇಲರಿಮೆ ಇದಕ್ಕೆ ಕಾರಣವಾಗಿದ್ದು ಇದರ ವಿರುದ್ಧ ಹೋರಾಟದಲ್ಲಿ ಆದಷ್ಟು ಹೆಚ್ಚು ಜನಗಳನ್ನು ಡಿಎಸ್‌ಎಂಎಂ ಬಾವುಟದ ಅಡಿಯಲ್ಲಿ ತರಬೇಕು ಎಂದು ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಎಲ್ಲ ಮುಖಂಡರೂ ಕರೆ ನೀಡಿದರು. ಈ ರ‍್ಯಾಲಿಯ ಬೇಡಿಕೆಗಳು ಹೀಗಿದ್ದವು:

1. ದಲಿತರ ದಮನ, ಅವರ ಮೇಲೆ ಹಿಂಸಾಚಾರ ಹಾಗೂ ಪಕ್ಷಪಾತಗಳನ್ನು ನಿಲ್ಲಿಸಬೇಕು.
2. ಭೀಮ-ಕೋರೆಗಾಂವ್ ಅಪರಾಧಿಗಳನ್ನು ಬಂಧಿಸಬೇಕು, ಬಂಧಿಸಿರುವ ಅಮಾಯಕ ದಲಿತ ಕಾರ್ಯಕರ್ತರನ್ನು ಬಿಡುಗಡೆ ಮಾಡಬೇಕು.
3. ಭೀಮ್ ಸೇನೆಯ ಚಂದ್ರಶೇಖರ ಆಝಾದ್, ಸೋನು ಮತ್ತು ಶಿವಕುಮಾರ್ ಇವರನ್ನು ಬೇಷರತಾಗಿ ಬಿಡುಗಡೆ ಮಾಡಬೇಕು.
4. ದಲಿತರಿಗೆ ಉದ್ಯೋಗ ಮತ್ತು ಖಾಸಗಿ ವಲಯಕ್ಕೆ ಮೀಸಲಾತಿಯ ವಿಸ್ತರಣೆ
5. ಸರಕಾರದಲ್ಲಿ ನೇಮಕಾತಿಯ ಮೇಲಿನ ನಿಷೇಧವನ್ನು ಎಲ್ಲ ಮಟ್ಟಗಳಲ್ಲಿಯೂ ತೆಗೆಯಬೇಕು.
6. ಎಲ್ಲ ದಲಿತ ಮಕ್ಕಳಿಗೆ ಶಿಕ್ಷಣ- ಸ್ಕಾಲರ್‌ಶಿಪ್‌ಗಳಲ್ಲಿ ಏರಿಕೆ.
7. ಪ್ರತಿಯೊಂದು ದಲಿತ ಕುಟುಂಬಕ್ಕೆ ಕನಿಷ್ಟ ಎರಡು ಎಕ್ರೆ ಜಮೀನು ಕೊಡಬೇಕು.
8. ಗುರುನಿರ್ದೇಶಿತ ಕುಟುಂಬಗಳಿಗೆ ಸಾಕಷ್ಟು ಆರೋಗ್ಯಪಾಲನೆ
9. ಪ್ರತಿಯೊಂದು ದಲಿತ ಕುಟುಂಬಕ್ಕೆ ಆಹಾರ ಭದ್ರತೆ ಮತ್ತು ವಸತಿ.



ನವ-ಉದಾರವಾದದ ಸೈದ್ಧಾಂತಿಕ ಬೇಲಿಯನ್ನು ಮುರಿಯಬೇಕು

ಪುಟ 13 ರಿಂದ

ಬಾಧಿಸುತ್ತಿದೆ. ಜಾಗತೀಕರಣ ನೀತಿಗಳಿಂದಾಗಿ ಇಡೀ ಸಮಾಜವೇ? ಸಂಕಷ್ಟಕ್ಕೊಳಗಾಗಿದೆ. ಅದರಲ್ಲೂ, ದಲಿತರ ಪರಿಸ್ಥಿತಿ ಇನ್ನೂ ನಿಕೃಷ್ಟವಾಗಿದೆ(ಕೆಲವು ದಲಿತ ಐಡೆಂಟಿಟಿ ಗುಂಪುಗಳು ಈ ಕಿರು ಉದ್ದಿಮೆಗೆ ಅವಕಾಶ ನೀಡಿ ನವ-ಉದಾರವಾದ ದಲಿತರ ಉದ್ಧಾರಕ್ಕೆ ನೆರವಾಗಿದೆ ಎಂದು ತಪ್ಪಾಗಿ ಭಾವಿಸುತ್ತಾರೆ). ಸೂಕ್ಷ್ಮತೆ ಕಳೆದುಕೊಂಡಿರುವ ಸಮಾಜವು ಗಾಂಪರ ಗುಂಪಾಗುತ್ತಿದೆ. ಪುಂಡು ಪೋಕರಿಗಳು, ತಂಟೆಕೋರರು, ಕಳ್ಳರು, ತಲೆ ಹಿಡುಕರು ಹೆಚ್ಚುತ್ತಿದ್ದಾರೆ. ಇವರನ್ನು ಕೋಮು ಗಲಭೆ ಸೃಷ್ಟಿಸುವವರು ಗಲಭೆಕೋರರಾಗಿ ಬಳಸಿಕೊಳ್ಳುತ್ತಿದ್ದಾರೆ. ಇವರೇ ಫ್ಯಾಸಿಸ್ಟ್ ಶಕ್ತಿಗಳ ಆಯುಧಗಳು!

ವರಮಾನಗಳ, ಸಂಪತ್ತಿನ ಅಸಮಾನತೆ ಮತ್ತು 'ಆಪದ್ರಕ್ಷಕ'ನ ಪ್ರವೇಶ

ನವ-ಉದಾರಿ ಸಿದ್ಧಾಂತವು, ವರಮಾನಗಳ ಅಸಮಾನತೆ ಮತ್ತು ಸಂಪತ್ತಿನ ಅಸಮಾನತೆಗಳಿಗೆ ಉತ್ತೇಜಕವಾಗಿದೆ. ಭಾರತದಲ್ಲಿ, ತುದಿಯಲ್ಲಿರುವ 1% ಶ್ರೀಮಂತರು ದೇಶದ ಸಂಪತ್ತಿನ 73% ಭಾಗ ಪಡೆದಿದ್ದಾರೆ. 1920ರ ದಶಕದಿಂದ ಪರಿಶೀಲಿಸಿದ ಥಾಮಸ್ ಪಿಕೆಟಿಯವರು ಮಾಡಿರುವ ಅಂದಾಜಿನ ಪ್ರಕಾರ, ದೇಶದ ಆದಾಯದಲ್ಲಿ, ತುದಿಯಲ್ಲಿರುವ 1% ಶ್ರೀಮಂತರ ಪಾಲು 1930ರಲ್ಲಿ 21% ಇದ್ದದ್ದು 1980ರ ವೇಳೆಗೆ 6%ಗೆ ಇಳಿದು, ಈಗ 22%ಗೆ ಏರಿದೆ. ಅಂದರೆ ವಸಾಹತುಶಾಹಿ ಆಳ್ವಿಕೆಯಲ್ಲಿನ ಅಸಮಾನತೆ ಮತ್ತೆ ಕಾಣುತ್ತಿದೆ.

ಆರ್ಥಿಕ ಬಿಕ್ಕಟ್ಟಿನ ಸಂದರ್ಭಗಳಲ್ಲಿ, ಅಂತರಾಷ್ಟ್ರೀಯ ಹಣಕಾಸು ಬಂಡವಾಳ ಬೆದರುತ್ತದೆ. ಅದನ್ನು ಸಂತುಷ್ಟಗೊಳಿಸಲು ರಾಷ್ಟ್ರೀಯ ಸರ್ಕಾರಗಳು ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಲು ಮುಂದಾಗುತ್ತವೆ. ಕಾರ್ಮಿಕ ಚಳುವಳಿಯನ್ನು ದುರ್ಬಲಗೊಳಿಸಲಾಗುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ಒಬ್ಬ 'ಆಪದ್ರಕ್ಷಕ' ಬರುತ್ತಾನೆ. ಅವನಿಗೆ ಯಾವುದೇ ಆರ್ಥಿಕ ಕಾರ್ಯಸೂಚಿಯೂ ಇರುವುದಿಲ್ಲ. ಸಮಾಜದ ದ್ವೇಷಕ್ಕೆ ಗುರಿಪಡಿಸಲು 'ಅನ್ಯ'ರೆಂದು ದೂಷಿಸುವ ಒಂದು ಸಮುದಾಯವನ್ನು ಸೃಷ್ಟಿಸಲಾಗುತ್ತದೆ. ಇದು, ಮಧ್ಯಮ ವರ್ಗದ ಒಂದು ವಿಭಾಗಕ್ಕೂ ಮತ್ತು ತಳ ವರ್ಗಗಳ ತಿಳಿಗೇಡಿಗಳಿಗೂ ಬಹಳ ಆಪ್ಯಾಯಮಾನವಾಗುತ್ತದೆ. ಇದೊಂದು ಜಾಗತಿಕ ವಿದ್ಯಮಾನ. ಇದೇ ಫ್ಯಾಸಿಸಂ, ಇದು ದೊಡ್ಡ ಬಂಡವಾಳಶಾಹಿಗಳ ರಕ್ಷಣೆಗಾಗಿ ದುಡಿಯುತ್ತದೆ.

ಎಡ ಶಕ್ತಿಗಳ ಮಧ್ಯ ಪ್ರವೇಶ

ಭಾರತದಲ್ಲಿ, ಪ್ರಜಾಪ್ರಭುತ್ವದ ಎಪ್ಪತ್ತು ವರ್ಷಗಳ ನಂತರ, ಪ್ರಜಾಪ್ರಭುತ್ವದ ಫಲಿತಾಂಶಗಳನ್ನು ಹೊಡೆದು ಹಾಕುವ ಒಂದು ಪ್ರತಿಕ್ರಾಂತಿಯನ್ನು ಹರಿ ಬಿಡಲಾಗಿದೆ. ಈ ಪರಿಸ್ಥಿತಿಯಲ್ಲಿ, ಎಡ ಶಕ್ತಿಗಳು ಸಮರ್ಪಕವಾಗಿ ಮಧ್ಯ ಪ್ರವೇಶಿಸದಿದ್ದರೆ ದೇಶ ಒಳಗಿಂದಲೇ ಸ್ಫೋಟಗೊಳ್ಳುತ್ತದೆ. ಎಡಶಕ್ತಿಗಳು ಕಿರು ಉತ್ಪಾದಕರ ರಕ್ಷಣೆಗೆ ಧಾವಿಸಬೇಕು. ಆಹಾರದ ಹಕ್ಕು, ಸಾರ್ವಜನಿಕ ಶಿಕ್ಷಣ, ಸಾರ್ವಜನಿಕ ಆರೋಗ್ಯ, ಸಹಕಾರೀಕರಣ ಮುಂತಾದ ಪ್ರಶ್ನೆಗಳ ಮೇಲೆ ಮಧ್ಯಮ ವರ್ಗಗಳೂ ಸೇರಿದಂತೆ ವಿವಿಧ ಜನವಿಭಾಗಗಳನ್ನು ಅಣಿನೆರೆಸಬೇಕು ಇದು ನವ-ಉದಾರವಾದ ಹಾಕಿರುವ ಸೈದ್ಧಾಂತಿಕ ಬೇಲಿಯನ್ನು ಮುರಿದು ಹೊರಬಂದರೆ ಮಾತ್ರವೇ ಸಾಧ್ಯ. ಇದೀಗ ಎಡಶಕ್ತಿಗಳ ಮುಂದಿರುವ ಕರ್ತವ್ಯ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಉತ್ತರ ಮತ್ತು ದಕ್ಷಿಣ – ಎರಡು ಕೊರಿಯಾಗಳು ಶಾಂತಿ ಮಾತುಕತೆಗಾಗಿ ದಾಪುಗಾಲು ಇಟ್ಟಿವೆ. ಉತ್ತರ ಕೊರಿಯಾ ಮತ್ತು ದಕ್ಷಿಣ ಕೊರಿಯಾ ಬರುವ ಏಪ್ರಿಲ್‌ನಲ್ಲಿ ತಮ್ಮ ನಾಯಕರುಗಳ 'ಶೃಂಗ ಸಭೆ'ಯನ್ನು ನಡೆಸಲು ಒಪ್ಪಿಕೊಂಡಿವೆ. ಟ್ರಂಪ್ ಮತ್ತು ಕಿಮ್ ಶೃಂಗಸಭೇ ಮೇ ನಲ್ಲಿ ನಡೆಯಲಿದೆ. ಆದರೆ ಎರಡು ಕೊರಿಯಾಗಳು ಶಾಂತಿ ಸೌಹಾರ್ದತೆಯಿಂದ ಬದುಕುವುದು ಅಮೆರಿಕನ್, ಜಪಾನಿ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಬೇಕಿಲ್ಲ. ರದ್ದಾಗಿದ್ದ ಕೊರಿಯಾದ ಹತ್ತಿರದ ವಾರ್ಷಿಕ ಸಮರಾಭ್ಯಾಸ ನಡೆಸಲು ಅಮೆರಿಕದ ನಿರ್ಧಾರ ಏಪ್ರಿಲ್ ಮತ್ತು ಮೇ ಶೃಂಗಸಭೆಗಳ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂದು ಕಾದು ನೋಡಬೇಕು.

ಅಮೆರಿಕ – ಉತ್ತರ ಕೊರಿಯಾ ಮಾತುಕತೆ ?

ಉತ್ತರ ಕೊರಿಯಾದ ಅಧ್ಯಕ್ಷ ಕಿಮ್–ಜುಂಗ್–ಯುನ್ ರನ್ನು ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇ ತಿಂಗಳಲ್ಲಿ ಭೇಟಿ ಮಾಡುವುದಾಗಿ ಆಶಯ ವ್ಯಕ್ತಪಡಿಸಿದ್ದಾರೆ. ಉತ್ತರ ಕೊರಿಯಾದ ಮೇಲಿನ ತನ್ನ ಹಿಂದಿನ "ಯಾವುದೇ ರೀತಿಯ ಸಂಭಾಷಣೆ ನಡೆಸುವ ಮುನ್ನ ಉತ್ತರ ಕೊರಿಯಾವು ತಾನು ಹೊಂದಿರುವ ಅಣ್ವಸ್ತ್ರಗಳನ್ನು ಮೊದಲು ನಾಶಗೊಳಿಸಬೇಕು." ಎಂಬ ನಿಲುವನ್ನು ಬಿಟ್ಟುಕೊಟ್ಟಂತೆ ಕಾಣುತ್ತದೆ. ತನ್ನ ಅಮೆರಿಕಾವು ವಾಸ್ತವಿಕ ಪರಿಸ್ಥಿತಿಗೆ ಅನಿವಾರ್ಯವಾಗಿ ತಲೆ ಬಾಗಿಸಿದಂತಿದೆ. ಇದೊಂದು ಒಳ್ಳೆಯ ಬೆಳವಣಿಗೆ. ಇದರಿಂದ ಈಶಾನ್ಯ ಏಶ್ಯಾ ಮತ್ತು ಇಡೀ ಜಗತ್ತು ಅಣ್ವಸ್ತ್ರ ಯುದ್ಧದ ಭೀತಿಯಿಂದ ಹೊರಬರುವಂತಾಗಿದೆ.

ಉತ್ತರ ಕೊರಿಯಾ ಮತ್ತು ದಕ್ಷಿಣ ಕೊರಿಯಾ ಬರುವ ಏಪ್ರಿಲ್‌ನಲ್ಲಿ ತಮ್ಮ ನಾಯಕರುಗಳ 'ಶೃಂಗ ಸಭೆ'ಯನ್ನು ನಡೆಸಲು ಒಪ್ಪಿಕೊಂಡಿವೆ. ಪ್ರಮುಖವಾಗಿ ದಕ್ಷಿಣ ಕೊರಿಯಾದಲ್ಲಿನ ಜನರ ಮನೋಭಾವವು ಮಿಲಿಟರಿ ವಲಯವನ್ನು ನಾಶಗೊಳಿಸುವತ್ತ ಸಾಗುತ್ತಿದೆ. ಉತ್ತರ ಕೊರಿಯಾದ ಕ್ಷಿಪಣಿಗಳ ಬೆದರಿಕೆಯಿಂದ ಹೊರಬರಲು ಜಪಾನಿನ ಜನರು ಕೂಡ ಉತ್ಸುಕರಾಗಿದ್ದಾರೆ. ಒಟ್ಟಾರೆಯಾಗಿ ಈಶಾನ್ಯ ಏಷಿಯಾದ ಜನರು 'ಶಾಂತಿ ಪ್ರಕ್ರಿಯೆಗಾಗಿ' ಎದುರು ನೋಡುತ್ತಿದ್ದಾರೆ.

ಉತ್ತರ ಮತ್ತು ದಕ್ಷಿಣ – ಎರಡು ಕೊರಿಯಾಗಳು ಶಾಂತಿ ಮಾತುಕತೆಗಾಗಿ ದಾಪುಗಾಲು ಇಟ್ಟಿವೆ. ಈ ವರ್ಷದ ಆರಂಭದಿಂದಲೇ ಹಲವು ಸುತ್ತಿನ ಮಾತುಕತೆಗಳನ್ನು ನಡೆಸಿವೆ. ಚಳಿಗಾಲದ ಒಲಿಂಪಿಕ್ಸನ್ನು ಒಟ್ಟಿಗೆ ನಡೆಸಿದ್ದಾರೆ. ಆ ಒಲಿಂಪಿಕ್ಸಿನಲ್ಲಿ ಎರಡು ಕೊರಿಯಾಗಳ ಜಂಟಿ ತಂಡಗಳು ಭಾಗವಹಿಸಿವೆ. ಈ ಒಲಿಂಪಿಕ್ಸಿನ ಸಂದರ್ಭದಲ್ಲಿ ಸಮರಾಭ್ಯಾಸವನ್ನು ರದ್ದು ಪಡಿಸಲಾಗಿತ್ತು. ಅಮೆರಿಕ ಜಪಾನುಗಳು ಇದಕ್ಕಾಗಿ ಹಟ ಹಿಡಿದಿದ್ದರೂ ದಕ್ಷಿಣ ಕೊರಿಯಾ ದೃಢವಾಗಿ ನಿಂತಿದ್ದು ಉತ್ತಮ ಸನ್ನಿವೇಶ ನಿರ್ಮಿಸಿದೆ. ಎರಡೂ ದೇಶಗಳ ಉನ್ನತ ನಾಯಕರು ಪರಸ್ಪರ ಭೇಟಿ ವಿನಿಮಯ ಮಾಡಿಕೊಂಡಿದ್ದಾರೆ. ಇಂತಹ ಒಂದು ಭೇಟಿಯ ಸಮಯದಲ್ಲೇ ಉತ್ತರ ಕೊರಿಯಾದ ನಾಯಕ ಅಮೆರಿಕ ಶಾಂತಿಯ ಭರವಸೆ ಕೊಡುವುದಾದರೆ ತಮ್ಮ ಅಣ್ವಸ್ತ್ರ ಯೋಜನೆಯನ್ನು ನಿಲ್ಲಿಸುವ ಭರವಸೆ ಕೊಟ್ಟಿದ್ದರು,. ಅದನ್ನು ದ.ಕೊರಿಯಾದ ತಂಡ ಅಮೆರಿಕಕ್ಕೆ ಕಳಿಸಿದ ನಂತರವೇ ಅಮೆರಿಕ ಉ.ಕೊರಿಯಾ ನಾಯಕರ ಭೇಟಿಯ ಸಾಧ್ಯತೆ ಆರಂಭವಾಗಿದ್ದು. ಈ ಏಪ್ರಿಲ್‌ನಲ್ಲಿ ಇಬ್ಬರು ಕೊರಿಯಾದ ನಾಯಕರು ಶೃಂಗಸಭೆಯ ಬಗ್ಗೆ ಭರವಸೆ ನೀಡಿದ್ದಾರೆ.

ಅಮೆರಿಕಕ್ಕೆ ಯಾಕೆ ಆಸಕ್ತಿ?

ಇದು ಕೇವಲ ಒಂದು ಕೊರಿಯಾದ ವಿವಾದವಾಗಿದ್ದರೆ ಪರ್ಯಾಯ ದ್ವೀಪದಲ್ಲಿ ಬಿಕ್ಕಟ್ಟನ್ನೂ ಶಮನಗೊಳಿಸಬಹುದಾಗಿತ್ತು ಎಂಬ ವಿಶ್ವಾಸದ ಮಾತುಗಳು ಕೊರಿಯಾದಲ್ಲಿ ಮೂಡಿಬಂದಿವೆ. ಆದರೆ ಅಮೆರಿಕ ಇದರಲ್ಲಿ ಇರುವುದರಿಂದ ಸಮಸ್ಯೆ ಕ್ಲಿಷ್ಟವಾಗಿದೆ. ಅಮೆರಿಕವು ಕೊರಿಯಾದೊಂದಿಗೆ ಯಾವುದೇ ವ್ಯವಹಾರವನ್ನು ಹೊಂದಿಲ್ಲ. ಜೊತೆಗೆ ಕೊರಿಯಾದೊಂದಿಗೆ ಯಾವುದೇ ಗಡಿಯನ್ನು ಹಂಚಿಗೊಂಡಿಲ್ಲ ಅಥವಾ ಅದರ ಗೋಳಾರ್ಧದಲ್ಲಿಯೂ ಇಲ್ಲ. ಆದರೂ ಸಹ, ಈ ಪರ್ಯಾಯ ದ್ವೀಪದ ರಾಜಕೀಯದಲ್ಲಿ ಅಮೆರಿಕಾಕ್ಕೆ ಏಕೆ ಈ ಆಸಕ್ತಿ?

1940 ರ ಉತ್ತರಾರ್ದದಲ್ಲಿ ಕೊರಿಯಾ ದೇಶದಲ್ಲಿನ ಕಮ್ಯೂನಿಸ್ಟ್ ಕ್ರಾಂತಿಯನ್ನು ತಡೆಗಟ್ಟಲು ಅಮೆರಿಕಾವು ಕೊರಿಯಾದೊಳಗೆ ಪ್ರವೇಶಿಸಿತು. ಕಮ್ಯುನಿಸ್ಟರನ್ನು ಸೋಲಿಸಲು ಜಪಾನಿನ ಬಲಪಂಥೀಯ ಫ್ಯಾಸಿಸ್ಟ್ ರಾಜಕಾರಣಿಗಳೊಂದಿಗೆ ಕೈ ಜೋಡಿಸಿತು. ಆಗ ಅಮೆರಿಕನ್ನರು ಸೃಷ್ಟಿಸಿದ ಈ ಸಂಘರ್ಷವು 1950 ರಿಂದ 1953 ರವರೆಗೂ ನಡೆದು, ಅದು ಇಂದಿನವರೆಗೂ ಹಾಗೆ ಅಸ್ತಿತ್ವದಲ್ಲಿದೆ. ತಾಂತ್ರಿಕವಾಗಿ ಕಮ್ಯುನಿಸ್ಂ ನ ವಿರುದ್ಧದ ಶೀತಲ ಸಮರವಾಗಿ ಇಂದಿಗೂ ಮುಂದುವರಿಯುತ್ತಿದೆ.

ಸೋವಿಯತ್ ಮತ್ತು ಚೀನಿ ವಿಸ್ತರಣೆಯನ್ನು ತಡೆಗಟ್ಟಲು ಹಾಗೂ ಜಪಾನಿನಿಂದ ಪಿಲಿಫೈನ್ಸ್ ವರೆವಿಗೂ, ಅಮೆರಿಕಾದ ಅಧಿಕಾರದ ಪರಿಧಿಯನ್ನು ನಿರ್ಮಿಸಲು ಈಶಾನ್ಯ ಏಷಿಯಾದಲ್ಲಿ ತನ್ನ ಮಿಲಿಟರಿ ಮೂಲ ಸೌಕರ್ಯವನ್ನು ಯು.ಎಸ್. ನಿರ್ಮಿಸಿಕೊಂಡಿತು. ರಷಿಯಾ ಮತ್ತು ಚೀನಾವನ್ನು ಸುತ್ತುವರಿದಂತೆ ಇರುವುದು ಅದರ ಉದ್ದೇಶ. ಇದೀಗ ಜಪಾನಿನ ಬಲ ಪಂಥಿಯ ನಾಯಕನಾಗಿರುವ ಷಿನ್ಜೋ ಅಬೆ, ನೇತೃತ್ವದಲ್ಲಿ ಅಮೆರಿಕದ ದೃಷ್ಟಿಕೋನದಲ್ಲಿಯೇ ಆಡಳಿತ ನಡೆಸುತ್ತಿದ್ದಾರೆ. ಆದ್ದರಿಂದ ಚೀನಾ ಮತ್ತು ರಷಿಯಾದಿಂದ ಬೆದರಿಕೆಗಳನ್ನು ಅಮೆರಿಕಾದೊಂದಿಗೆ ಹಂಚಿಕೊಳ್ಳುತ್ತಿದ್ದಾರೆ. ಜಪಾನ್, ಅಮೆರಿಕಾದ ಮಿಲಿಟರಿ ಗೋಡೆಯನ್ನು ಬಯಸುತ್ತದೆ. ಆ ಹಿನ್ನೆಲೆಯಲ್ಲಿ ಜಪಾನ ತನ್ನ ಸಂವಿಧಾನದಿಂದ ಪರಿಚ್ಛೇದ 9ನ್ನು ತೆಗೆದು ಹಾಕಲು ಪ್ರಯತ್ನಿಸುತ್ತಿದೆ. ಅದರ ಪ್ರಕಾರ ಜಪಾನ್ ಆಕ್ರಮಣಕಾರಿ ಸೇನೆಯನ್ನು ಹೊಂದುವ ಹಾಗಿಲ್ಲ.



ಈಶಾನ್ಯ ಏಷಿಯಾದಲ್ಲಿ : ಯು.ಎಸ್. ಪ್ರಾಬಲ್ಯ

ಈ ಕಾರ್ಯಕ್ರಮದಲ್ಲಿ ಗಂಭೀರವಾದ ಉದ್ದೇಶಗಳನ್ನು ಅಮೆರಿಕ ಮತ್ತು ಜಪಾನ್ ಹೊಂದಿವೆ. ಈಶಾನ್ಯ ಏಷಿಯಾದಲ್ಲಿ ಯು.ಎಸ್. ಪ್ರಾಬಲ್ಯದ ನೀತಿ ಇದಾಗಿದೆ. ಈ ಪ್ರಾದೇಶಿಕ ಭದ್ರತೆ ನಿರ್ಮಿಸಲು ಚೀನಾ ಮತ್ತು ರಷಿಯಾ ಯಾವುದೇ ಪಾತ್ರ ನಿರ್ವಹಿಸಬೇಕು ಎಂದು ಅಮೆರಿಕ ಬಯಸುವುದಿಲ್ಲ. ಟ್ರಂಪ್‌ಗಿಂತ ಮುಂಚೆಯೇ, ಚೀನಿಯರು ಮತ್ತು ಉತ್ತರ ಕೊರಿಯನ್ನ್‌ರು ಈ ಪ್ರದೇಶದಲ್ಲಿ ಮಿಲಿಟರಿ ನೆಲೆ ಹೊಂದಿರುವ ಅಮೆರಿಕಾದ ಮಿಲಿಟರಿ ಉಪಸ್ಥಿತಿಯಿಂದ ಬೆದರಿಕೆಗೆ ಒಳಗಾಗಿದ್ದಾರೆ. ಈ ಪ್ರದೇಶದಲ್ಲಿ ಮಿಲಿಟರಿ ಕಾರ್ಯಾಚರಣೆ ಮುಂದುವರಿಯುತ್ತಿರುವವರೆಗೂ ಭದ್ರತೆಯ ಸಾಧ್ಯತೆಗಳು ಇರುವುದಿಲ್ಲ

ಶಾಂತಿಯ ಪ್ರಕ್ರಿಯೆಗಳಿಗೆ ತಡೆಗೋಡೆಗಳು

ಒಂದು ಕಡೆ ತಾನು ಕಿಮ್ ಯುನ್ ನ್ನು ಮೇ ತಿಂಗಳಲ್ಲಿ ಭೇಟಿಯಾಗುತ್ತೇನೆ ಎಂದು ಟ್ರಂಪ್ ಹೇಳಿದ್ದರೂ ಸಹ ಮತ್ತೊಂದು ಕಡೆ ಶ್ವೇತ ಭವನದ ವಕ್ತಾರರಾದ 'ಸಾರಾ ಸ್ಯಾಂಡರ್ಸ್ ರವರ "ನಾವು ಉತ್ತರಕೊರಿಯಾದ ಪರಮಾಣು ನಾಶವನ್ನು ಎದುರು ನೋಡುತ್ತಿದ್ದೇವೆ. ಯಾವುದೇ ಕಾರಣಕ್ಕೂ ನಿರ್ಬಂಧನೆಗಳು ಸಡಿಲಗೊಳ್ಳುವುದಿಲ್ಲ. ಅವು ಗರಿಷ್ಠ ಒತ್ತಡವನ್ನು ಹಾಕುತ್ತಿರುತ್ತವೆ. ಈಶಾನ್ಯ ಏಷಿಯಾದಲ್ಲಿ ಯು.ಎಸ್. ಮಿಲಿಟರಿ ನಿರ್ಬಂದಗಳನ್ನು ತಗ್ಗಿಸುವುದಿಲ್ಲ" ಎಂಬ ಹೇಳಿಕೆಗಳು ಶಾಂತಿಗೆ ತಡೆಯೊಡ್ಡುತ್ತವೆ. ಬಲಪಂಥೀಯ ಜಪಾನೀಯರ ಸರ್ಕಾರವು ಇದೇ ಭಾಷೆಯನ್ನು ಬಳಸುತ್ತಿದೆ. ಜಪಾನಿನ ರಕ್ಷಣಾ ಸಚಿವ ಇಥುನೊರಿ ಓನೋಡೇರಾ ಅವರು ಮಾತನಾಡುತ್ತಾ, 'ಯಾವುದೇ ಅರ್ಥಪೂರ್ಣ' ಮಾತುಕತೆಗೆ ಮುನ್ನ ಉ.ಕೊರಿಯಾವು ಪರಮಾಣು ಶಸ್ತ್ರಾಸ್ತ್ರಗಳನ್ನೂ ನಾಶಪಡಿಸಬೇಕು ಎಂದಿದ್ದಾರೆ. ಯೋಮಿಯರಿ ಪತ್ರಿಕೆಯು ಉತ್ತರ ಕೊರಿಯಾದೊಂದಿಗೆ ಯಾವುದೇ ಮಾತುಕತೆ 'ಅರ್ಥಹೀನವೆಂದು' ಸೂಚಿಸಿದೆ. ಈ ಎಲ್ಲಾ ಬೆಳವಣಿಗೆಗಳು ಶಾಂತಿಯ ಪ್ರಕ್ರಿಯೆಗಳಿಗೆ ಅಡ್ಡಿಯುಂಟು ಮಾಡಬಹುದೆಂದು ಹಲವರ ಅಭಿಪ್ರಾಯವಾಗಿದೆ. ಎರಡು ಕೊರಿಯಾಗಳು ಶಾಂತಿ ಸೌಹಾರ್ದತೆಯಿಂದ ಬದುಕುವುದು ಅಮೆರಿಕನ್, ಜಪಾನಿ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಬೇಕಿಲ್ಲ.

ಇತ್ತೀಚೆಗೆ (ಮಾ.20) ರದ್ದಾಗಿದ್ದ ಕೊರಿಯಾದ ಹತ್ತಿರದ ವಾರ್ಷಿಕ ಸಮರಾಭ್ಯಾಸ ಸದ್ಯದಲ್ಲೇ ನಡೆಸಲು ಅಮೆರಿಕ ನಿರ್ಧರಿಸುವ ಮೂಲಕ ತನ್ನ ಅಪ್ರಾಮಾಣಿಕತೆ ಯುದ್ಧಕೋರತೆಯನ್ನು ಪುನಃ ರುಜುವಾತು ಮಾಡಿದೆ. ಇದು ಏಪ್ರಿಲ್ ಮತ್ತು ಮೇ ಶೃಂಗಸಭೆಗಳ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂದು ಕಾದು ನೋಡಬೇಕು. ●

"ಜೋಯಿಡಾ: ಕಾಡೊಳಗಿನ ಒಡಲು" ಬಿಡುಗಡೆ... ಪುಟ 16 ರಿಂದ

ಮೇಲೆ ಕಸ್ತೂರಿ ರಂಗನ್ ವರದಿ ಮತ್ತು ಅರಣ್ಯ ಕಾಯ್ದೆಗಳು ಎರಗಿವೆ, ಅರಣ್ಯೋತ್ಪನ್ನಗಳ ಮೇಲೆ ಹಕ್ಕು ಕಳಕೊಳ್ಳುತ್ತಿದ್ದಾರೆ. ಈ ಕಾರಣಕ್ಕಾಗಿಯೇ ದೇಶದ ವಿವಿಧೆಡೆ ಜಲ್, ಜಂಗಲ್, ಜಮೀನ್ ಆಂದೋಲನ ನಡೆಯುತ್ತಿದೆ. ಈ ಭಾಗದಲ್ಲಿ ಕೂಡ ಇಲ್ಲಿಯ ರೈತ ಸಂಘ ಅಂಥ ಸಾಕಷ್ಟು ಹೋರಾಟಗಳನ್ನು ನಡೆಸಿದ ಉದಾಹರಣೆ ಇಲ್ಲಿದೆ. ಲೇಖಕರು ಅಭಿನಂದನಾರ್ಹ ಕೆಲಸ ಮಾಡಿದ್ದಾರೆ." ಎಂದರು.

ಇದಕ್ಕೆ ಮೊದಲು ಕುಣಬಿ ಸಮುದಾಯಕ್ಕೆ ಪ್ರಿಯವಾದ ಹಬ್ಬಲಿಗೆ ಹೂಗಳಿಂದ ಬುಟ್ಟಿಯಲ್ಲಿ ಮುಚ್ಚಲ್ಪಟ್ಟ "ಜೋಯಿಡಾ: ಕಾಡೊಳಗಿನ ಒಡಲು" ಪುಸ್ತಕವನ್ನು ಕಲಾವಿದರಾದ ರತ್ನಾಯ ಕಾರ್ಟೊಳಿ, ದ್ರುಪದಿ ನಾಗರಭಾವಿ, ಕಮಲಾ ಕುಂಡಲ್ ರವರು ಲೇಖಕರಿಗೆ ಮತ್ತು ಅತಿಥಿಗಳಿಗೆ ಕೊಡುವ ಮೂಲಕ ಬಿಡುಗಡೆ ಮಾಡಿದರು.

ಪುಸ್ತಕವನ್ನು ಪರಿಚಯಿಸಿದ ಸಂಶೋಧಕ ಜಯಾನಂದ ಡೇರೇಕರ್ "ಜೋಯಿಡಾದ ಕುರಿತು ಅದರಲ್ಲೂ ಕುಣಬಿ ಸಮುದಾಯದ ಕುರಿತು ಬಹು ಆಯಾಮದಿಂದ ನೋಡಿ ಬರೆದ ಕೃತಿ ಇದು. ಈವರೆಗೆ ಇಂಥದ್ದೊಂದು ಸಮಗ್ರ ಅಧ್ಯಯನ ಬಂದಿರಲಿಲ್ಲ. ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಮತ್ತು ಜೋಯಿಡಾದ ಸಮಗ್ರ ಅಧ್ಯಯನದ ಕುರಿತು ನಡೆಸಿದ ಹಲವು ಹೋರಾಟಗಳನ್ನು ಇಲ್ಲಿ ದಾಖಲಿಸಿದ್ದಾರೆ. ಕುಣಬಿಗಳ ಕಲೆ, ಆಹಾರ, ನಂಬಿಕೆ, ಹಬ್ಬ ಹರಿದಿನ, ಅವರ ಮೂಲ ಇತ್ಯಾದಿಗಳ ಬಗ್ಗೆ ಸವಿವರವಾದ ವಿಮರ್ಶಾತ್ಮಕವಾದ ಒಳನೋಟಗಳನ್ನುಳ್ಳ ಕೃತಿ ಇದಾಗಿದ್ದು ಪ್ರತಿಯೊಬ್ಬರೂ ಇದನ್ನು ಓದಲೇ ಬೇಕಾದ ಅವಶ್ಯಕತೆ ಇದೆ. ಕುಣಬಿಗಳ ಮಧ್ಯೆ ಕೆಲಸ ಮಾಡುತ್ತಿರುವ ನನಗಂತೂ ಈ ಕೃತಿ ತುಂಬಾ ಖುಷಿ ಕೊಟ್ಟಿದೆ." ಎಂದರು. ಸಾಧನಾ ಮಾನವ ಹಕ್ಕುಗಳ ಸಂಸ್ಥೆಯ ಡಾ. ಇಸಬೆಲ್ಲಾದಾಸ್ ಮಾತನಾಡಿ "ಹಾಗೆ ನೋಡಿದರೆ ಜೋಯಿಡಾದ ಹೋರಾಟಕ್ಕೆ ನಾಯಕತ್ವ ಕೊಡಬಹುದಾದ ಕೃತಿ ಇದು. ಇಲ್ಲಿಯ ಅತಿ ಹಿಂದುಳಿದ ಸಮುದಾಯದ ಕುರಿತು ಲೇಖಕರಿಗಿರುವ ಕಾಳಜಿ ಮತ್ತು ಈ ವರೆಗೆ ಅವರು ನಡೆಸಿದ ಹೋರಾಟದ ಅನುಭವ ಈ ಪುಸ್ತಕವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸಿದೆ." ಎಂದರು. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ಶಾಂತಾರಾಮ ನಾಯಕ ಮಾತನಾಡಿ ಈ ಪುಸ್ತಕ ಸಮಗ್ರ ಜೋಯಿಡಾ ಜನತೆಯ ಬದುಕು ಮತ್ತು ಹೋರಾಟದ ಸಮಗ್ರ ದಾಖಲೆಯೂ ಆಗಿದೆ ಎಂದರು.

ಜಾನಪದ ಲೋಕ ಮತ್ತು ಕೊಂಕಣಿ ಸಾಹಿತ್ಯ ಅಕಾಡೆಮಿಯ ಜೀವಮಾನ ಗೌರವ ಪ್ರಶಸ್ತಿಯನ್ನು ಪಡೆದ ಜಾನಪದ ಕಲಾವಿದ ಮತ್ತು ರೈತ ಹೋರಾಟಗಾರ ಮಾದೇವ ವೆಳಿಪ್ ರಿಗೆ ಪರಿಸರ ತಜ್ಞ ಎಸ್.ಎಸ್.ಎನ್ ಸ್ವಾಮಿ ಮತ್ತು ನಮಿಟೋ ಮತ್ತು ಡಾ. ಜಗದೀಶ ಕೊಪ್ಪರವರು ಸನ್ಮಾನಿಸಿದರು.

ಲೇಖಕರಾದ ಡಾ. ವಿಠ್ಠಲ ಭಂಡಾರಿ ಮತ್ತು ಯಮುನಾ ಗಾಂವ್ಕರ್ ಮಾತನಾಡುತ್ತಾ, ಜೋಯಿಡಾದ ಸಮಗ್ರ ಅಭಿವೃದ್ಧಿಗಾಗಿ ನಡೆಸಿದ ಹೋರಾಟದ ಭಾಗವಾಗಿ ಈ ಪುಸ್ತಕ ಬಂದಿದೆ. ಅರಣ್ಯವಾಸಿಗಳಿಗೆ ಭೂಮಿ ಹಕ್ಕು ಸಿಗಬೇಕು ಮತ್ತು ಕುಣಬಿ, ಗೌಳಿಗರಿಗೆ ಬುಡಕಟ್ಟು ಮಾನ್ಯತೆ ನೀಡಿ ಎಲ್ಲಾ ರೀತಿಯ ಸೌಲಭ್ಯ ನೀಡುವಂತಾಗಲು ಇನ್ನಷ್ಟು ಸಂಘಟಿತ ಹೋರಾಟ ತೀವ್ರಗೊಳಿಸಬೇಕಾದ ಅವಶ್ಯಕತೆ ಇದೆ ಎಂದರು. ಪ್ರಾರಂಭದಲಿ ಬುಡಕಟ್ಟು ಕುಣಬಿ ಹಾಡಿನ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪ್ರಾಂತ ರೈತ ಸಂಘದ ತಾಲೂಕು ಕಾರ್ಯದರ್ಶಿ ರಾಜೇಶ ಗಾವಡಾ ಸ್ವಾಗತಿಸಿ ನಿರೂಪಿಸಿದರು, ಆದಿವಾಸಿ ಹಕ್ಕುಗಳ ರಾಷ್ಟ್ರೀಯ ಮಂಚ್ ಉಕ ಜಿಲ್ಲಾ ಸಂಚಾಲಕರಾದ ಪ್ರೇಮಾನಂದ ವೆಳಿಪ್ ವಂದಿಸಿದರು. ●

JANASHAKTHI KANNADA VARA PATRIKE MARCH 26-APRIL 1, 2018 Price: Rs. 10/- Date of Publication: 23 MARCH 2018 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ಕಂದು ಬಣ್ಣದ ಮಹಿಳಾ ಪಾತ್ರಗಳ ಏಪ್ರಿಲ್ ಡಾಟರ್



ಎಂ.ಎಸ್. ಮುರಳಿ ಕೃಷ್ಣ

ಕೆಲವು ಚಲನಚಿತ್ರಗಳನ್ನು ವೀಕ್ಷಿಸುತ್ತಿರುವಾಗ, ಅವುಗಳಲ್ಲಿನ ನಿರ್ದಿಷ್ಟ ಪಾತ್ರಪೋಷಣೆಯ ಬಗೆಗೆ "ಅಯ್ಯೋ", "ಛೇ...ಛೇ", "ಅಸಹ್ಯ" ಎಂಬಂತಹ ಉದ್ಗಾರಗಳನ್ನು ಮಾಡುವ ಸಾಧ್ಯತೆಗಳಿರುತ್ತವೆ. ಆದರೆ ಅಂತಹ ಪಾತ್ರದ ಬಗೆಗೆ ಪುನಃ ಅವಲೋಕಿಸಿದಾಗ, ನಮ್ಮಲ್ಲಿ ಭಿನ್ನ ಭಾವಗಳು ಮೂಡಬಹುದು. ಅಂದರೆ ನಾವು ಚಲನಚಿತ್ರಗಳನ್ನು ವೀಕ್ಷಿಸುವಾಗ ತೆಗೆದುಕೊಂಡ ನಿಲುವಿಗೂ, ನಂತರದ್ದಕ್ಕೂ ವ್ಯತ್ಯಾಸಗಳಿರಬಹುದು. ಇತ್ತೀಚೆಗೆ ಜರುಗಿದ 10ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡ ಮೆಕ್ಸಿಕೊ ದೇಶದ 'ಏಪ್ರಿಲ್ಸ್ ಡಾಟರ್' ಎಂಬ ಚಲನಚಿತ್ರ ಕುರಿತಂತೆ ಮೇಲೆ ಪ್ರಸ್ತಾಪಿಸಿರುವ ಮಿಶ್ರ ಭಾವಗಳಿಗೆ ಪಾತ್ರರಾದರು ನನ್ನ ಕೆಲವು ಗೆಳೆಯರು!

ಕುಟುಂಬದ ಕಡಲ ಕಿನಾರೆಯ ಮನೆಯಲ್ಲಿ ಇಬ್ಬರು ಸಹೋದರಿಯರು ವಾಸ ಮಾಡುತ್ತಿರುತ್ತಾರೆ. ದೊಡ್ಡವಳಾದ ಕ್ಲಾರ(ನಟಿ ಜೋನ್ನಾ ಲರೇಕ್ವಿ) ಮತ್ತು ಚಿಕ್ಕವಳಾದ ವಲೇರಿಯ(ನಟಿ ಆನಾ ವಲೇರಿಯ ಬೆಸಿರಿಲ್) ತಮ್ಮದೇ ಆದ ರೀತಿಯಲ್ಲಿ ಬದುಕನ್ನು ಕಟ್ಟಿಕೊಳ್ಳುತ್ತಿರುತ್ತಾರೆ. ಕಿಶೋರಿಯಾದ ವಲೇರಿಯ ತನ್ನ ಸ್ನೇಹಿತ ಮಟಿಯೊ(ನಟ ಎನ್‌ರಿಖ್ ಅರ್ರಿಝೂನ್)ನಿಂದ ಗರ್ಭ ಧರಿಸಿರುತ್ತಾಳೆ. ಈ ವಿಷಯವನ್ನು ಆಕೆ ತನ್ನ ತಾಯಿಯಾದ ಏಪ್ರಿಲ್(ನಟಿ ಎಮ್ಮ ಸ್ವೂರೆರ್ಝ್)ಗೆ ತಿಳಿಸಿರುವುದಿಲ್ಲ. ಕ್ಲಾರಳಿಂದ ಮಾಹಿತಿ ದೊರೆತ ಏಪ್ರಿಲ್ ಮಗಳ ಮನೆಗೆ ಬರುತ್ತಾಳೆ. ಆಕೆಯ ಆಗಮನ ವಲೇರಿಯಾಗೆ ಇಷ್ಟವಾಗುವುದಿಲ್ಲ. ನಂತರ ತಾಯಿ ಮಗಳಿಬ್ಬರೂ ಪರಸ್ಪರ ಪ್ರೀತಿಯನ್ನು ಹರಿಸುತ್ತಾರೆ! ಚಿಕ್ಕ ವಯಸ್ಸಿನಲ್ಲೇ ತಂದೆಯಾಗುವ ಮಟಿಯೊ ತನ್ನ ಪುಟ್ಟ ಸಂಸಾರವನ್ನು ನಡೆಸಲು ತನ್ನ ತಂದೆಯ ಹೋಟೆಲ್‌ನಲ್ಲೇ ಕೆಲಸವನ್ನು ಮಾಡುತ್ತಾನೆ. ತಂದೆ ಕೆಲಸದಿಂದ ಹೊರಹಾಕಿದಾಗ, ಏಪ್ರಿಲ್ ಗುಪ್ತವಾಗಿ ತನ್ನ ಅಪ್ರಾಪ್ತ ವಯಸ್ಸಿನ ಮಗಳ ಮಗುವನ್ನು ದತ್ತು ತೆಗೆದುಕೊಳ್ಳುತ್ತಾಳೆ! ವಲೇರಿಯಾಳ ಕಣ್ತಪ್ಪಿಸಿ ಮಗುವನ್ನು ಹಾರಿಸಿಕೊಂಡು ಹೋಗುತ್ತಾಳೆ. ಮೆಕ್ಸಿಕೊದಲ್ಲಿ ಮೊದಲು ತನ್ನ ಪರಿಚಯದವರ ಮನೆಯಲ್ಲಿ ಮೊಮ್ಮಗಳನ್ನು ಬಿಡುತ್ತಾಳೆ. ತರುವಾಯ ತಾನೇ ಒಂದು ಮನೆಯನ್ನು ಹುಡುಕಿ ತನ್ನ ಅಳಿಯನನ್ನು ಕರೆತರುತ್ತಾಳೆ. ಆತನ ಜೊತೆ ದೇಹ ಸಂಬಂಧವನ್ನು ಬೆಳೆಸುತ್ತಾಳೆ! ತನ್ನ ವಶದಲ್ಲೇ ಇಟ್ಟುಕೊಳ್ಳುತ್ತಾಳೆ! ಕಡಲ ಕಿನಾರೆಯ ಮನೆಯನ್ನು ಆಕೆ ಮಾರಾಟಕ್ಕಿಟ್ಟಾಗ ವಲೇರಿಯ ತನ್ನ ತಾಯಿ ಮೆಕ್ಸಿಕೊದಲ್ಲಿರುವುದು ತಿಳಿಯುತ್ತದೆ. ಆಕೆ ತನ್ನ ತಾಯಿಯನ್ನು ಹುಡುಕಲು ಹರಸಾಹಸ ಪಡುತ್ತಾಳೆ. ನಂತರ ಸಫಲಳಾಗುತ್ತಾಳೆ. ಆದರೆ ಇದರ ವಾಸನೆ ತಿಳಿದ ಏಪ್ರಿಲ್ ಮಗುವನ್ನು ಹೋಟೆಲ್‌ವೊಂದರಲ್ಲಿ ಬಿಟ್ಟು ಪರಾರಿಯಾಗುತ್ತಾಳೆ! ವಲೇರಿಯ ತನ್ನ ಮಗುವನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆಯಲು ಚಾಲ್ತಿಯಲ್ಲಿರುವ ನಿಬಂಧನೆಗಳ ಅನ್ವಯ ಗಂಡನ ಸಹಾಯ ಬೇಕಾಗುತ್ತದೆ. ನಂತರ ತಮ್ಮ ಊರಿಗೆ ಹಿಂದಿರುಗಲು ಬಸ್ ಸ್ಟ್ಯಾಂಡ್‌ಗೆ ಬರುತ್ತಾರೆ. ಅಲ್ಲಿ ಮಟಿಯೊನನ್ನು ತೊರೆದು, ಮಗುವಿನ ಜೊತೆ ಮುಂದಿನ ತನ್ನ ಜೀವನ ಪಯಣಕ್ಕೆ ಸಜ್ಜಾಗುತ್ತಾಳೆ! ಇದು ಈ ಚಲನಚಿತ್ರದ ಕಥೆಯ ಹಂದರ.

ಇದು ಮೆಕ್ಸಿಕೊದ ಚಲನಚಿತ್ರ ನಿರ್ದೇಶಕ ಮಿಶೆಲ್ ಫ್ರಾಂಕೋವಿನ ಐದನೇ ಸಿನಿಮಾ. ಇವರೇ ಚಿತ್ರಕಥೆಯನ್ನು ಬರೆದಿದ್ದಾರೆ. ಮಹಿಳಾ ಪಾತ್ರಗಳೇ ಈ ಚಲನಚಿತ್ರದ ಜೀವಾಳ. ಆದರೆ ಈತ ಚಲನಚಿತ್ರದುದ್ದಕ್ಕೂ ಹೆಣ್ಣನ್ನು ಕಪ್ಪು-ಬಿಳುಪು ಎಂಬ ಬೈನರಿ ನೆಲೆಯಿಂದ ಕಾಣುವುದಿಲ್ಲ. ಕಂದು ಬಣ್ಣದ ಕಟ್ಟೋಣಕ್ಕೆ ಪ್ರಾಶಸ್ತ್ಯವನ್ನು ನೀಡಿದ್ದಾನೆ. ಎಲ್ಲೂ ತನ್ನ ಪಾತ್ರಗಳ ಬಗೆಗೆ ಜಡ್ಜ್‌ಮೆಂಟಲ್ ಆಗಿಲ್ಲ. ಮೊದಲು ತಾಯಿಯ ವಾತ್ಸಲ್ಯ ಹರಿಸುತ್ತ, ಹಂತ ಹಂತವಾಗಿ ಸ್ವಕೇಂದ್ರಿತ ವರ್ತನೆಯನ್ನು ಅತಿರೇಕ ಎಂದು ಪರಿಗಣಿಸಲ್ಪಡಬಹುದಾದ ರೀತಿಯಲ್ಲಿ ಏಪ್ರಿಲ್ ಪಾತ್ರ ಬೆಳೆಯುತ್ತದೆ! ಅಚ್ಚರಿ ಹುಟ್ಟಿಸುವ ಆಕೆಯ ಕೆಟ್ಟ ನಡವಳಿಕೆ, ಭವಿಷ್ಯದ ಬಗೆಗೆ ಯೋಚಿಸದೆ ಅಪ್ರಾಪ್ತ ವಯಸ್ಸಿನಲ್ಲಿ ತಾಯಿಯಾಗುವ ವಲೇರಿಯಾಳ ಅತಂತ್ರ ಸ್ಥಿತಿ, ವಲೇರಿಯಾಳ ಪರಿಸ್ಥಿತಿಯನ್ನು ತಿಳಿದೂ ಆಕೆಗೆ ಸಹಾಯ ಹಸ್ತವನ್ನು ಚಾಚದ ತಂದೆ(ಏಪ್ರಿಲ್‌ನಿಂದ ಬೇರ್ಪಟ್ಟ), ಮಟಿಯೊನ ನೈತಿಕ ಬಲಹೀನತೆ ಇತ್ಯಾದಿಗಳನ್ನು ನಿರ್ದೇಶಕ 'ಜೀವನದ ವಾಸ್ತವಗಳು' ಎಂಬ ರೀತಿಯಲ್ಲಿ ಸಹಜವಾಗಿ ಬಿಂಬಿಸಿದ್ದಾರೆ! ಈ ನಿಲುವಿಗೆ ಸಮರ್ಥ ಸಾಥ್ ನೀಡಿದೆ ಕ್ಯಾಮರಾ ಕೆಲಸ. ಅಂದರೆ ದೂರದಿಂದ ವೀಕ್ಷಿಸುವ ರೀತಿಯಲ್ಲಿ ಅದನ್ನು ಬಳಸಲಾಗಿದೆ. ಭಾವನೆಗಳನ್ನು ಬಿಂಬಿಸಲು ತೀರ ವಿರಳವಾಗಿ ಕ್ಲೋಸಪ್ ಶಾಟ್‌ಗಳನ್ನು ಬಳಸಲಾಗಿದೆ. ಸಂಗೀತವೂ ಗೌಣವಾಗಿದೆ. ರಿಯಲಿಸ್ಟ್ ಸಿನಿಮಾದ ಪರಿಯಲ್ಲೇ ಇವೆಲ್ಲವನ್ನೂ ಪಾಲಿಸಲಾಗಿದೆ ಎಂದೆನಿಸುತ್ತದೆ! ಹೀಗೆ ಇದೊಂದು ಮಿನಿಮಲಿಸ್ಟ್ ಚಲನಚಿತ್ರವೆನ್ನಬಹುದು. ಈ ಶೈಲಿ ಆಸ್ಟ್ರೀಯಾದ ಪ್ರಸಿದ್ಧ ಚಲನಚಿತ್ರ ನಿರ್ದೇಶಕ ಮೈಖೆಲ್ ಹನೆಕೆಯ ಕೆಲವು ಚಲನಚಿತ್ರಗಳನ್ನು ನೆನೆಪಿಸುತ್ತದೆ!

> ಎಲ್ಲ ಕಲಾ ಪ್ರಕಾರಗಳಂತೆ ಸಿನಿಮಾದಲ್ಲೂ ಸಾಮಾಜಿಕ ವಾಸ್ತವತೆಯೆಂಬುದು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರತಿಫಲನಗೊಳ್ಳುತ್ತಿರುತ್ತದೆ. ಅಭಿವೃದ್ಧಿಶೀಲ ಮೆಕ್ಸಿಕೊ ದೇಶ ಕೂಡ ಅನೇಕ ಸ್ಥಿತ್ಯಂತರಗಳನ್ನು ಕಾಣುತ್ತಿದೆ. ಅವುಗಳಲ್ಲಿ ಕುಟುಂಬ ಜೀವನವೂ ಒಂದು. ನಮ್ಮಲ್ಲಿರುವಂತೆ ಅಲ್ಲಿಯೂ ಸಂಪ್ರದಾಯಶರಣತೆಯಿದೆ; ನವೀನ ಆಲೋಚನೆಗಳ ಹರಹುಗಳೂ ಇವೆ. ಇವೆಲ್ಲದರ ಛಾಯೆ ಈ ಚಲನಚಿತ್ರದಲ್ಲಿದೆ. ಮುಂದುವರೆದ ಸಮಾಜಗಳನ್ನು ಒಳಗೊಂಡು ಎಲ್ಲ ಸಮಾಜಗಳಲ್ಲೂ ಕುಟುಂಬದಲ್ಲಿನ ಮಹಿಳೆಯ ಜವಾಬ್ದಾರಿಗಳ ಬಗೆಗೆ ಹೆಚ್ಚಿನ ನಿರೀಕ್ಷೆಗಳಿರುತ್ತವೆ. ಅವುಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲೇ ಆಕೆ ತನ್ನ ಜೀವನಪರ್ಯಂತ ಹೆಣಗುತ್ತಿರುತ್ತಾಳೆ.

ಎಲ್ಲ ಕಲಾ ಪ್ರಕಾರಗಳಂತೆ ಸಿನಿಮಾದಲ್ಲೂ ಸಾಮಾಜಿಕ ವಾಸ್ತವತೆಯೆಂಬುದು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರತಿಫಲನಗೊಳ್ಳುತ್ತಿರುತ್ತದೆ. ಅಭಿವೃದ್ಧಿಶೀಲ ಮೆಕ್ಸಿಕೊ ದೇಶ ಕೂಡ ಅನೇಕ ಸ್ಥಿತ್ಯಂತರಗಳನ್ನು ಕಾಣುತ್ತಿದೆ. ಅವುಗಳಲ್ಲಿ ಕುಟುಂಬ ಜೀವನವೂ ಒಂದು. ನಮ್ಮಲ್ಲಿರುವಂತೆ ಅಲ್ಲಿಯೂ ಸಂಪ್ರದಾಯಶರಣತೆಯಿದೆ; ನವೀನ ಆಲೋಚನೆಗಳ ಹರಹುಗಳೂ ಇವೆ. ಇವೆಲ್ಲದರ ಛಾಯೆ ಈ ಚಲನಚಿತ್ರದಲ್ಲಿದೆ. ಮುಂದುವರೆದ ಸಮಾಜಗಳನ್ನು ಒಳಗೊಂಡು ಎಲ್ಲ ಸಮಾಜಗಳಲ್ಲೂ ಕುಟುಂಬದಲ್ಲಿನ ಮಹಿಳೆಯ ಜವಾಬ್ದಾರಿಗಳ ಬಗೆಗೆ ಹೆಚ್ಚಿನ ನಿರೀಕ್ಷೆಗಳಿರುತ್ತವೆ. ಅವುಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲೇ ಆಕೆ ತನ್ನ ಜೀವನಪರ್ಯಂತ ಹೆಣಗುತ್ತಿರುತ್ತಾಳೆ. ಆಕೆ ಸ್ವಲ್ಪ ಎಡವಿದರೂ, ದೂಷಣೆಗಳನ್ನು ಎದುರಿಸಬೇಕಾಗುತ್ತದೆ. ಈ ಚಲನಚಿತ್ರವನ್ನು ವೀಕ್ಷಿಸಿದ ತರುವಾಯ ನನ್ನಲ್ಲಿ ಮೇಲೆ ಉಲ್ಲೇಖಿಸಿರುವ ಆಲೋಚನೆಗಳು ಸುಳಿದವು.

ಏಪ್ರಿಲ್‌ನ ಪಾತ್ರ ಸಂಕೀರ್ಣವಾದದ್ದು. ಅದಕ್ಕೆ ತಮ್ಮ ಅಭಿನಯದ ಮೂಲಕ ನ್ಯಾಯವನ್ನು ಒದಗಿಸಿದ್ದಾರೆ ಸ್ಪೈನ್‌ನ ಖ್ಯಾತ ನಟಿ ಎಮ್ಮ ಸೂರ್ವೆಝ್. ವಲೇರಿಯ ಕೂಡ ಸಮರ್ಥವಾಗಿ ನಟಿಸಿದ್ದಾರೆ. ಏಪ್ರಿಲ್ ಯೋಗ ಕ್ಲಾಸ್‌ಗಳನ್ನು ಹಾಗೂ ಸಂಬಂಧಿತ ಚಟುವಟಿಕೆಗಳನ್ನು ನಡೆಸಿದರೂ, ಮೆಕ್ಸಿಕೊ ನಗರದಲ್ಲಿ ಮನೆ ಮಾಡುವಷ್ಟು ಹಣ ಎಲ್ಲಿಂದ ಬಂದಿತು?, ಮಟಿಯೊ ಅಷ್ಟು ಸುಲಭವಾಗಿ ತನ್ನನ್ನು ಏಪ್ರಿಲ್‌ಗೆ ಒಪ್ಪಿಸಿಕೊಂಡುಬಿಡುತಾನಾ? ಎಂಬಿತ್ಯಾದಿ ಪ್ರಶ್ನೆಗಳು ಏಳುತ್ತವೆ. ಈ ತೆರೆನಾದ ಚಲನಚಿತ್ರಗಳು ಸಾಮಾನ್ಯವಾಗಿ ಓಪನ್-ಎಂಡೆಡ್ ಆಗಿರುತ್ತವೆ. ಏಪ್ರಿಲ್ ಡಾಟರ್ ಕೂಡ ಇದಕ್ಕೆ ಹೊರತಾಗಿಲ್ಲ.

2017ರ ಕಾನ್ ಚಲನಚಿತ್ರೋತ್ಸವದ 'ಅನ್ ಸರ್ಟನ್ ರಿಗಾರ್ಡ್' ವಿಭಾಗದಲ್ಲಿ ಪ್ರದರ್ಶಿತಗೊಂಡ, 103 ನಿಮಿಷಗಳ ಈ ಚಲನಚಿತ್ರ ಆ ವಿಭಾಗದ ಜ್ಯೂರಿ ಪ್ರಶಸ್ತಿಯನ್ನು ಪಡೆದುಕೊಂಡಿತು. ●

"ಜೋಯಿಡಾ: ಕಾಡೊಳಗಿನ ಒಡಲು" ಬಿಡುಗಡೆ

ಭಾರತದ ಜನಸಂಖ್ಯೆಯಲ್ಲಿ 14 ಕೋಟಿ ಜನ ಆದಿವಾಸಿಗಳು ಇದ್ದಾರೆ. ಈ ದೇಶದ ರಕ್ತಚರಿತ್ರೆಯಲ್ಲಿ ಆದಿವಾಸಿಗಳದ್ದು ಕರುಣಾಜನಕ ಅನುಭವ. ದೇಶಿ ಜ್ಞಾನ ಇರುವ ಬುಡಕಟ್ಟುಗಳು ವಸಾಹತುಶಾಹಿಗಳ ಎದುರು ಸೋಲನ್ನು ಅನುಭವಿಸಬೇಕಾದ್ದು ದುರಂತ. ನೈಸರ್ಗಿಕ ಸಂಪತ್ತಿನ ನಡುವೆ ಬದುಕುತ್ತಿರುವ ಆದಿವಾಸಿಗಳು ಶಿಕ್ಷಣ ಇಲ್ಲದಿರುವಿಕೆ ಮತ್ತು ಮುಗ್ಧತೆಯ ಕಾರಣಕ್ಕೆ ಅಭಿವೃದ್ಧಿ ಮತ್ತು ಆಣೆಕಟ್ಟು ಸಂಬಂಧಿ ವಿಷಯಗಳಲ್ಲಿ ಬದುಕನ್ನೇ ಕಳಕೊಂಡರು. ರಾಜ್ಯದ ಹಲವಾರು ಕಡೆಗಳಲ್ಲಿ ಆದಿವಾಸಿ ಸಮುದಾಯಗಳು ವಾಸಿಸುತ್ತಿವೆ. ದುರ್ಗಮ ಅರಣ್ಯಗಳಲ್ಲಿ ವಾಸಿಸುವ ಇವರಿಗೆ ಸಂಘಟಿತ ಹೋರಾಟಕ್ಕೆ ಸಾಧ್ಯವಾಗಿಲ್ಲ. ಇವರ ಶಿಕ್ಷಣ ಆರೋಗ್ಯಕ್ಕೆ ಸಂಬಂಧಿಸಿ ಕೆಲವು ಅಧ್ಯಯನಗಳಾಗಿವೆ ಬಿಟ್ಟರೆ ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಅಧ್ಯಯನಗಳು ಹಾಗೂ ಎಚ್ಚರಿಕೆ ಮೂಡಿಸುವ ಬರಹಗಳ ಪುಸ್ತಕಗಳು ಬಂದಿಲ್ಲ. "ಜೋಯಿಡಾ: ಕಾಡೊಳಗಿನ ಒಡಲು" ಪುಸ್ತಕ ಆ ನಿಟ್ಟಿನಲ್ಲಿ ಸಾಕಷ್ಟು ಗಂಭೀರ ಅಧ್ಯಯನ ನಡೆಸಿ ಬರೆದ ಪುಸ್ತಕವಾಗಿದೆ. ಅರಣ್ಯವಾಸಿಗಳ ಸಾಂಸ್ಕೃತಿಕ ಬದುಕು, ದೇಶಿ ಜ್ಞಾನ ಶಿಸ್ತುಗಳ ಬಗ್ಗೆಯೂ ಒಳಗೊಂಡಿರುವ ಈ "ಕಾಡೊಳಗಿನ ಒಡಲು" ಪುಸ್ತಕವು ಅರಣ್ಯ ಹಕ್ಕುಗಳ ಹೋರಾಟಕ್ಕೊಂದು ಮಾರ್ಗದರ್ಶಿ ಹಾಗೂ ಜನಪ್ರತಿನಿಧಿಗಳಿಗೆ ಮತ್ತು ಸರ್ಕಾರಕ್ಕೆ ಕಣ್ಣು ತೆರೆಯಿಸುವ ಉತ್ತಮ ಕೆಲಸ ಈ ಪುಸ್ತಕದಿಂದಾಗಿದೆ." ಎಂದು ಹಿರಿಯ ಪತ್ರಕರ್ತ ಅಂಕಣಕಾರರ ಡಾ. ಜಗದೀಶ ಕೊಪ್ಪ ಅವರು ಹೇಳಿದರು. ಇತ್ತೀಚೆಗೆ ಜೋಯಿಡಾದಲ್ಲಿ ಚಿಂತನ ಉತ್ತರ ಕನ್ನಡ, ಕರ್ನಾಟಕ ಪ್ರಾಂತ ರೈತ ಸಂಘ, ಜೋಯಿಡಾ, ಸಹಯಾನ ಹಾಗೂ ಬಂಡಾಯ ಪ್ರಕಾಶನ ಆಯೋಜಿಸಿದ ಯಮುನಾ ಗಾಂವ್ಕರ್ ಮತ್ತು ಡಾ. ವಿಠ್ಠಲ ಭಂಡಾರಿಯವರು ಅವರು ಬರೆದ "ಜೋಯಿಡಾ: ಕಾಡೊಳಗಿನ ಒಡಲು" ಪುಸ್ತಕ ಬಿಡುಗಡೆ ಮಾಡಿ ಅಭಿಪ್ರಾಯ ವ್ಯಕ್ತಪಡಿಸಿದರು.



ಮುಂದುವರೆದು ಮಾತನಾಡುತ್ತ, ಉತ್ತರ ಕನ್ನಡ ಜಿಲ್ಲೆಯ ಪ್ರಾಕೃತಿಕ ಸಂಪತ್ತು ಏಕಕಾಲದಲ್ಲಿ ವರವು ಸ್ಥಳೀಯರಿಗೆ ಶಾಪವೂ ಆಗಿದ್ದು ಹೌದು. ಕುಣಬಿ ಬುಡಕಟ್ಟು ಸಮುದಾಯವು ಅರಣ್ಯವಾಸಿಯಾಗಿದ್ದು ಯಾವುದೇ ರಾಜಕೀಯ ಆಮಿಷಕ್ಕೆ ಬಲಿಯಾಗದೇ ನಿಸರ್ಗಪರವಾಗಿ ಬದುಕುತ್ತಿರುವವರಾಗಿದ್ದಾರೆ. ಆದರೆ ಇನ್ನೂ ತನಕ ಅಧಿಕೃತ ಬುಡಕಟ್ಟು ಘೋಷಣೆ ಆಗದಿರುವುದು ದುಃಖದ ವಿಷಯ. ಈಗಾಗಲೇ ಇವರ

ಪುಟ 15 ಕ್ಕೆ

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**